

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 25 ಗುರುವಾರ 2024

ಸಂಪುಟ: 45 | ಸಂಚಿಕೆ: 10 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನಾಳೆ ರಾಜ್ಯದ 14 ಕ್ಷೇತ್ರಗಳಲ್ಲಿ ಮೊದಲ ಹಂತದ ಚುನಾವಣೆ

ಮುಕ್ತ, ನ್ಯಾಯಸಮ್ಮತ ಮತದಾನಕ್ಕೆ ಚುನಾವಣಾ ಆಯೋಗ ಕಟ್ಟೆಚ್ಚರ

- ಎಲ್ಲಾ ಕ್ಷೇತ್ರಗಳಲ್ಲಿ ಅರೆಸೇನಾ ಪಡೆ ನಿಯೋಜನೆ; ಎಲ್ಲೆಡೆ ಕಣ್ಗಾವಲು
- 14 ಕ್ಷೇತ್ರಗಳಿಗೆ 5 ಸಾವಿರ ಮೈಕ್ರೋ ಅಬ್ಸರ್ವರ್ಸ್‌ಗಳ ನೇಮಕ



ಮತದಾನ ಸಿದ್ಧತೆ ಸಂಬಂಧ ಸುದ್ದಿಗೋಷ್ಠಿಯಲ್ಲಿ ವಿಷಯ ತಿಳಿಸಿದ ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಮಾತನಾಡಿದರು.

ಬೆಂಗಳೂರು,ಏ.24(ಕೆಎಂಶಿ)– ಏಪ್ರಿಲ್ 26ರಂದು ಚುನಾವಣೆ ನಡೆಯಲಿರುವ ರಾಜ್ಯದ 14 ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮುಕ್ತ, ನ್ಯಾಯಸಮ್ಮತ ಹಾಗೂ ಶಾಂತಿಯುತ ಮತದಾನಕ್ಕಾಗಿ ಅರೆಸೇನಾ ಪಡೆ ಮತ್ತು ಮತಗಟ್ಟೆಗಳಲ್ಲಿ ಕಣ್ಗಾವಲು ವ್ಯವಸ್ಥೆ ಮಾಡಲಾಗಿದೆ.

ಇದೇ ಮೊದಲ ಬಾರಿಗೆ ಮತಗಟ್ಟೆಗಳಿಗೆ ಮೊಬೈಲ್ ನಿಷೇಧಿಸಿರುವ ಆಯೋಗ, ಮತದಾರರ ಎಡಗೈ ತೋರುಬೆರಳಿಗೆ ಅಳಿಸಲಾಗದ ಶಾಯಿ ಬಳಕೆ ಮಾಡುತ್ತಿದೆ. ಹದಿನಾಲ್ಕು ಕ್ಷೇತ್ರಗಳ ವ್ಯಾಪ್ತಿಯಲ್ಲಿ 5,000 ಮೈಕ್ರೋ ಅಬ್ಸರ್ವರ್ಸ್‌ಗಳನ್ನು ನೇಮಿಸಲಾಗಿದೆ. ಮತದಾನ ಸಿದ್ಧತೆ ಸಂಬಂಧ ಸುದ್ದಿಗೋಷ್ಠಿಯಲ್ಲಿ ವಿಷಯ ತಿಳಿಸಿದ ರಾಜ್ಯ ಮುಖ್ಯಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ, 65 ಕಂಪನಿ ಅರೆಸೇನಾ ಪಡೆ ಹಾಗೂ ಅನ್ಯರಾಜ್ಯಗಳ ವಿಶೇಷ ಪೊಲೀಸ್ ಪಡೆಗಳನ್ನು ಭದ್ರತೆಗಾಗಿ ನಿಯೋಜಿಸಲಾಗುತ್ತಿದೆ. ● 10ನೇ ಪುಟಕ್ಕೆ

ಕೆಬಿಜಿಯವರ **ಭೂಮಂತ್ರ...**



ದೇಶಪ್ರೇಮಿಗಳೇ ಹೋಗೋಣ ಬನ್ನಿ ನಾಳೆ ಮತಗಟ್ಟೆಗೆ ■ ಪುಟ–4

ಬೆಂಗಳೂರು ಗ್ರಾಮಾಂತರದಲ್ಲಿ ಅರೆಸೇನಾ ಪಡೆಯ ಕಣ್ಗಾವಲು

- ಈ ಕ್ಷೇತ್ರದ ಎಲ್ಲಾ 2829 ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ
- ಇಲ್ಲಿ ಎನ್‌ಡಿಎನ ಡಾ.ಸಿ.ಎನ್.ಮಂಜುನಾಥ್ V/s ಕಾಂಗ್ರೆಸ್‌ನ ಡಿ.ಕೆ.ಸುರೇಶ್ ಹಣಾಹಣಿ

ಬೆಂಗಳೂರು,ಏ.24(ಕೆಎಂಶಿ)–ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ, ಸಂಸದ ಡಿ.ಕೆ.ಸುರೇಶ್ ಕಣಕ್ಕಿಳಿದಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಚುನಾವಣೆ ಅರೆಸೇನಾ ಪಡೆ ಕಣ್ಗಾವಲಿನಲ್ಲಿ ನಡೆಯಲಿದೆ.

ಡಿ.ಕೆ.ಸುರೇಶ್ ವಿರುದ್ಧ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಅಳಿಯ ಹಾಗೂ ಹೃದಯ ತಜ್ಞ ಡಾ.ಸಿ.ಎನ್.ಮಂಜುನಾಥ್ ಬಿಜೆಪಿ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಮತದಾನ ಏಪ್ರಿಲ್ 26ರ ಶುಕ್ರವಾರದಂದು ನಡೆಯಲಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಕೇಂದ್ರ ಚುನಾವಣಾ ಆಯೋಗ ಕ್ಷೇತ್ರದಲ್ಲಿ ಅತ್ಯಂತ ಬಿಗಿ ಬಂದೋಬಸ್ತ್ ಕೈಗೊಂಡಿದೆ. ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಚುನಾವಣೆ ಮುಗಿಯುವವರೆಗೆ ಏಳು ಅರೆಸೇನಾ ತುಕಡಿ, ನೆರೆ ರಾಜ್ಯದಿಂದ ಬಂದಿರುವ ವಿಶೇಷ ಪೊಲೀಸ್ ದಳ ಹಾಗೂ ಸ್ಥಳೀಯ ಪೊಲೀಸರು ಕಾರ್ಯನಿರ್ವಹಿಸಲಿದ್ದಾರೆ. ಕಿಡಿಗೇಡಿಗಳು ಮತ್ತು ಸಮಾಜಘಾತುಕ ಶಕ್ತಿಗಳನ್ನು ● 10ನೇ ಪುಟಕ್ಕೆ

ಮೊದಲ ಹಂತದ ಮತದಾನ; ನಾಳೆ ಸಾರ್ವತ್ರಿಕ ರಜೆ

ಬೆಂಗಳೂರು, ಏ.24– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಮತದಾನ ನಡೆಯುವ ಏಪ್ರಿಲ್ 26ರಂದು ಎಲ್ಲ ಕಾರ್ಮಿಕರು, ಅರ್ಹ ಮತ ದಾರರು ಮತದಾನ ಮಾಡುವ ಸಲುವಾಗಿ ಸಾರ್ವತ್ರಿಕ ರಜೆ ಘೋಷಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಬಗ್ಗೆ ಕಾರ್ಮಿಕ ಆಯುಕ್ತರು ಆದೇಶವನ್ನು ಹೊರಡಿಸಿದ್ದು, ಏಪ್ರಿಲ್ 26ರ ಶುಕ್ರವಾರ ಕರ್ನಾಟಕ ದಲ್ಲಿ ಮೊದಲ ಹಂತದ ಮತದಾನ ಹಾಗೂ ಮೇ 7ರ ಮಂಗಳವಾರ ಎರಡನೇ ಹಂತದ ಲೋಕಸಭಾ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಎಲ್ಲ ಕಾರ್ಮಿಕರು ಸಹ ಮತದಾನ ಮಾಡಬೇಕಿದೆ. ಹಾಗಾಗಿ ಅಂದು ಕಾರ್ಮಿಕರಿಗೆ ಸಾರ್ವತ್ರಿಕ ● 10ನೇ ಪುಟಕ್ಕೆ

ಕಾಂಗ್ರೆಸ್‌ನಲ್ಲಿ ಒಕ್ಕಲಿಗರು ಮುಖ್ಯಮಂತ್ರಿಯಾಗ್ತಾರೆ!

ಹೊಸ ಬಾಂಬ್ ಸಿಡಿಸಿದ ಸಚಿವ ಕೃಷ್ಣ ಬೈರೇಗೌಡ



ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರದಲ್ಲಿ ಒಕ್ಕಲಿಗರನ್ನು ಒಡೆದು ಆಳಲು ಯತ್ನಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ಒಕ್ಕಲಿಗರು ಮುಖ್ಯಮಂತ್ರಿಯಾಗುತ್ತಾರೆ. ಹೀಗಾಗಿ ಒಕ್ಕಲಿಗರು ಒಗ್ಗಟ್ಟಾಗಿ ಕಾಂಗ್ರೆಸ್‌ಗೆ ಬೆಂಬಲಿಸುವಂತೆ ಸಚಿವ ಕೃಷ್ಣ ಬೈರೇಗೌಡ ಮನವಿ ಮಾಡಿದರು. ಚಿಕ್ಕಬಳ್ಳಾಪುರದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಕೃಷ್ಣ ಬೈರೇಗೌಡ, ಬಿಜೆಪಿಯಲ್ಲಿ ಒಕ್ಕಲಿಗ ನಾಯಕರಿಗೆ ಟಿಕೆಟ್ ಕೊಟ್ಟಿಲ್ಲ. ಕಾಂಗ್ರೆಸ್‌ನಲ್ಲಿ 8 ಒಕ್ಕಲಿಗ ನಾಯಕರಿಗೆ ಟಿಕೆಟ್ ನೀಡಲಾಗಿದೆ. ಭವಿಷ್ಯದಲ್ಲಿ ಒಕ್ಕಲಿಗ ನಾಯಕತ್ವ ಇರಬೇಕೆಂದ್ರೆ ಕಾಂಗ್ರೆಸ್ ಬೆಂಬಲಿಸಿ ಎಂದು ಕರೆ ನೀಡಿದರು.

ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿದ ಒಕ್ಕಲಿಗ ಸಂಘ: ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಹನುಮಂತಯ್ಯ ಅವರು ಮಾತನಾಡಿದ್ದು, ಕಾಂಗ್ರೆಸ್ ಪಕ್ಷ ಒಕ್ಕಲಿಗ ಸಂಘಕ್ಕೆ ಅತೀ ಹೆಚ್ಚು ಕೊಡುಗೆ ನೀಡಿದೆ. ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸು ● 10ನೇ ಪುಟಕ್ಕೆ

ಬಹಿರಂಗ ಪ್ರಚಾರಕ್ಕೆ ತೆರೆ; ಕಡೇ ದಿನ ಅಭ್ಯರ್ಥಿಗಳ ಅಂತಿಮ ಕಸರತ್ತು



ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬುಧವಾರ ವಿರಾಜಪೇಟೆಯಲ್ಲಿ ರೋಡ್ ಶೋ ನಡೆಸಿದರು.

ಮೈಸೂರು, ಏ. 24(ಆರ್‌ಕೆ)– 2024ರ ಲೋಕಸಭಾ ಚುನಾವಣಾ ಬಹಿರಂಗ ಪ್ರಚಾರ ಬುಧವಾರ ಸಂಜೆ 6 ಗಂಟೆಗೆ ಅಂತ್ಯಗೊಂಡಿತು.

ಏಪ್ರಿಲ್ 26ರಂದು ನಡೆಯಲಿರುವ ಚುನಾವಣೆಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಕಾಂಗ್ರೆಸ್‌ನ ಎಂ. ಲಕ್ಷ್ಮಣ ಕಡೇ ದಿನವಾದ ಬುಧವಾರ ಭರ್ಜರಿ ರೋಡ್ ಶೋ ಮೂಲಕ ಮತ ದಾರರ ಸೆಳೆಯಲು ಅಂತಿಮ ಕಸರತ್ತು ನಡೆಸಿದರು. ಇಂದು ಬೆಳಗ್ಗೆ ವಿರಾಜಪೇಟೆಯಲ್ಲಿ ವಿಧಾನಪರಿಷತ್ ಸದಸ್ಯರಾದ ತಾರಾ, ಸುಜಾ ಕುಶಾಲಪ್ಪ, ಮಾಜಿ ಶಾಸಕ ಕೆ.ಜಿ. ಬೋಪಯ್ಯ ಹಾಗೂ ಮುಖಂಡರೊಂದಿಗೆ ತೆರೆದ ವಾಹನದಲ್ಲಿ ರೋಡ್ ಶೋ ಮಾಡಿ ಯದುವೀರ ಚುನಾವಣಾ ಪ್ರಚಾರ ನಡೆಸಿದರು. ಅಲ್ಲಿ ತೆಲುಗರ ಬೀದಿ, ಜೈನ ಸ್ಟ್ರೀಟ್, ದೊಡ್ಡಟ್ಟಿ ಚೌಕಿ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಮತ ಪ್ರಚಾರ ನಡೆಸಿದ ಯದುವೀರ ಅವರಿಗೆ ಜನರು ಪುಷ್ಪಾರ್ಚನೆ ಮಾಡಿ, ಆರತಿ ಬೆಳಗುವ ಮೂಲಕ ಬೆಂಬಲ ವ್ಯಕ್ತಪಡಿಸಿದರು.

ಮಧ್ಯಾಹ್ನದ ನಂತರ ಮೈಸೂರಿನ ಎನ್.ಆರ್. ಮೊಹಲ್ಲಾದಲ್ಲಿ ಬಿಜೆಪಿ ಮುಖಂಡರೊಂದಿಗೆ ರೋಡ್ ಶೋ ನಡೆಸಿದ ಅವರು, ಮೋದಿ ಅವರನ್ನು ಮತ್ತೆ ಪ್ರಧಾನಿ ಮಾಡಲು ತಮಗೆ ● 10ನೇ ಪುಟಕ್ಕೆ





ರಾಜಕುಮಾರ್‌ರ ಚಲನಚಿತ್ರಗಳಲ್ಲಿ ಜೀವನ ಮೌಲ್ಯಗಳು ತುಂಬಿದ್ದವು

ಆರ್.ರಘು ಕೌಟಿಲ್ಯ ಅಭಿಮತ



ಮೈಸೂರು,ಏ.24–ಡಾ.ರಾಜಕುಮಾರ್ ಅವರ ಚಲನಚಿತ್ರಗಳಲ್ಲಿ ಜೀವನ ಮೌಲ್ಯಗಳು ತುಂಬಿದ್ದು, ಅವರ ಬಗ್ಗೆ ಮಾತನಾಡುವುದು ಕನ್ನಡದ ಬಗ್ಗೆ ಮಾತನಾಡಿದಂತಾಗುತ್ತದೆ ಎಂದು ಬಿಜೆಪಿ ಹಿಂದುಳಿದ ವರ್ಗದ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ ಅಭಿಪ್ರಾಯಪಟ್ಟರು.

ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದ ಉದ್ಯಾನದಲ್ಲಿರುವ ಡಾ. ರಾಜಕುಮಾರ್ ಉದ್ಯಾನವನದಲ್ಲಿ ವಿಶ್ವಮಾನವ ಸೇವಾ ಸಮಿತಿ ವತಿಯಿಂದ ಡಾಕ್ಟರ್ ರಾಜಕುಮಾರ್ ಅವರ 96ನೇ ಹುಟ್ಟು ಹಬ್ಬದ ಅಂಗವಾಗಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಆನಂತರ ಅಭಿಮಾನಿಗಳಿಗೆ ಸಿಹಿ ಹಂಚಲಾಯಿತು. ಕನ್ನಡ ಚಲನಚಿತ್ರ ಮೇರು ನಟ ದಿವಂಗತ ಡಾ ರಾಜ್ ಜೀವನದಲ್ಲಿ ನಡೆದು ಬಂದ ಹಾದಿ ಮತ್ತು ಚಿತ್ರರಂಗ'ದಲ್ಲಿ ಅವರು ಕನ್ನಡ ಚಿತ್ರಕ್ಕೆ ನೀಡಿರುವ ಕೊಡುಗೆಯ ಬಗ್ಗೆ ತಿಳಿಸಿದರು. ಗೌರವ ಅಧ್ಯಕ್ಷ ರಾಘವೇಂದ್ರರಾವ್, ಅಧ್ಯಕ್ಷ ಸೇತುರಾಮ್, ಉಪಾಧ್ಯಕ್ಷ ರಮೇಶ್, ಕಾರ್ಯಾಧ್ಯಕ್ಷ ಸುಚೀಂದ್ರ, ನಜರ್‌ಬಾದ್ ನಟರಾಜ್, ನಾಗಶ್ರೀ, ವಿದ್ಯಾ, ಚಕ್ರಪಾಣಿ ಮತ್ತಿತರರು ಉಪಸ್ಥಿತರಿದ್ದರು.

ಹಿನಕಲ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಪಾದಯಾತ್ರೆ ಮೂಲಕ ಮತಯಾಚನೆ

ಮೈಸೂರು, ಏ.24(ಎಂಟಿವೈ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ನನ್ನನ್ನು ಗೆಲ್ಲಿಸಿ ನಿಮ್ಮ ಸೇವೆ ಮಾಡಲು ನನಗೊಮ್ಮೆ ಅವಕಾಶ ಮಾಡಿಕೊಡಬೇಕೆಂದು ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ್ ಮತದಾರರಲ್ಲಿ ಮನವಿ ಮಾಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಹಿನಕಲ್‌ನಲ್ಲಿ ಪಾದಯಾತ್ರೆ ನಡೆಸಿ ಮನೆಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ದೇಶದಲ್ಲಿ ಈ ಬಾರಿ ಕಾಂಗ್ರೆಸ್ ಅಲೆ ಇದ್ದು, ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ಕೋಮುವಾದ ಸುಳ್ಳು ಭರವಸೆಗಳು, ಬೆಲೆ ಏರಿಕೆಯಿಂದ ಜನ ಬೇಸತ್ತು ಈ ಬಾರಿ ಬದಲಾವಣೆ ಬಯಸಿದ್ದಾರೆ. ಕಾಂಗ್ರೆಸ್ ಪಕ್ಷ ನುಡಿದಂತೆ ನಡೆದು ಜನರ ನಂಬಿಕೆಯನ್ನು ಉಳಿಸಿಕೊಂಡಿದೆ. ಕೊಟ್ಟ ಮಾತಿನಂತೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 5 ಗ್ಯಾರಂಟಿಗಳನ್ನು ಅಧಿಕಾರಕ್ಕೆ ಬಂದ 9 ತಿಂಗಳಲ್ಲಿಯೇ ಜಾರಿಗೊಳಿಸಿದೆ. ಈ ಬಾರಿ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬಡ ಕುಟುಂಬದ ಮಹಿಳೆಯರಿಗೆ ವರ್ಷಕ್ಕೆ 1 ಲಕ್ಷ ನೀಡುತ್ತದೆ. ರೈತರ ಸಾಲ ಮನ್ನಾ, ಕೃಷಿ ಮೇಲಿನ ಜಿ.ಎಸ್.ಟಿ. ಮನ್ನಾ, ದಿನಗೂಲಿ ರೂ. 400ಕ್ಕೆ ಏರಿಕೆ, ಯುವಕರಿಗೆ ಉದ್ಯೋಗ, ಇನ್ನೂ ಹಲವಾರು ಭರವಸೆಗಳನ್ನು ನಮ್ಮ ಪಕ್ಷ ನೀಡಿದೆ. ಆದ್ದರಿಂದ ಪ್ರತಿಯೊಬ್ಬ ಮತದಾರರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾದ ನನ್ನನ್ನು ಬೆಂಬಲಿಸಿ ಆಶೀರ್ವದಿಸಿ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು.

ಜಿ.ಪಂ. ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಮಾತನಾಡಿ ಎಂ. ಲಕ್ಷ್ಮಣ್ ಗೆಲುವು ನಿಶ್ಚಿತವಾಗಿದ್ದು, ಸಂವಿಧಾನ ಬದಲಾಯಿಸಲು ಹೊರಟಿರುವ ಬಿಜೆಪಿಗೆ ತಕ್ಕ ಪಾಠ ಕಲಿಸಲು ಪ್ರತಿಯೊಬ್ಬರು ತಪ್ಪದೇ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವ ಮೂಲಕ ಸಿದ್ದರಾಮಯ್ಯನವರ ಕೈಬಲಪಡಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಹಿನಕಲ್ ಹೊನ್ನಪ್ಪ, ಪ್ರಕಾಶ್, ಶ್ರೀನಿವಾಸ, ದೇವಣ್ಣ, ರಾಜಣ್ಣ, ದೇವರಾಜ್, ಕೆ.ಜಿ. ನಾಗರಾಜ್, ಕೆಂಪನಾಯಕ, ದೊಡ್ಡೇಗೌಡ, ಉದಯ್ ಚಂದ್ರಶೇಖರ್, ಪೈಲ್ವಾನ್ ಕುಮಾರ್, ರಟ್ನಳ್ಳಿ ಶಿವಣ್ಣ, ಮಹದೇವ್, ಮಲ್ಲಣ್ಣ, ರಮೇಶ್ ಹೊಟ್ಟೆಗೌಡ, ಮಂಜು, ಗೊರಳ್ಳಿ ಶಿವರಾಮ್ ಇನ್ನಿತರರು ಉಪಸ್ಥಿತರಿದ್ದರು.



ಹಿನಕಲ್‌ನಲ್ಲಿ ಮೈಸೂರು–ಕೊಡಗು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮತ ಯಾಚಿಸಿದರು.



ಇತ್ತೀಚೆಗೆ ಅಪಘಾತದಲ್ಲಿ ಗಾಯಗೊಂಡು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿರುವ ಬಿಜೆಪಿ ಕಾರ್ಯಕರ್ತನನ್ನು ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಶಾಸಕ ಶ್ರೀವತ್ಸ, ಪಕ್ಷದ ನಗರಾಧ್ಯಕ್ಷ ಎಲ್. ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್ ಮಹದೇವಸ್ವಾಮಿ ಜೊತೆಯಲ್ಲಿದ್ದರು.



ಬನ್ನೂರು ಪಟ್ಟಣದ ಕಾವೇರಿ ಸರ್ಕಲ್ ಹೊಸ ನಾಯಕರ ಬೀದಿಯಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಎಸ್.ಬಾಲರಾಜ್ ಪರ ಮತ ಯಾಚಿಸಲಾಯಿತು. ಅಧ್ಯಕ್ಷ ಪ್ರಭಾಕರ್, ಜಿಲ್ಲಾ ಪ್ರಕೋಷ್ಠ ಸಂಚಾಲಕ ಮಹೇಶ ನಾಯಕ, ತಾಲೂಕು ಸಂಚಾಲಕ ಬಿ.ಎನ್.ಕಂಬು, ಮುಖಂಡರಾದ ಸುರೇಶ್, ಮಾಯಿಗೌಡ, ರವಿ, ಸುರೇಶ, ದಾಸಯ್ಯ, ಜೆಡಿಎಸ್–ಬಿಜೆಪಿ ಕಾರ್ಯಕರ್ತರು ಇದ್ದರು.



ಕೊಳ್ಳೇಗಾಲ ಪಟ್ಟಣದ ಸಮೀಪದಲ್ಲಿರುವ ಬಾಪುನಗರದಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್ ಪರ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಆದಿಜಾಂಬವ ಸಮುದಾಯದವರಲ್ಲಿ ಮತಯಾಚಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಆದಿಜಾಂಬವ ಸಂಘದ ವಿಭಾಗೀಯ ಅಧ್ಯಕ್ಷ ಎಡತೊರೆ ಎಂ.ನಿಂಗರಾಜ್, ಚಾಮರಾಜನಗರ ಜಿಲ್ಲಾಧ್ಯಕ್ಷ ಶಿವಮೂರ್ತಿ, ಬಾಲರಾಜ್, ಸೋಮು, ಸಿದ್ದಪ್ಪ, ಪಾಳ್ಯ ರಾಚಪ್ಪ, ಟೆಲಿಫೋನ್ ರಾಚಯ್ಯ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿನಲ್ಲಿ ವಿಶ್ವ ಪುಸ್ತಕ ದಿನಾಚರಣೆ

ಮೈಸೂರು, ಏ.24(ಜಿಎ)–ಮೈಸೂರಿನ ಕನ್ನಡ ಸಾಹಿತ್ಯ ಕಲಾಕೂಟ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ವಿಶ್ವ ಪುಸ್ತಕ ದಿನವನ್ನು ಆಚರಿಸಲಾಯಿತು.

ಈ ವೇಳೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಮಾತನಾಡಿ, ಪುಸ್ತಕ ಸಂಸ್ಕೃತಿಗೆ ಎಂದಿಗೂ ಅಂತ್ಯವಿಲ್ಲ. ಮನುಷ್ಯನಲ್ಲಿ ಜೀವನ ಪ್ರೀತಿ ಇರುವವರೆಗೂ ಹೊತ್ತಿಗೆಯ ಸಂಘ ಇರುತ್ತದೆ. ಪುಸ್ತಕ ಓದುವ ಸಂಸ್ಕೃತಿಯನ್ನು ರಾಜ್ಯಾದ್ಯಂತ ವ್ಯಾಪಿಸುವುದು ಪ್ರಾಧಿಕಾರದ ಗುರಿಯಾಗಿದೆ. ಪ್ರತಿಯೊಬ್ಬರ ಮನೆಯಲ್ಲೂ ಒಂದಾದರೂ ಪುಸ್ತಕಗಳಿರಬೇಕು ಎಂದರು.

ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಮಾತನಾಡಿ, ಜನರ ಜ್ಞಾನ ದಾಹ ಪೂರೈಸುವಲ್ಲಿ ಪುಸ್ತಕಕ್ಕಿಂತ ಅಗತ್ಯವಾದ ವಸ್ತು ಬೇರೊಂದಿಲ್ಲ. ಡಿಜಿಟಲ್ ಯುಗದಲ್ಲಿಯೂ ಭೌತಿಕವಾಗಿ ದೊರೆಯುವ ಪುಸ್ತಕಗಳು ನಮ್ಮಲ್ಲಿ ಉಂಟುಮಾಡುವ ಪರಿಣಾಮ ಭಿನ್ನ. ಪುಸ್ತಕ ಕೊಂಡು ಓದುವ ಸಂಸ್ಕೃತಿ ಹೆಚ್ಚಬೇಕು ಎಂದರು.

ಸಂಸ್ಕೃತಿ ಚಿಂತಕ ಪ್ರಧಾನ ಗುರುದತ್ ಮಾತನಾಡಿ, ಆಧುನಿಕ ಯುಗದಲ್ಲೂ ಜ್ಞಾನಾರ್ಜನೆಯಲ್ಲಿ ಪುಸ್ತಕ ವಿಶ್ವಾಸಾರ್ಹ. ಎಲ್ಲ ಸಂದರ್ಭದಲ್ಲೂ ಪುಸ್ತಕದ ಸಂಘದಲ್ಲಿರುವುದು ನಮ್ಮನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತದೆ ಎಂದರು.

ಈ ಸಂದರ್ಭದಲ್ಲಿ ವಿವಿಧ ಶಾಲೆಗಳಿಗೆ ಡಾ.ಎಂ.ಜಿ.ಆರ್.ಅರಸ್ ಅವರು ಪುಸ್ತಕಗಳನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ ಪತ್ರಕರ್ತ ಎಸ್.ಟಿ.ರವಿಕುಮಾರ್, ಎಂ.ಚಂದ್ರಶೇಖರ್, ಪರಿಷತ್ ಅಧ್ಯಕ್ಷೆ ರತ್ನಾ ಹಾಲಪ್ಪಗೌಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮಹಿಳಾ ದೌರ್ಜನ್ಯ, ಭ್ರಷ್ಟಾಚಾರ ತಡೆಯಲು ಕಾಂಗ್ರೆಸ್ ಬೆಂಬಲಿಸಿ

ಎಎಪಿ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಮನವಿ



ಮೈಸೂರು,ಏ.24(ಜಿಎ)–ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿರುವ ಬಿಜೆಪಿಯನ್ನು ಈ ಬಾರಿ ಜನ ಸೋಲಿಸಬೇಕು, ಸಂವಿಧಾನ ಉಳಿವಿಗಾಗಿ ಬಿಜೆಪಿಗೆ ಮತ ಹಾಕಬಾರದು ಎಂದು ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಕರೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕಾಗಿ ಆರ್‌ಎಸ್‌ಎಸ್ ಹಿಡಿತದಲ್ಲಿ ಇರುವ ಬಿಜೆಪಿ ಸೋಲಿಸಬೇಕು. ಮಹಿಳಾ ದೌರ್ಜನ್ಯ, ಚುನಾವಣಾ ಬಾಂಡ್ ಭ್ರಷ್ಟಾಚಾರ ತಡೆಯಲು ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣರಿಗೆ ಮತ ನೀಡಿ ಎಂದರು.

ಮೋದಿ ಅವರು ಕಳೆದ ಹತ್ತು ವರ್ಷಗಳಲ್ಲಿ ನೀಡಿದ ಭರವಸೆಗಳು ಯಾವುದು ಈಡೇರಿಲ್ಲ. ಅಡುಗೆ ಅನಿಲ, ಇಂಧನಗಳ ಬೆಲೆ ಹೆಚ್ಚಾಗಿದೆ. ಎರಡು ಕೋಟಿ ಉದ್ಯೋಗ ಸೃಷ್ಟಿ ಬದಲು ನಿರುದ್ಯೋಗ ಹೆಚ್ಚಾಗಿದೆ. ನಿರಂತರವಾಗಿ ಸುಳ್ಳು ಹೇಳಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬಂದರೆ ಕಪ್ಪು ಹಣ ವಾಪಸ್ ತಂದು ಖಾತೆಗೆ ಹಣ ಹಾಕುತ್ತೇವೆ ಎಂದಿದ್ದರು. ಆದರೆ, ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಎಂದು ಹೇಳಿ ಬರೀ ಅದಾನಿ ಮತ್ತು ಅಂಬಾನಿ ವಿಕಾಸ್ ಮಾಡಿ ಮುಖೇಶ್ ಅಂಬಾನಿ ಅವರ ಆಸ್ತಿ ಹೆಚ್ಚಾಗಿದೆ. ದೇಶದ ಪಾಲನ್ನು ಶ್ರೀಮಂತರಿಗೆ ನೀಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಚಂದ್ರು ದೂರಿದರು.

ನೋಟು ಅಮಾನ್ಯೀಕರಣ, ಚುನಾವಣೆ ಬಾಂಡ್ ಹಗರಣ ಮೂಲಕ ದೇಶವನ್ನೇ ಸಂಕಷ್ಟಕ್ಕೆ ದೂಡಿ, ಲೀಗಲ್ ಭ್ರಷ್ಟಾಚಾರ ನಡೆಸಿದೆ ಎಂದರು.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಜೈಲಲ್ಲಿರಿಸಿ, ಅವರ ಮಧುಮೇಹ ಕಾಯಿಲೆಗೆ ಇನ್ಸುಲಿನ್ ಕೂಡ ನೀಡದೇ ಶೋಷಿಸಲಾಗುತ್ತಿದೆ. ಇಂಥ ರಾಕ್ಷಸ ಪ್ರವೃತ್ತಿಯ ಪ್ರಧಾನಮಂತ್ರಿ ಮತ್ತು ಗೃಹಮಂತ್ರಿ ಇರಬೇಕಾ, ಬೇಡ್ವಾ ಎಂದು ತೀರ್ಮಾನಿಸುವ ಅಗತ್ಯವಿದೆ ಎಂದು ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಆರ್.ಮೂರ್ತಿ, ಆಮ್ ಆದ್ಮಿ ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಮಾಳವಿಕಾ ಗುಬ್ಬಿವಾಣಿ, ಸೋಸಲೆ ಸಿದ್ಧರಾಜು, ಜಿಲ್ಲಾ ಘಟಕದ ಅಧ್ಯಕ್ಷ ಎಲ್.ರಂಗಯ್ಯ ಉಪಸ್ಥಿತರಿದ್ದರು.



ಡಾ.ರಾಜಕುಮಾರ್ ಜನ್ಮದಿನದ ಪ್ರಯುಕ್ತ ಕುಪ್ಪಣ್ಣ ಪಾರ್ಕ್‌ನಲ್ಲಿರುವ ಅವರ ಪುತ್ಥಳಿಗೆ ಮೈಸೂರು–ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ.ಕೆ.ಪೋತರಾಜ್, ಉಪಾಧ್ಯಕ್ಷ ರಾಜ ಶೇಖರ ಕದಂಬ ಮಾಲಾರ್ಪಣೆ ಮಾಡಿದರು.



ಬುಧವಾರ ಮೈಸೂರಿಗೆ ಆಗಮಿಸಿದ ಎಎಪಿ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಅವರನ್ನು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಮುಖಂಡರಾದ ದಿವಾಕರ್, ಮಹೇಶ್ ಮಡಿವಾಳ, ಕಿರಣ್‌ಕುಮಾರ್ ವಿಶ್ವಕರ್ಮ ಸ್ವಾಗತಿಸಿದರು.

ಎಸ್.ನಮಿತಗೆ ಪಿಹೆಚ್.ಡಿ ಪದವಿ



ಮೈಸೂರು,ಏ.24–ಮೈಸೂರು ವಿಶ್ವವಿದ್ಯಾನಿಲಯವು ಎಸ್.ನಮಿತ ಅವರು ಡಾ.ಎನ್.ಎಸ್.ದೇವಕಿ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ 'Morphological, Phytochemical and Molecular Investigations of a Few Mango (Mangifera indica L.) Varieties' ಸಾದರಪಡಿಸಿದ ಸಸ್ಯಶಾಸ್ತ್ರ ವಿಷಯದ ಆಂಗ್ಲ ಭಾಷೆಯಲ್ಲಿ ಮಹಾಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಮದ್ಯ ನಿಷೇಧ ಹಿನ್ನೆಲೆ: ಖರೀದಿ ಭರಾಟೆ ಜೋರು

ಮೈಸೂರು,ಏ.24(ಪಿಎಂ)– ಮೈಸೂರು–ಕೊಡಗು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರಗಳ ಚುನಾವಣೆಯ ಮತದಾನ ಏ.26ರಂದು ನಡೆಯುವ ಹಿನ್ನೆಲೆಯಲ್ಲಿ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಏ.24ರ ಸಂಜೆ 5 ಗಂಟೆಯಿಂದ ಏ.26ರ ಮಧ್ಯರಾತ್ರಿವರೆಗೆ ಪಾನ ನಿರೋಧ (ಒಣ) ದಿನಗಳೆಂದು ಘೋಷಿಸಲಾಗಿದೆ.

ಹೀಗಾಗಿ ಮೈಸೂರು ನಗರದಲ್ಲಿ ಬಾರ್ ಸೇರಿದಂತೆ ವಿವಿಧ ರೀತಿಯ ಮದ್ಯದಂಗಡಿಗಳಲ್ಲಿ ಮದ್ಯ ಖರೀದಿಗೆ ಮದ್ಯಪ್ರಿಯರು ಮುಗಿಬಿದ್ದಿದ್ದ ಚಿತ್ರಣ ಬುಧವಾರ ಮಧ್ಯಾಹ್ನದಿಂದ ಸಂಜೆವರೆಗೆ ಕಂಡು ಬಂದಿತು. ಜಿಲ್ಲೆಯಾದ್ಯಂತ ಕೂಡ ಇದೇ ರೀತಿಯ ಚಿತ್ರಣ ಇದ್ದಿತು. ಸಂಜೆಯಾಗುತ್ತಿದ್ದಂತೆ ಮದ್ಯಪ್ರಿಯರ ದಟ್ಟಣೆ ಎಲ್ಲೆಡೆ ಭಾರೀ ಪ್ರಮಾಣದಲ್ಲೇ ಕಂಡಿತು.

ಮುಕ್ತ ಮತ್ತು ನ್ಯಾಯಸಮ್ಮತ ಹಾಗೂ ಶಾಂತಿಯುತ ಮತದಾನ ನಡೆಸಬೇಕೆಂಬ ಸದುದ್ದೇಶದಿಂದ ಮದ್ಯ ಮಾರಾಟ ಹಾಗೂ ಸಾಗಾಟಕ್ಕೆ ನಿಷೇಧ ಹೇರಲಾಗಿದೆ. ನಿಷೇಧದ ವಿಷಯ ತಿಳಿದ ಮದ್ಯಪ್ರಿಯರು ಬುಧವಾರ ಮದ್ಯದಂಗಡಿಗಳಿಗೆ ದೌಡಾಯಿಸಿ ಮದ್ಯ ಖರೀದಿಸಿ ಶೇಖರಿಸಿಕೊಂಡಿದ್ದಾರೆ. ಮದ್ಯಕೊಳ್ಳಲು ಮುಗಿದಿದ್ದ ಹಿನ್ನೆಲೆಯಲ್ಲಿ ಬುಧವಾರ ಬಾರ್‌ಗಳು, ವೈನ್‌ಶಾಪ್‌ಗಳೂ ಸೇರಿದಂತೆ ವಿವಿಧ ರೀತಿಯ ಮದ್ಯದಂಗಡಿಗಳಲ್ಲಿ ಮಾರಾಟ ಜೋರಾಗಿತ್ತು. ಬುಧವಾರ ಸಂಜೆ 4.45ರ ವೇಳೆಗೆ ಅಬಕಾರಿ ಹಾಗೂ ಪೊಲೀಸ್ ಅಧಿಕಾರಿಗಳು ಮದ್ಯದಂಗಡಿಗಳ ಬಾಗಿಲು ಮುಚ್ಚಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಮತ್ತು ಚಾಮರಾಜನಗರ ಮದ್ಯವರ್ತಕರ ಸಂಘದ ಪ್ರಧಾನ ಕಾರ್ಯದರ್ಶಿ ಆರ್.ಲಕ್ಷ್ಮಣ್, ಇಂದು ಸಂಜೆ 4.45ಕ್ಕೆ ಎಲ್ಲೆಡೆ ಬಾಗಿಲು ಮುಚ್ಚಿಸಿದರು. ಈ ಹಿಂದಿನ ಇಂತಹ ದಿನಗಳಿಗೆ ಹೋಲಿಸಿದರೆ ಅಂದಿನಂತೆ ಖರೀದಿ ಭರಾಟೆ ಭಾರೀ ಪ್ರಮಾಣದಲ್ಲಿಂತೇನೂ ಇರಲಿಲ್ಲ. ಆದರೂ ಎಂದಿಗಿಂತಲೂ ಇಂದು ಸಾಕಷ್ಟು ಜನ ನಗರದಲ್ಲಿ ಮದ್ಯ ಖರೀದಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಸಿದ್ದರಾಮಯ್ಯ ಕೈಬಲಪಡಿಸಲು ಎಂ.ಲಕ್ಷ್ಮಣರನ್ನು ಗೆಲ್ಲಿಸಿ

ಮುಡಾ ಅಧ್ಯಕ್ಷ ಕೆ. ಮರೀಗೌಡ ಮನವಿ



ಮೈಸೂರು, ಏ.24: ನುಡಿದಂತೆ ನಡೆದು 5 ಗ್ಯಾರಂಟಿಗಳನ್ನು ಅಧಿಕಾರಕ್ಕೆ ಬಂದ 9 ತಿಂಗಳಲ್ಲಿಯೇ ಈಡೇರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯರವರ ಕೈಬಲಪಡಿಸಲು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ ಅವರನ್ನು ಗೆಲ್ಲಿಸಬೇಕೆಂದು ಮುಡಾ ಅಧ್ಯಕ್ಷ ಕೆ. ಮರೀಗೌಡ ಮನವಿ ಮಾಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಭರತ ನಗರದಲ್ಲಿ ಪಾದಯಾತ್ರೆ ನಡೆಸಿ ಮಾತನಾಡಿದ ಅವರು, ಬಿಜೆಪಿ ದೇಶದಲ್ಲಿ ಅಶಾಂತಿ ಮೂಡಿಸುತ್ತಾ, ಹಿಂದು–ಮುಸ್ಲಿಂ ಎಂದು ಜಾತಿಜಾತಿಗಳನ್ನು ಎತ್ತಿಕಟ್ಟಿ, ಕೋಮುಭಾವನೆ ಸೃಷ್ಟಿಸಿ ಅಲ್ಪಸಂಖ್ಯಾತರು ನೆಮ್ಮದಿಯಾಗಿ ಬದುಕದಂತೆ ಮಾಡಿದ್ದಾರೆ. ಸುಳ್ಳು ಭರವಸೆಗಳನ್ನು ನೀಡುತ್ತಾ, ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೇ ಭಾವನಾತ್ಮಕ ಸಂಬಂಧಗಳ ಮೇಲೆ ಮತ ಕೇಳುತ್ತಿದ್ದಾರೆ. ದೇಶದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು 10 ವರ್ಷದಲ್ಲಿ 1 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಕರ್ನಾಟಕದ ವಿಷಯದಲ್ಲಿ ಮಲತಾಯಿ ಧೋರಣೆ ತೋರುತ್ತಿರುವ ಬಿಜೆಪಿ ಪಕ್ಷದ ನಾಯಕರು ಚುನಾವಣೆ ಬಂದಾಗ ಮಾತ್ರ ಕರ್ನಾಟಕಕ್ಕೆ ಬಂದು ಟಾಟಾ ಮಾಡಿ ಹೋಗುತ್ತಾರೆ. ಮೋದಿ ಮುಖ ನೋಡಿ ಮತ ನೀಡಿ ಎನ್ನುತ್ತಾರೆ.

ಇಂತಹವರಿಗೆ ತಕ್ಕ ಪಾಠ ಕಲಿಸಲು ಕೊಟ್ಟ ಮಾತಿನಂತೆ ನಡೆದ ಕಾಂಗ್ರೆಸ್ ಪಕ್ಷಕ್ಕೆ ನಿಮ್ಮ ಬೆಂಬಲವಿರಲಿ. ಕೇಂದ್ರದಲ್ಲಿ ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬಡವರು ನೆಮ್ಮದಿಯಾಗಿ ಜೀವನ ನಡೆಸಬಹುದು. ಆದ್ದರಿಂದ ಎಂ. ಲಕ್ಷ್ಮಣ ಅವರಿಗೆ ಮತ ಚಲಾಯಿಸಿ ಹೆಚ್ಚಿನ ಮತಗಳ ಅಂತರದಿಂದ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಅಬ್ದುಲ್ ಅಜೀಜ್ (ಅಬ್ದುಲ್ಲಾ), ಅಜ್ಮಲ್ ಪಾಷ, ನಾಡನಹಳ್ಳಿ ರವಿ, ಇಮ್ರಾನ್, ಹಯಾತ್, ಸಿಕಂದರ್ ಯೂಸೂಫ್, ರಫೀಕ್, ಟಿಪ್ಪು, ಷಕಿಲ್, ಕುಮಾರ್, ನಾಗರಾಜ್, ಪ್ರಕಾಶ್ ಹಾಜರಿದ್ದರು.

ಅರ್ಜಿ ಆಹ್ವಾನ

ಮೈಸೂರು: 2024–25ನೇ ಸಾಲಿಗೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 6ನೇ ತರಗತಿ ಪ್ರವೇಶಕ್ಕಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು 5ನೇ ತರಗತಿಯಲ್ಲಿ ಶೇ.60ರಷ್ಟು ಅಂಕ ಪಡೆದು ಉತ್ತೀರ್ಣರಾಗಿರಬೇಕು. ಕುಟುಂಬದ ವಾರ್ಷಿಕ ಆದಾಯ 2 ಲಕ್ಷ ರೂ. ಒಳಗಿರಬೇಕು.

ಮೇ 9ರಿಂದ 21ರವರೆಗೆ ತಾಲೂಕು ಕಚೇರಿಗಳಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಿಸಿದ ಕಚೇರಿಗಳಿಗೆ ಮೇ 21ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಮೈಸೂರು, ಹುಣಸೂರು, ಹೆಚ್.ಡಿ.ಕೋಟೆ, ನಂಜನಗೂಡು, ನರಸೀಪುರ ತಾಲೂಕು, ಸಹಾಯಕ ನಿರ್ದೇಶಕರ ಕಚೇರಿ, ಪಿರಿಯಾಪಟ್ಟಣ, ಕೆ.ಆರ್.ನಗರ ಸಮಾಜ ಕಲ್ಯಾಣ ಇಲಾಖೆ ದೂ.ಸಂ: 0821–2427140 ಅನ್ನು ಸಂಪರ್ಕಿಸಬಹುದು.

4 ವರ್ಷದ ಮಗನೊಂದಿಗೆ ತಾಯಿ ನಾಪತ್ತೆ



ಮೈಸೂರು, ಏ. 24–ಮೈಸೂರು ತಾಲೂಕು ಬೆಲವತ್ತ ಗ್ರಾಮದ ನಿವಾಸಿ ಹಾಗೂ ಆಟೋ ಚಾಲಕ ಅವಿನಾಶ್ ಎಂಬವರ ಪತ್ನಿ ಭೂಮಿಕಾ (24) ಮತ್ತು ಪುತ್ರ ವೈಷ್ಣವ್ (4) ಕಾಣೆಯಾಗಿದ್ದಾರೆ. ಭೂಮಿಕಾಗೆ 5 ವರ್ಷದ ಹಿಂದೆ ನವೀನ್ ಎಂಬುವರೊಂದಿಗೆ ಮದುವೆ ಯಾಗಿದ್ದು, ಒಂದು ಮಗುವಿದೆ. ಹೀಗಿರುವಾಗ ವರ್ಷದ ಹಿಂದೆ ನವೀನ್ ಮೃತಪಟ್ಟಿದ್ದು, ನಂತರ ನನಗೆ ಭೂಮಿಕಾ ಪರಿಚಯವಾಗಿ ದೇವಸ್ಥಾನದಲ್ಲಿ ಮದುವೆಯಾಗಿ ಅವಳನ್ನು ಮತ್ತು ಅವಳ ಮಗನನ್ನು ನಮ್ಮ ಮನೆಗೆ ಕರೆದುಕೊಂಡು ಬಂದು ಜೀವನ ನಡೆಸುತ್ತಿದ್ದೆವು. ಹೀಗಿರುವಾಗ ಏ.13ರಂದು ತಾಯಿ ಮತ್ತು ಮಗ ನಾಪತ್ತೆಯಾಗಿದ್ದಾರೆ ಎಂದು ಅವಿನಾಶ್ ದೂರು ನೀಡಿದ್ದಾರೆ. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ದೂ. 0821– 2418315 ಸಂಪರ್ಕಿಸಲು ಮೇಟಗಳ್ಳಿ ಠಾಣೆಯ ಪೊಲೀಸರು ಕೋರಿದ್ದಾರೆ.

ನಿಧನ

ಕೃಷ್ಣವೇಣಮ್ಮ



ಮೈಸೂರು, ಏ. 24– ಮೈಸೂರು ನಗರಪಾಲಿಕೆ 55ನೇ ವಾರ್ಡಿನ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್ ಅವರ ತಾಯಿ ಕೃಷ್ಣವೇಣಮ್ಮ (85) ಬುಧವಾರ ನಿಧನರಾದರು. ಮೃತರು ಏಳು ಮಂದಿ ಮಕ್ಕಳು, ಕುಟುಂಬಸ್ಥರು ಮತ್ತು ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪದ್ಮನಾಭ



ಮೈಸೂರಿನ ವಿಜಯನಗರದ ನಿವಾಸಿ ಹಾಗೂ ಶಿಕ್ಷಣ ಇಲಾಖೆ ನಿವೃತ್ತ ನೌಕಕ ಪದ್ಮನಾಭ (75) ಅವರು ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಆಗಲಿದ್ದಾರೆ ಇವರ ಅಂತ್ಯಕ್ರಿಯೆ ಗೋಕುಲಂನ ಚಿತಾಗಾರದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ


25.04.2024 ಗುರುವಾರ, ಮಳೆ ನಕ್ಷತ್ರ: ಅಶ್ವಿನಿ 13.04.2024 ರಿಂದ 26.04.2024 ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ವಿಶಾಖ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಕೆ.ಎಲ್. ಪ್ರಸನ್ನಾಕ್ಷಿ, 7.15 ಭಾವಗೀತೆಗಳು, 10.00 ಶಾಸ್ತ್ರೀಯ ಸಂಗೀತ– ಸುಮಂತ್ ಮಂಜುನಾಥ್–ವಯೋಲಿನ್ ವಾದನ, 11.00 ಮಿಶ್ರಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆ, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 6.50 ಕೃಷಿರಂಗ–ಕಲ್ಲಂಗಡಿ ಬೇಸಾಯ ಈ ಕುರಿತು ಕೆ. ಆರ್. ನಗರ ತಾಲೂಕು ಮಿರ್ಲೆ ಗ್ರಾಮದ ಎಂ. ಡಿ. ರೋಹಿತ್ ಅವರೊಂದಿಗೆ ಸಂದರ್ಶನ. ಪ್ರಸ್ತುತಿ–ಎನ್.ಕೇಶವಮೂರ್ತಿ, 8.00 ಯುವವಾಣಿ– ಇತ್ತೀಚೆಗೆ ಅಯೋಧ್ಯೆಯಲ್ಲಿ ಜರುಗಿದ 61ನೇ ಅಖಿಲ ಭಾರತೀಯ ಶಾಸ್ತ್ರೀಯ ಸ್ಪರ್ಧಾ– ಸಂಸ್ಕೃತ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಮೈಸೂರಿನ ಕೃಷ್ಣಾಚಾರ್ಯ ಪಿ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ನಾಟಕ 'ಅತಿಥಿ', ಮೂಲ ಇಂಗ್ಲೀಷ್–ರೂಪರ್ಟ್ ಬ್ರೂಕ್, ಕನ್ನಡ ರೂಪಾಂತರ–ಪಾರ್ವತಿ ಜಿ. ಐತಾಳ್, ನಿರ್ಮಾಣ –ಡಾ. ಎಂ. ಶರಭೇಂದ್ರಸ್ವಾಮಿ, 10.30 ಸವಿನೆನಪು

- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ರವರೆಗೆ
- **ಕಾದಂಬರಿ ಏಜೆನ್ಸೀಸ್ ಮತ್ತು ವಿಕಲ ವಿಕಾಸ ಟ್ರಸ್ಟ್ :** ಮಕ್ಕಳ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂ.45, ಕೆ.ಆರ್. ಸರ್ಕಲ್, ದೇವರಾಜ ಅರಸು ರಸ್ತೆ, ಸಂಜೆ 5.30ಕ್ಕೆ
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ವಿದ್ಯಾವರ್ಧಕ ಸಂಘ:** ವಶಿಷ್ಟ–2024, ಮುಖ್ಯ ಅತಿಥಿಗಳು: ಇಸ್ರೋ ಮಾಜಿ ವಿಜ್ಞಾನಿ ಡಾ.ಜಗನ್ನಾಥ ವೆಂಕಟರಾಮಯ್ಯ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಸ್ಥಳ: ಸಾಹುಕಾರ್ ಚನ್ನಯ್ಯ ಸಭಾಂಗಣ, ವಿದ್ಯಾವರ್ಧಕ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ
- **ಶ್ರೀ ರಾಮಸೇವಾ ಮಂಡಲಿ :** 71ನೇ ವರ್ಷದ ಶ್ರೀ ರಾಮೋತ್ಸವ, ವಿದ್ವಾನ್ ಸಂಪಗೋಡು ಎಸ್. ವಿಘ್ನರಾಜ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀರಾಮ ಸೇವಾ ಮಂಡಲಿ, 9ನೇ ಅಡ್ಡ ರಸ್ತೆ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.
- **ಶ್ರೀ ರಾಮಾಭ್ಯುದಯ ಸಭಾ, ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ತ್ರಿಚೂರ್ ಬ್ರದರ್ಸ್ ವಿದ್ವಾನ್ ಕೃಷ್ಣ ಮೋಹನ್ ಮತ್ತು ವಿದ್ವಾನ್ ರಾಮ್‌ಕುಮಾರ್ ಮೋಹನ್ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ತ್ರಿಚೂರ್ ಆರ್. ಮೋಹನ್–ಮೃದಂಗ, ವಿದ್ವಾನ್ ಬಿ. ಕೋವೈ ಸುರೇಶ್ –ಮೋರ್ಚಿಂಗ್, ಸ್ಥಳ: ಶ್ರೀರಾಮಮಂದಿರ, ವಿನೋಬ ರಸ್ತೆ, ಶ್ರೀರಾಮಪೇಟೆ ಸಂಜೆ 6.30 ರಿಂದ.
- **ಶ್ರೀರಾಮಮಂದಿರ:** 58ನೇ ವರ್ಷದ ರಾಮೋತ್ಸವ, ಬೆಳಗ್ಗೆ 7ಕ್ಕೆ ಶ್ರೀ ಲಕ್ಷ್ಮೀ ಸಮೇತ ಶ್ರೀ ಸತ್ಯನಾರಾಯಣ ಹೋಮ, ಸಂಜೆ 6.30ಕ್ಕೆ ಶ್ರೀ ಶಾರದಾ ಪ್ರತಿಷ್ಠಾನದಿಂದ ವಾದ್ಯ ಲಯ ಗೋಷ್ಠಿ, ಸ್ಥಳ: ರಾಮಮಂದಿರ ಆವರಣ, ಜಯನಗರ.



ಇಂದು ಬೆಳಗ್ಗೆಯಿಂದ ಮಸ್ಟರಿಂಗ್ ಪ್ರಕ್ರಿಯೆ

ಮೈಸೂರು, ಏ. 24(ಆರ್‌ಕೆ)– ಏಪ್ರಿಲ್ 26ರಂದು ನಡೆಯಲಿರುವ ಮತದಾನದ ಹಿನ್ನೆಲೆಯಲ್ಲಿ ನಾಳೆ (ಏ. 25) ಬೆಳಗ್ಗೆ 8 ಗಂಟೆಯಿಂದ ಮೈಸೂರು ನಗರ, ಜಿಲ್ಲೆ ಯಾದ್ಯಂತ ಮಸ್ಟರಿಂಗ್ ಪ್ರಕ್ರಿಯೆ ನಡೆಯಲಿದೆ.

ಮೈಸೂರಿನ ನರಸಿಂಹರಾಜ ವಿಧಾನ ಸಭಾ ಕ್ಷೇತ್ರದ ಊಟಿ ರಸ್ತೆಯ ಜೆಎಸ್‌ಎಸ್ ಕಲಾ ಮತ್ತು ವಿಜ್ಞಾನ ಕಾಲೇಜು, ಚಾಮ ರಾಜ ಕ್ಷೇತ್ರದ ಬೇಡನ್ ಪೋವೆಲ್ ಶಾಲೆ, ಶತಮಾನೋತ್ಸವ ಭವನ, ಕೃಷ್ಣರಾಜ ಕ್ಷೇತ್ರ ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಚಾಮುಂಡೇಶ್ವರಿ ಕ್ಷೇತ್ರದ ಮಹಾರಾಣಿ ಕಲಾ ಕಾಲೇಜು, ನಂಜನಗೂಡಿನ ಸರ್ಕಾರಿ ಬಾಲಕರ ಜೂನಿಯರ್ ಕಾಲೇಜು, ಹೆಚ್.ಡಿ.ಕೋಟೆಯ ಸೇಂಟ್ ಮೇರೀಸ್ ಪ್ರೈಮರಿ ಶಾಲೆ, ಹುಣಸೂರಿನ ಸೇಂಟ್ ಜೋಸೆಫ್ ಪಿಯು ಕಾಲೇಜು, ಕೆ.ಆರ್. ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಪಿರಿಯಾಪಟ್ಟಣದ ಪುಷ್ಪಾ ಕಾನ್ವೆಂಟ್ ಕೇಂದ್ರಗಳಲ್ಲಿ ಮಸ್ಟರಿಂಗ್ ಪ್ರಕ್ರಿಯೆ ನಡೆಯಲಿದೆ.

ಆಯಾ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಗಳು, ಮತಗಟ್ಟೆ ಅಧಿಕಾರಿಗಳು, ಸಿಬ್ಬಂದಿಗಳಿಗೆ ಮತದಾನ ಪ್ರಕ್ರಿಯೆ ವೇಳೆ ಅನುಸರಿಸ ಬೇಕಾದ ನಿಯಮ, ಜವಾಬ್ದಾರಿಗಳ ಬಗ್ಗೆ ಅಂತಿಮ ಹಂತದ ತರಬೇತಿ ನೀಡಿ ದಾಖಲೆ ಪತ್ರ, ಲೇಖನ ಸಾಮಗ್ರಿಗಳು, ಇವಿಎಂ ಹಸ್ತಾಂತರಿಸಿ ಭದ್ರತಾ ಸಿಬ್ಬಂದಿಗಳೊಂದಿಗೆ ಮತಗಟ್ಟೆಗಳಿಗೆ ಕಳುಹಿಸಿ ಕೊಡುವರು.

ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಸಂಜೆ ವೇಳೆಗೆ ಮತಗಟ್ಟೆ ಸಿಬ್ಬಂದಿ, ರಾತ್ರಿ ವಾಸ್ತವ್ಯ ಹೂಡಿ, ಮರುದಿನ (ಏ. 26) ಬೆಳಗ್ಗೆ 5.30ರಿಂದ ಇವಿಎಂಗಳಲ್ಲಿ ತಾಲೀಮು ಮತದಾನ ಮಾಡಿ ಸರಿಯಾಗಿ ಕೆಲಸ ಮಾಡುತ್ತಿರುವ ಬಗ್ಗೆ ದೃಢಪಡಿಸಿಕೊಂಡು ಮತದಾನಕ್ಕೆ ಸಜ್ಜುಗೊಳಿಸುವರು.

ಅಂದು ಸಂಜೆ 6 ಗಂಟೆಯೊಳಗೆ ಮತಗಟ್ಟೆ ಆವರಣ ಪ್ರವೇಶಿಸುವ ಪ್ರತಿಯೊಬ್ಬ ಮತದಾರರಿಗೆ ಮತದಾನ ಮಾಡಲು ಅವಕಾಶ ಕಲ್ಪಿಸಿಕೊಟ್ಟು ನಂತರ ಪ್ರಕ್ರಿಯೆ ಮುಕ್ತಾಯಗೊಳಿಸುವ ಸಹಾಯಕ ಚುನಾವಣಾಧಿಕಾರಿಗಳು, ಇವಿಎಂ, ವಿವಿ ಪ್ಯಾಟ್‌ಗಳನ್ನು ಮೈಸೂರಿನ ಮಹಾರಾಣಿ ಸರ್ಕಾರಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಮತ ಎಣಿಕಾ ಕೇಂದ್ರದ ಸ್ಟ್ರಾಂಗ್ ರೂಂಗೆ ತಂದು ಇರಿಸಿ, ಜಿಲ್ಲಾ ಚುನಾವಣಾಧಿಕಾರಿ, ವೀಕ್ಷಕರ ಸಮ್ಮುಖದಲ್ಲಿ ಸೀಲ್ ಮಾಡುವರು.

ಯಾವುದೇ ಪ್ರಾಕ್ಟಿಕಲ್ ಜ್ಞಾನ ಇಲ್ಲದ ವ್ಯಕ್ತಿ: ರಾಹುಲ್ ವಿರುದ್ಧ ದೇವೇಗೌಡ ವಾಗ್ದಾಳಿ

ಬೆಂಗಳೂರು, ಏ.24– ಯಾವುದೇ ಪ್ರಾಕ್ಟಿಕಲ್ ಜ್ಞಾನವಿಲ್ಲದವರು ಮಾತ್ರ ಆ ರೀತಿ ಮಾತನಾಡಲು ಸಾಧ್ಯ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಬುಧವಾರ ಕಟುವಾಗಿ ಟೀಕಿಸಿದ್ದಾರೆ.

ಯಾವುದೇ ಕಾರಣಕ್ಕೂ ತಾವು ಅಧಿಕಾರಕ್ಕೆ ಬರುವುದಿಲ್ಲ ಎಂದು ಖಚಿತ ವಾಗಿರುವ ಪಕ್ಷ ಮಾತ್ರ ಈ ರೀತಿ ಅನೇಕ ಭರವಸೆಗಳನ್ನು ನೀಡಬಲ್ಲದು ಎಂದು ಅವರು ಕಾಂಗ್ರೆಸ್ ಪ್ರಣಾಳಿಕೆ ಯನ್ನು ಲೇವಡಿ ಮಾಡಿದ್ದಾರೆ.

ಇಂದು ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ದೇವೇಗೌಡರು, ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಹಲವು ಭರವಸೆಗಳನ್ನು ನೀಡಿದೆ. ಆದರೆ ಎಂದಿಗೂ ಅಧಿಕಾರಕ್ಕೆ ಬರುವುದಿಲ್ಲ ಎಂದು ಖಚಿತವಾಗಿ ಗೊತ್ತಿರುವ ಏಕೈಕ ಪಕ್ಷ ಮಾತ್ರ ಇಷ್ಟು ಭರವಸೆ ನೀಡುತ್ತದೆ ಎಂದರು. ಕಾಂಗ್ರೆಸ್ ಈ ದೇಶವನ್ನು ತಲೆಕೆಳಗಾಗಿ ಮಾಡಲು ಬಯಸುತ್ತಿದೆ ಮತ್ತು ಅದು ನೀಡಿದ ಯಾವುದೇ ಭರವಸೆಗಳು ಈಡೇರಿಸಲು ಸಾಧ್ಯವಿಲ್ಲ. ರಾಹುಲ್ ಗಾಂಧಿ ಅವರು ಸಂಪತ್ತು ಸಮೀಕ್ಷೆ ಮಾಡಿ, ಮರು ಹಂಚಿಕೆ ಮಾಡಲು ಬಯಸುತ್ತಿದ್ದಾರೆ. ಅವರು ತಮ್ಮನ್ನು ತಾವು ಮಾಸ್ ಲೀಡರ್ ಎಂದು ಭಾವಿಸಿದ್ದಾರೆಯೇ? ಎಂದು



ದೇವೇಗೌಡರು ಪ್ರಶ್ನಿಸಿದರು. ರಾಹುಲ್ ಗಾಂಧಿ ಕ್ರಾಂತಿಯ ಕನಸು ಕಾಣುತ್ತಿದ್ದಾರೆ. ಸಂಪತ್ತು ಮರುಹಂಚಿಕೆ ಬಗ್ಗೆ ಮಾತನಾಡುವ ಮೂಲಕ, ಮಾರುಕಟ್ಟೆ ಸುಧಾರಣೆಗಳನ್ನು ತಂದು ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಿದ ಇಬ್ಬರು ಕಾಂಗ್ರೆಸ್ ಪ್ರಧಾನಿಗಳನ್ನು ರಾಹುಲ್ ಗಾಂಧಿ ಅವಮಾನಿಸಿದ್ದಾರೆ ಎಂದು ಪಿವಿ ನರಸಿಂಹರಾವ್ ಮತ್ತು ಮನಮೋಹನ್ ಸಿಂಗ್ ಅವರ ಕೊಡುಗೆಯನ್ನು ದೇವೇಗೌಡರು ಸ್ಮರಿಸಿದರು. ಕಾಂಗ್ರೆಸ್ ಪ್ರಣಾಳಿಕೆ ನ್ಯಾಯ ಪತ್ರದಿಂದ ಕೆಲವು ಅಂಶಗಳನ್ನು ಪ್ರಸ್ತಾಪಿಸಿದ ದೇವೇಗೌಡರು, ರಾಹುಲ್ ಗಾಂಧಿ ಅವರು 30 ಲಕ್ಷ ಹೊಸ ಕೇಂದ್ರ ಸರ್ಕಾರಿ ಉದ್ಯೋಗಗಳನ್ನು ನೀಡುವ ಭರವಸೆ ನೀಡಿದ್ದಾರೆ. ಆದರೆ ಕೇವಲ 40 ಲಕ್ಷ ಉದ್ಯೋಗಗಳು ಮಂಜೂರಾಗಿವೆ. ಅವರು ರಾತ್ರೋರಾತ್ರಿ 30 ಲಕ್ಷ ಉದ್ಯೋಗಗಳನ್ನು ಹೇಗೆ ಸೃಷ್ಟಿಸುತ್ತಾರೆ? ಆ ಜನರಿಗೆ ಎಷ್ಟು ಸಂಬಳ ನೀಡುತ್ತಾರೆ? ಅವರು ಎಲ್ಲಿ ಕೆಲಸ ಮಾಡುತ್ತಾರೆ ಎಂದು ಮಾಜಿ ಪ್ರಧಾನಿ ಪ್ರಶ್ನಿಸಿದರು.

ಮಾಜಿ ಎಂಎಲ್‌ಸಿ ಕೆ.ಪಿ.ನಂಜುಂಡಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆ



ಬೆಂಗಳೂರು, ಏ.24– ವಿಶ್ವಕರ್ಮ ಸಮಾಜದ ಮುಖಂಡ ಕೆ.ಪಿ.ನಂಜುಂಡಿ ಬುಧವಾರ ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಸಮ್ಮುಖದಲ್ಲಿ ಪಕ್ಷ ಸೇರ್ಪಡೆಯಾದರು.

ನಂಜುಂಡಿ ಅವರು ಮಂಗಳವಾರ ವಿಧಾನಪರಿಷತ್ ಸದಸ್ಯತ್ವಕ್ಕೆ ಸಲ್ಲಿಸಿದ್ದ ರಾಜೀನಾಮೆಯನ್ನು ಸಭಾಪತಿ ಬಸವ ರಾಜ ಹೊರಟ್ಟಿ ಅಂಗೀಕರಿಸಿದ್ದರು. ಕಾಂಗ್ರೆಸ್ ಸೇರ್ಪಡೆ ಬಳಿಕ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ನಂಜುಂಡಿ, ಬಿಜೆಪಿ ನನ್ನನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ. ಸಾಮರ್ಥ್ಯ ಆಧರಿಸಿ ಜವಾಬ್ದಾರಿ, ಸ್ಥಾನ ಕೊಡಲಿಲ್ಲ, ಇದರಿಂದ ಬೇಸರಗೊಂಡು ಪರಿಷತ್ತಿನ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ತಿಳಿಸಿದರು. ವಿಶ್ವಕರ್ಮ ಸೇರಿದಂತೆ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ರೂ. 1,000 ಕೋಟಿ ಅನುದಾನ ಕೊಡಬೇಕು ಎಂದು ಬಿಜೆಪಿ ಸರ್ಕಾರಕ್ಕೆ ಮನವಿ ಮಾಡಿದ್ದೆ. ಆದರೆ, ಸ್ಪಂದನೆ ಸಿಗಲಿಲ್ಲ. ಕೆಪಿಸಿಸಿ ಅಧ್ಯಕ್ಷರು ನನ್ನ ಜೊತೆಗೆ ಮಾತನಾಡಿದ ಬಳಿಕ ಬಿಜೆಪಿಯ ಯಾವ ನಾಯಕರು ಸಂಪರ್ಕಿಸಲಿಲ್ಲ ಎಂದು ಅವರು ಹೇಳಿದರು.

ರಾಜ್ಯದಲ್ಲಿ 38 ದಿನಗಳಲ್ಲಿ 406.73 ಕೋಟಿ ರೂ. ಮೌಲ್ಯದ ನಗದು, ಮದ್ಯ ಜಪ್ತಿ

ಬೆಂಗಳೂರು, ಏ.24– ಲೋಕಸಭೆ ಚುನಾವಣೆ ಕಣ ದಿನದಿಂದ ದಿನಕ್ಕೆ ರಂಗೇರುತ್ತಿದೆ. ಮತ್ತೊಂದೆಡೆ ಮಾದರಿ ನೀತಿ ಸಂಹಿತೆ ಜಾರಿಯಾದಾಗಿನಿಂದ ಅಕ್ರಮ ಚಟುವಟಿಕೆ ಮೇಲೆ ಹದ್ದಿನ ಕಣ್ಣು ಇಟ್ಟಿರುವ ಚುನಾವಣಾ ಆಯೋಗ ದಾಖಲೆ ಪ್ರಮಾಣದಲ್ಲಿ ದುಡ್ಡು, ಮದ್ಯ ಜಪ್ತಿ ಮಾಡಿದೆ. ಕರ್ನಾಟಕದಾದ್ಯಂತ ಕೇವಲ 38 ದಿನಗಳಲ್ಲಿ 406.73 ಕೋಟಿ ರೂ. ಮೌಲ್ಯದ ನಗದು, ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಮಾ.14ರಂದು ಲೋಕಸಭಾ ಚುನಾವಣೆ ಘೋಷಣೆಯಾಗಿತ್ತು. ದೇಶದಲ್ಲಿ ಅಂದಿನಿಂದ ಮಾದರಿ ನೀತಿ ಸಂಹಿತೆ ಜಾರಿಯಾಗಿತ್ತು. ಅವತ್ತಿನಿಂದ ಇವತ್ತಿನವರೆಗೆ, ಅಂದರೆ 38 ದಿನಗಳವರೆಗೆ ಅಕ್ರಮ ಚಟುವಟಿಕೆಗಳ ಮೇಲೆ ಹದ್ದಿನ ಕಣ್ಣು ಇಟ್ಟಿದ್ದ ಆಯೋಗ ರಾಜ್ಯದಲ್ಲಿ ಈವರೆಗೆ ಯಾವುದೇ ಲೋಕಸಭಾ ಚುನಾವಣೆಯಲ್ಲಿ ಜಪ್ತಿ ಮಾಡದಷ್ಟು ಹಣ, ಹೆಂಡ, ಉಡುಗೊರೆ ಹಾಗೂ ಬಂಗಾರವನ್ನು ಜಪ್ತಿ ಮಾಡಿದೆ.

ದೇಶದಲ್ಲೇ ಅತಿ ಹೆಚ್ಚು ಮದ್ಯ ಜಪ್ತಿ: 78 ಕೋಟಿ ರೂ. ನಗದು, 177 ಕೋಟಿ ರೂ. ಮೌಲ್ಯದ ಮದ್ಯ ವಶಪಡಿಸಿಕೊಳ್ಳಲಾಗಿದೆ. ಇಡೀ ದೇಶದಲ್ಲೆ ಅತಿಹೆಚ್ಚಿನ ಪ್ರಮಾಣದ ಮದ್ಯದ ಜಪ್ತಿ ಇದಾಗಿದೆ. ಉಳಿದಂತೆ 11.24 ಕೋಟಿ ರೂ. ಮೌಲ್ಯದ ಮಾದಕ ವಸ್ತು, 59 ಕೋಟಿ ರೂ. ಮೌಲ್ಯದ ಬೆಳ್ಳಿ, ಬಂಗಾರ ಹಾಗೂ ಡೈಮೆಂಡ್, 8.14 ಕೋಟಿ ರೂ. ಮೌಲ್ಯದ ಉಡುಗೊರೆಗಳಾದ ಮಿಕ್ಸರ್, ಫ್ಯಾನ್, ಕುಕ್ಕರ್ ಜಪ್ತಿ ಮಾಡಲಾಗಿದೆ. 72 ಕೋಟಿ ರೂ. ಮೌಲ್ಯದ ಇನ್ನಿತರ ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಒಟ್ಟಿನಲ್ಲಿ ನೀತಿ ಸಂಹಿತೆ ಜಾರಿಯಾದಾಗಿನಿಂದ ಕೋಟ್ಯಂತರ ರೂಪಾಯಿ ಹಣದ ಜೊತೆ ದೇಶದಲ್ಲೇ ಅತಿ ಹೆಚ್ಚು ಪ್ರಮಾಣದಲ್ಲಿ ಮದ್ಯ ಸೀಜ್ ಆಗಿರುವುದು ಚುನಾವಣಾ ಅಧಿಕಾರಿಗಳಿಗೂ ಅಚ್ಚರಿಯ ಸಂಗತಿಯಾಗಿದೆ.

ಎನ್‌ಆರ್ ಕ್ಷೇತ್ರದಲ್ಲಿ ಯದುವೀರ್ ಭರ್ಜರಿ ರೋಡ್ ಶೋ





ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಹಲವೆಡೆ ರೋಡ್ ಶೋ ಮೂಲಕ ಬಹಿರಂಗ ಪ್ರಚಾರದ ಅಂತಿಮ ವೇಳೆಯಲ್ಲಿ ಮತ ಬೇಟೆ ನಡೆಸಿದರು. ಮಾಜಿ ಸಚಿವ ಎಸ್.ಎ.ರಾಮದಾಸ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮತ್ತಿತರರಿದ್ದರು.

ಮೈಸೂರು, ಏ.24(ಎಂಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಹಲವೆಡೆ ಭರ್ಜರಿ ರೋಡ್ ಶೋ ಮೂಲಕ ಬಹಿರಂಗ ಪ್ರಚಾರದ ಅಂತಿಮ ವೇಳೆಯಲ್ಲಿ ಮತ ಬೇಟೆ ನಡೆಸಿದರು.

ಬಹಿರಂಗ ಪ್ರಚಾರದ ಕಡೇ ದಿನವಾದ ಬುಧವಾರ ಮಧ್ಯಾಹ್ನದಿಂದ ಸಂಜೆವರೆಗೆ ನರಸಿಂಹರಾಜ ಕ್ಷೇತ್ರದಲ್ಲಿ ಮಿಂಚಿನ ಸಂಚಲನ ಸೃಷ್ಟಿಸಿದ ಯದುವೀರ್, ನೂರಾರು ಮಂದಿ ಬಿಜೆಪಿ ಕಾರ್ಯಕರ್ತರೊಡನೆ ಮತ ಶಿಕಾರಿ ನಡೆಸಿದರು. ಎನ್.ಆರ್ ಕ್ಷೇತ್ರದ ನಾಯ್ಡುನಗರದಿಂದ ರೋಡ್ ಶೋ ಆರಂಭಿಸಿ ಕೆಸರೆ, ಎನ್.ಆರ್.ಮೊಹಲ್ಲಾ, ರಾಜೀವ್ ನಗರ, ಶಾಂತಿನಗರ, ಉದಯಗಿರಿ ಹಾಗೂ ಕ್ಯಾತಮಾರನಹಳ್ಳಿ ಟೆಂಟ್ ಸರ್ಕಲ್‌ವರೆಗೆ ರೋಡ್ ಶೋ ನಡೆಸುವ ಮೂಲಕ ಕೊನೆ ಹಂತದ ಬಹಿರಂಗ ಪ್ರಚಾರ ನಡೆಸಿದರು. ಸಂಜೆ 6 ಗಂಟೆಗೆ ಬಹಿರಂಗ ಪ್ರಚಾರ ಕೊನೆಗೊಳ್ಳುವ ಹಿನ್ನೆಲೆಯಲ್ಲಿ ಬಿರುಸಿನ ಪ್ರಚಾರ ನಡೆಸಲಾಯಿತು. ನೂರಾರು ಮಂದಿ ಬಿಜೆಪಿ ಕಾರ್ಯಕರ್ತರು, ಮುಖಂಡರು ಪ್ರಚಾರ ವಾಹನದ ಮುಂದೆ ಮೋದಿ ಮೋದಿ ಎಂದು ಜೈಕಾರ ಕೂಗುತ್ತಾ ಸಾಗಿದರಲ್ಲದೆ ದೇಶಕ್ಕೆ ಮೋದಿ, ಮೈಸೂರು–ಕೊಡಗಿಗೆ ಮಹಾರಾಜರು ಘೋಷಣೆ ಮೊಳಗಿಸಿದರು. ಕಮಲದ ಗುರುತಿಗೆ ತಮ್ಮ ಅಮೂಲ್ಯವಾದ ಮತ ನೀಡುವ ಮೂಲಕ ಬಿಜೆಪಿ ಅಭ್ಯರ್ಥಿ ಯದುವೀರ್ ಅವರನ್ನು ಜಯಶೀಲರನ್ನಾಗಿ ಮಾಡುವಂತೆ ಮತದಾರರಲ್ಲಿ ಮನವಿ ಮಾಡಿದರು. ಈ ವೇಳೆ ಮೈಸೂರಿನ ಮಹಾರಾಜರು ಬಂದವ್ರೇ ಎನ್ನುತ್ತಲೇ ಮಹಿಳೆಯರು ಓಡೋಡಿ ಬರುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಗೆಲ್ಲಿಸಿ, ಮೋದಿ ಕೈ ಬಲಪಡಿಸಿ: ಕೆಸರೆಯ ಲಿಂಗಾಯತರ ಬೀದಿಯಲ್ಲಿ ರೋಡ್ ಶೋ ವೇಳೆ ಮಾತನಾಡಿದ ಯದುವೀರ್, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭಿವೃದ್ಧಿಗಾಗಿ ತಮ್ಮ ಮತ ನೀಡಿ ಗೆಲ್ಲಿಸುವ ಮೂಲಕ ಅವಕಾಶ ಮಾಡಿಕೊಡಿ. ಹಾಗೆಯೇ ದೇಶದ ಅಭಿವೃದ್ಧಿಗಾಗಿ ಪಣತೊಟ್ಟಿರುವ ಪ್ರಧಾನಿ ಮೋದಿಯವರ ಕೈ ಬಲಪಡಿಸಿ ಎಂದು ಕೋರಿದರು.

ಆರಂಭದ ಸ್ಥಳದಲ್ಲೇ ಮುಕ್ತಾಯ: ಕ್ಯಾತಮಾರನಹಳ್ಳಿಯ ಹುಲಿಯಮ್ಮ ತಾಯಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಟೆಂಟ್ ಸರ್ಕಲ್‌ನಿಂದಲೇ ತಮ್ಮ ಚುನಾವಣಾ ಪ್ರಚಾರ ಆರಂಭಿಸಿದ್ದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ಬಹಿರಂಗ ಪ್ರಚಾರದ ಕಡೇ ದಿನವೂ ಕ್ಯಾತಮಾರನಹಳ್ಳಿಯ ಟೆಂಟ್ ಸರ್ಕಲ್‌ನಲ್ಲಿಯೇ ತಮ್ಮ ಚುನಾವಣಾ ಪ್ರಚಾರವನ್ನು ಮುಕ್ತಾಯಗೊಳಿಸಿದರು.

ಸಮಯಪ್ರಜ್ಞೆ: ಚುನಾವಣಾ ಆಯೋಗ ನಿಯಮದಂತೆ ಬಹಿರಂಗ ಪ್ರಚಾರವನ್ನು ಸಂಜೆ 6 ಗಂಟೆಗೆ ಮುಕ್ತಾಯಗೊಳಿಸಬೇಕಿತ್ತು. ಅದರಂತೆ ಸಂಜೆ 6 ಗಂಟೆಯಾಗುತ್ತಿದ್ದಂತೆ ಪ್ರಚಾರ ವಾಹನದಿಂದ ಕೆಳಗಿಳಿದ ಅವರು, ಸಮಯಪ್ರಜ್ಞೆ ತೋರಿದರು. ಇದರಿಂದ ಕ್ಯಾತಮಾರನಹಳ್ಳಿ ಮಹದೇಶ್ವರ ದೇವಸ್ಥಾನದ ಬಳಿ ಯದುವೀರ್ ಬರುವಿಕೆಗಾಗಿ ಕಾದಿದ್ದ ಬಿಜೆಪಿ ಕಾರ್ಯಕರ್ತರು ಬೇಸರಗೊಂಡರು.

ಮಾಜಿ ಸಚಿವ ಎಸ್.ಎ.ರಾಮದಾಸ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಅಭ್ಯರ್ಥಿ ಪ್ರಚಾರ ಪ್ರಮುಖ್ ಹೇಮಂತ್‌ಕುಮಾರ್ ಗೌಡ, ಬಿಜೆಪಿ ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ಎನ್.ಆರ್ ಕ್ಷೇತ್ರದ ಮಂಡಲ ಅಧ್ಯಕ್ಷ ಸ್ಮಾರ್ಟ್ ಮಂಜು, ಕಾರ್ಯದರ್ಶಿಗಳಾದ ಮಂಜು ಸಿ.ಗೌಡ, ಪದ್ಮನಾಭ್, ಸು.ಮುರಳಿ ಮತ್ತಿತರರು ಸಾಥ್ ನೀಡಿದರು.

ಅಖಿಲ ಭಾರತ ವಿಶ್ವಕರ್ಮ ಮಹಾಸಭಾ ಎನ್‌ಡಿಎಗೆ ಬೆಂಬಲ

ಮೈಸೂರು,ಏ.24(ಜಿಎ)–ಅಖಿಲ ಭಾರತ ವಿಶ್ವಕರ್ಮ ಮಹಾಸಂಘವು ಸಮುದಾಯದ ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಅಭಿವೃದ್ಧಿಗಾಗಿ ಎನ್.ಡಿ.ಎ ಮೈತ್ರಿಕೂಟಕ್ಕೆ ಬೆಂಬಲ ನೀಡಲು ನಿರ್ಧರಿಸಿದೆ ಎಂದು ಸಂಘದ ರಾಷ್ಟ್ರಾಧ್ಯಕ್ಷ ಡಾ. ಕೆ.ಎಂ. ಜಯಂತ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರ ಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರು ವಿಶ್ವಕರ್ಮ ಸಮ್ಮಾನ್ ಯೋಜನೆ ಮೂಲಕ ಸಮಾಜಕ್ಕೆ ಮನ್ನಣೆ ನೀಡಿದ್ದಾರೆ. ಅಯೋಧ್ಯೆಯ ರಾಮಮಂದಿರಕ್ಕೆ ಶ್ರೀರಾಮ ವಿಗ್ರಹ ಕೆತ್ತನೆಗೆ ಸಮುದಾಯದ ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಅವಕಾಶ ನೀಡಿ ನಮ್ಮೆಲ್ಲರ ಕೀರ್ತಿ ಹೆಚ್ಚಿಸಿದ್ದಾರೆ. ಇನ್ನಷ್ಟು ಅಭಿವೃದ್ಧಿಗಾಗಿ ಸಮುದಾಯದ ಜನರು ಬಿಜೆಪಿ ಮತ್ತು ಮಿತ್ರ ಪಕ್ಷಗಳನ್ನು ಬೆಂಬಲಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಂ.ಕಾರ್ತಿಕ್, ಜಂಟಿ ಕಾರ್ಯದರ್ಶಿ ಬಿ.ಆರ್.ದೀಕ್ಷಿತಾ ಉಪಸ್ಥಿತರಿದ್ದರು.

ಡಾ.ರಾಜ್ ಪ್ರತಿಮೆಗೆ ಹಾರ ಹಾಕಿದ ಯದುವೀರ್ ಗೌರವ ಸಲ್ಲಿಕೆ

ಮೈಸೂರು, ಏ.24(ಎಂಕೆ)– ವರನಟ ಡಾ.ರಾಜ್‌ಕುಮಾರ್ ಅವರ ಪ್ರತಿಮೆಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಲ್ಲಿಸಿದರು.

ಡಾ.ರಾಜ್‌ಕುಮಾರ್ ಜಯಂತಿ ಹಿನ್ನೆಲೆಯಲ್ಲಿ ಜಯಚಾಮರಾಜೇಂದ್ರ ಒಡೆಯರ್ ವೃತ್ತದ ಬಳಿ ಇರುವ ರಾಜ್‌ಕುಮಾರ್ ಉದ್ಯಾನವನಕ್ಕೆ ಬುಧವಾರ ಸಂಜೆ ಆಗಮಿಸಿದ ಅವರು, ಡಾ. ರಾಜ್‌ಕುಮಾರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಲ್ಲಿಸಿದರು. ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಅಭ್ಯರ್ಥಿ ಪ್ರಚಾರ ಪ್ರಮುಖ್ ಹೇಮಂತ್‌ಕುಮಾರ್ ಗೌಡ, ಬಿಜೆಪಿ ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ಎನ್.ಆರ್ ಕ್ಷೇತ್ರದ ಮಂಡಲ ಅಧ್ಯಕ್ಷ ಸ್ಮಾರ್ಟ್ ಮಂಜು, ಪಂಚಾಕ್ಷರಿ, ಬಿದರಗೂಡು ಕುಮಾರ್, ಡಾ.ರಾಜ್‌ಕುಮಾರ್ ಅಭಿಮಾನಿ ಸೋಮಣ್ಣ ಮತ್ತಿತರರಿದ್ದರು.



ವರನಟ ಡಾ.ರಾಜ್‌ಕುಮಾರ್ ಅವರ ಪ್ರತಿಮೆಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಲ್ಲಿಸಿದರು. ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಬಿಜೆಪಿ ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್ ಮತ್ತಿತರರಿದ್ದರು.

ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಪ್ರಚಾರ

ಶಾಸಕ ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಆಮ್ ಆದ್ಮಿ ಪಾರ್ಟಿ ಮುಖಂಡ ಮುಖ್ಯಮಂತ್ರಿ ಚಂದ್ರು ಸಾಥ್

ಮೈಸೂರು, ಏ.24(ಎಂಟಿವೈ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಬಹಿರಂಗ ಪ್ರಚಾರದ ಕೊನೆ ದಿನವಾದ ಬುಧವಾರ ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಆಮ್ ಆದ್ಮಿ ಪಕ್ಷ ಮುಖಂಡ ಮುಖ್ಯಮಂತ್ರಿ ಚಂದ್ರು ಸೇರಿದಂತೆ ಪಕ್ಷದ ಮುಖಂಡರೊಂದಿಗೆ ಬಿರುಸಿನ ಪ್ರಚಾರ ನಡೆಸಿದರು.

ಮೈಸೂರಿನ ಅಶೋಕಪುರಂ ಉದ್ಯಾನದಲ್ಲಿರುವ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ರೋಡ್ ಶೋ ನಡೆಸಿದರು. ಬಳಿಕ ಕೆಜಿ.ಕೊಪ್ಪಲಿಗೆ ಆಗಮಿಸಿದ ಅಭ್ಯರ್ಥಿ ಎಂ.ಲಕ್ಷ್ಮಣ ಅವರೊಂದಿಗೆ ಪ್ರಚಾರ ಮುಂದುವರೆಸಿದರು. ಕೆ.ಜಿ ಕೊಪ್ಪಲಿನ ಚಂದ್ರಮೌಳೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಪಾದಯಾತ್ರೆ ನಡೆಸಿದರು. ಬಳಿಕ ಶ್ರೀ ಸಿದ್ದಪ್ಪಾಜಿ ಮತ್ತು ಗಣಪತಿ ಹಾಗೂ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿ ಪ್ರಾರ್ಥಿಸಿದರು. ಬಳಿಕ ತಿಲಕ್‌ನಗರಕ್ಕೆ ಬಂದು ಶ್ರೀ ಶನೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪಾದಯಾತ್ರೆ ಹಾಗೂ ರೋಡ್ ಶೋ ಮೂಲಕ ಮತಯಾಚಿಸಿದರು.

ನಂತರ ಮುಖಂಡರೊಂದಿಗೆ ಮೈಸೂರಿನ ಕುರುಬಾರಹಳ್ಳಿಗೆ ಆಗಮಿಸಿದ ಮಾಜಿ ಶಾಸಕ ಎಂ.ಕೆ ಸೋಮಶೇಖರ್ ಅವರೊಂದಿಗೆ ಶ್ರೀ ಆಯರಹಳ್ಳಿ ಮಾಕಮ್ಮ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಬಳಿಕ ಕುರುಬಾರಹಳ್ಳಿಯಲ್ಲಿ ಪಾದಯಾತ್ರೆ ಮೂಲಕ ಲೋಕಸಭಾ ಚುನಾವಣೆಯಲ್ಲಿ ಬೆಂಬಲ ನೀಡುವಂತೆ ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿ, ದೇಶದ ಸುರಕ್ಷತೆಗಾಗಿ ಕಾಂಗ್ರೆಸ್ ಪಕ್ಷ ಮಿಡಿಯುತ್ತಿದೆ. ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿದು ಅದನ್ನು ದುರ್ಬಳಕೆ ಮಾಡಿಕೊಳ್ಳುವುದಕ್ಕೆ ನಾನು ಬಂದಿಲ್ಲ. ಜನ ಸೇವೆ ಮಾಡಲು ಕೊನೆಯ ಅವಕಾಶ ಕೊಟ್ಟಿದ್ದಾರೆ. ಈ ಚುನಾವಣೆಯಲ್ಲಿ ಸತ್ಯವನ್ನು ಗೆಲ್ಲಿಸಬೇಕು. ಜನರ ಬಗ್ಗೆ ಕಾಳಜಿ ಇರುವ ವ್ಯಕ್ತಿಗೆ ಅವಕಾಶ ಮಾಡಿಕೊಡಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವೆಲ್ಲ ನೆಮ್ಮದಿಯಿಂದ ಬದುಕಬೇಕಾದರೆ ಕಾಂಗ್ರೆಸ್ ಬೆಂಬಲಿಸಿ. ಮಕ್ಕಳ ಉಜ್ವಲ ಭವಿಷ್ಯ ರೂಪಿಸಲು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕು ಎಂದು ಪ್ರಾರ್ಥಿಸಿದರು.



ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಜನರ ತೀರ್ಮಾನ ಮುಖ್ಯವಾಗಿದೆ. ರಾಜಕೀಯ ಲಾಭಕ್ಕಾಗಿ ಒಂದು ಸಮುದಾಯಕ್ಕೆ ಸೇರಿದವರನ್ನು ಆ ಸಮುದಾಯದರೆ ಅಲ್ಲ ಎಂದು ಹೇಳುವಂತ ಸಣ್ಣ ಮನಸ್ಥಿತಿ ನಮ್ಮಲ್ಲಿದೆ. ನಾವು ಜಾತಿಯ ಮೇಲೆ ಮತ ಕೇಳಿಕೊಂಡು ಬಂದಿಲ್ಲ. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಒಂದೇ. ಎಲ್ಲರಿಗೂ ಮತ ನೀಡುವ ಅವಕಾಶ ಇದೆ. ನನ್ನ ಕ್ಷೇತ್ರದಲ್ಲಿ ಲಕ್ಷ್ಮಣ ಅವರಿಗೆ ನನಗಿಂತ 10 ಸಾವಿರ ಹೆಚ್ಚು ಲೀಡ್ ಕೊಡಬೇಕು ಎಂದು ಮನವಿ ಮಾಡಿದರು. ಆಮ್ ಆದ್ಮಿ ಪಕ್ಷದ ಮುಖಂಡ ಮುಖ್ಯಮಂತ್ರಿ ಚಂದ್ರು ಮಾತನಾಡಿ, ಆಮ್ ಆದ್ಮಿ ಪಕ್ಷ ದೇಶದ ಎಲ್ಲಾ ರಾಜ್ಯಗಳಲ್ಲೂ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುತ್ತಿದೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರಿಗೆ ಮತ ನೀಡಬೇಕು. ಬಿಜೆಪಿ ಅಭ್ಯರ್ಥಿ ಮಹಾರಾಜರು ರಾಜನ ಸ್ಥಾನ ಬಿಟ್ಟು ಮಂತ್ರಿಯಾಗಲು ಬಂದಿದ್ದಾರೆ. ನಾನು ಒಂದು ಪತ್ರ ಬರೆದಿದ್ದೆ. ಭೇಟಿಯಾಗಲು ಏನೂ ಪ್ರತಿಕ್ರಿಯೆ ನೀಡಲಿಲ್ಲ. ಆಮೇಲೆ ಗೊತ್ತಾಯಿತು. ಅವರು ಬಿಜೆಪಿಯವರನ್ನು ಬಿಟ್ಟು ಬೇರೆ ಯಾರನ್ನು ಒಳಗಡೆ ಸೇರಿಸುವುದಿಲ್ಲ ಎಂದು. ನಾಳೆ ದಿನ ಜನಗಳು ಭೇಟಿ ಮಾಡುವುದು ಹೇಗೆ ಕಷ್ಟ ಹೇಳುವುದು ಹೇಗೆ. ಲಕ್ಷ್ಮಣರವರು ಬೀದಿಯಲ್ಲಿದ್ದಾರೆ. ಕೆಲಸಗಳು ಮಾಡಿ ಕೊಡಿ ಎಂದು ಕೇಳಬಹುದು. ರಾಜರು ಆಸ್ಥಾನದಲ್ಲಿ ಇರಲಿ, ಲಕ್ಷ್ಮಣ ನಿಮ್ಮ ಸೇವೆ ಮಾಡಲಿ. ಸಿಎಂ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ಜೋಡೆತ್ತು ಸರ್ವ ಜನಾಂಗದ ಶಾಂತಿಯ ತೋಟ ಮಾಡಲಿಕ್ಕೆ ಬಂದಿರುವವರಾಗಿದ್ದಾರೆ. ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಜೋಡಿ ಸರ್ವನಾಶಕ್ಕೆ ನಾಂದಿ ಹಾಡುತ್ತಿರುವ ಜೋಡಿ. ಪ್ರಜಾಪ್ರಭುತ್ವ ಉಳಿಸಲಿಕ್ಕೆ, ಸಂವಿಧಾನ ಗೌರವಿಸಲಿಕ್ಕೆ, ಕೋಮು ವಾದಿಗಳನ್ನು ಹತ್ತಿಕ್ಕಲು ಕಾಂಗ್ರೆಸ್ ಹಸ್ತದ ಗುರುತಿಗೆ ಮತನೀಡಿ ಎಂದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಶಾಸಕರಾದ ತನ್ವೀರ್ ಸೇಠ್, ದರ್ಶನ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಮೇಯರ್‌ಗಳಾದ ಮೋದಾಮಣಿ, ಬಿ.ಕೆ.ಪ್ರಕಾಶ್, ಮುಖಂಡ ಭಾಸ್ಕರ್ ಗೌಡ ಮತ್ತು ಬ್ಲಾಕ್ ಕಾಂಗ್ರೆಸ್ ಹಾಲಿ, ಮಾಜಿ ಅಧ್ಯಕ್ಷರುಗಳು, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರುಗಳು, ಪದಾಧಿಕಾರಿಗಳು, ಮಾಜಿ ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷರುಗಳು, ಮುಖಂಡರುಗಳು, ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಭಾಗಿಯಾಗಿದ್ದರು.

ನಕ್ಕರೆ ಅದೇ ಸ್ವರ್ಗ

ಬಸ್ಯಾ : ಯಾಕೆ ಹೆಣ್ಣು ನೋಡೋಕೆ ಗಂಡಿನ ಕಡೆಯವರೇ ಹೋಗ್ತಾರೆ?

ಸಂತು : ಗಂಡು ನೋಡೋಕೆ ಹೆಣ್ಣು ಹೋಗೋಲ್ಲ. ಯಾಕೆಂದ್ರೆ ದಾರೀಲಿ ಮಾಡ್ಕೊಂಡಿರುವ ಮೇಕಪ್ ಹಾಳಾಗುತ್ತೆ ಅಂತ.

ಮೈಸೂರು ಮಿತ್ರ

ಗುರುವಾರ, 25 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಪ್ರತಿಯೊಬ್ಬರ ಜೀವನದಲ್ಲಿಯೂ ಅಮೂಲ್ಯ ಘಳಿಗೆಗಳಿರುತ್ತವೆ. ಅದರಲ್ಲೂ ನಿಮ್ಮ ಸಾಧನೆಗಳನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳುವ ಸಮಯ ಎಂದಾದರೂ ಒಂದು ದಿನ ಬಂದೇ ಬರುತ್ತದೆ. –ರ್‍ಯಾಂಡಿಪಾಶ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದೂತತ್ವ ಮಾಡುವವನಿಗೆ ಭೀತತ್ವ ಸಲ್ಲದು

ನಿಮ್ಮ ಪತ್ರಗಳು

ನಮ್ಮ ಮತದ ಮಹತ್ವ ಅರಿಯಬೇಕಿದೆ!

ಮಾನ್ಯರೆ,

ಜನತೆಯು ಯಾವುದಾದರೂ ವಿಷಯ ಅಥವಾ ಅಭ್ಯರ್ಥಿಗಳ ಬಗ್ಗೆ ತಮ್ಮ ನಿರ್ಣಯಗಳನ್ನು ಸೂಚಿಸಲು ಅನುವು ಮಾಡಿಕೊಡುವ ಒಂದು ಪ್ರಮುಖವಾದ ಪ್ರಕ್ರಿಯೆಯೇ ಮತದಾನ. ಭಾರತದಲ್ಲಿ ಪ್ರಜಾಪ್ರಭುತ್ವದ ಬುನಾದಿ ಈ ಮತದಾನ. ಭಾರತದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಮತದಾನದಲ್ಲಿ ಭಾಗವಹಿಸುವ ಹಕ್ಕು ಮತ್ತು ಜವಾಬ್ದಾರಿ ಇದೆ. ಪ್ರಜ್ಞಾವಂತ ಪ್ರಜೆಗಳಾದ ನಾವುಗಳು ನಮಗಿರುವ ಅತ್ಯಮೂಲ್ಯವಾದ ಈ ಒಂದು ಮತವನ್ನು ಸಂವಿಧಾನದ ಆಶಯದಂತೆ ಚಲಾಯಿಸಬೇಕು. ಯಾವುದೇ ಆಸೆ, ಆಮಿಷ, ಲಿಂಗ, ಭಾಷೆ, ಜಾತಿ ಹಾಗೂ ಹಣದ ಪ್ರಭಾವಕ್ಕೆ ಒಳಗಾಗದೆ ದೇಶದ ಚುಕ್ಕಾಣಿ ಹಿಡಿಯುವ ಯೋಗ್ಯ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಶಕ್ತಿ, ನಾವು ಚಲಾಯಿಸುವ ಒಂದು ಮತಕ್ಕಿದೆ ಎಂಬುದನ್ನು ಪ್ರತಿಯೊಬ್ಬ ಮತದಾರರು ಅರಿಯಬೇಕಿದೆ.

ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಂದು ಓಟಿಗೂ ಅದರದೇ ಆದ ಬೆಲೆ ಹಾಗೂ ಮೌಲ್ಯವಿದೆ. ರಾಜಕೀಯ ಲೆಕ್ಕಾಚಾರಗಳನ್ನು ಬುಡಮೇಲುಗೊಳಿಸಿ, ಅಭ್ಯರ್ಥಿಗಳ ಸೋಲು ಗೆಲುವು ನಿರ್ಧರಿಸುವುದು ಹಾಗೂ ಅಚ್ಚರಿ ಮತ್ತು ಆಘಾತದ ಫಲಿತಾಂಶ ನೀಡುವ ಶಕ್ತಿ ನಾವು ನೀಡುವ ಪ್ರತಿಯೊಂದು ಮತಕ್ಕಿದೆ. ಪ್ರಜಾಪ್ರಭುತ್ವ ಎಂಬ ಭವ್ಯ ಕಟ್ಟಡ ಗಟ್ಟಿಯಾಗಿರಲು ಒಂದೊಂದು ಇಟ್ಟಿಗೆಯೂ ಎಷ್ಟು ಮುಖ್ಯವೋ ಅದರಂತೆ, ಪ್ರಜಾಪ್ರಭುತ್ವ ಸದೃಢಗೊಳ್ಳಬೇಕಾದರೆ ನಾವು ಚಲಾಯಿಸುವ ಒಂದೊಂದು ಓಟು ಸಹ ನಿರ್ಣಾಯಕವಾಗುತ್ತದೆ. ಹೀಗಾಗಿ ಮತದಾನದ ದಿನದಂದು ನಮ್ಮ ಹಕ್ಕನ್ನು ತಪ್ಪದೇ ಮರೆಯದೆ ಹೆಮ್ಮೆಯಿಂದ ಚಲಾಯಿಸೋಣ. ಆ ಮೂಲಕ ಭವ್ಯ ಭಾರತದ ಪ್ರಜಾಪ್ರಭುತ್ವವನ್ನು ಭದ್ರಗೊಳಿಸೋಣ!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಮತದಾನ ನಮ್ಮ ಕರ್ತವ್ಯ

ಮಾನ್ಯರೆ,

ಭಾರತ ದೇಶದಲ್ಲಿ ಪ್ರಸ್ತುತ 18ನೇ ಲೋಕಸಭಾ ಚುನಾವಣೆ ನಡೆಯುತ್ತಿದ್ದು, ಪ್ರತಿಯೊಬ್ಬ ವ್ಯಕ್ತಿಯೂ ತಪ್ಪದೆ ಮತದಾನ ಮಾಡುವ ಮೂಲಕ ನಮ್ಮ ದೇಶಕ್ಕೆ ಉತ್ತಮ ಸರ್ಕಾರವನ್ನು ಆಯ್ಕೆ ಮಾಡಬೇಕು.ನಾವು ಹಲವಾರು ಸೌಲಭ್ಯಗಳನ್ನು ಸರ್ಕಾರದಿಂದ ಅಪೇಕ್ಷೆ ಪಡುತ್ತೇವೆ , ಅದರೆ ಮತದಾನ ಮಾಡುವ ಸಮಯದಲ್ಲಿ ನಮ್ಮಲ್ಲಿ ಹಲವರು ಪ್ರವಾಸ ಕೈಗೊಳ್ಳುತ್ತಾರೆ.

ನಂತರ ಸರ್ಕಾರ ನಮಗೆ ಏನೂ ಮಾಡಲಿಲ್ಲವೆಂದು ಟೀಕೆ ಮಾಡುತ್ತೇವೆ. ಇದರ ಬದಲು ಸರ್ಕಾರ ಮತ್ತು ಉತ್ತಮ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ನಮ್ಮ ಕೈಯಲ್ಲಿರುವಾಗ ನಾವು ಅದನ್ನು ಮರೆತು, ಮತದಾನದ ಸಮಯದಲ್ಲಿ ನನ್ನ ಒಂದು ಮತದಿಂದ ಏನು ಪ್ರಯೋಜನವೆಂದು ನಿರ್ಲಕ್ಷ್ಯ ತೋರಿ ನಂತರ ಸರ್ಕಾರವನ್ನು ಟೀಕೆ ಮಾಡುತ್ತೇವೆ. ಆದ್ದರಿಂದ ಎಲ್ಲರೂ ಸಂವಿಧಾನ ನಮಗೆ ಕಲ್ಪಿಸಿರುವ ಹಕ್ಕುಗಳನ್ನು ಅನುಭವಿಸುವಂತೆ, ಮತದಾನ ನಮ್ಮ ಕರ್ತವ್ಯವೆಂದು ಪರಿಗಣಿಸಿ ಮತದಾನ ಮಾಡೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ಪ್ರಜಾಪ್ರಭುತ್ವ ಹಬ್ಬದಲ್ಲಿ ತಪ್ಪದೇ ಮತದಾನ ಮಾಡಿ

ಮಾನ್ಯರೆ,

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನವೆಂಬುದು ಒಂದು ಹಬ್ಬವಿದ್ದಂತೆ. ಕ್ರಿ.ಶ. 1225 ರಲ್ಲೇ ಥಾಮಸ್ ಅಕ್ವಿನಾಸ್ ಅವರು ಹೇಳಿರುವ ಹಾಗೆ ಎಲ್ಲಾ ರಾಜಕೀಯ ಅಧಿಕಾರಕ್ಕೆ ಜನಮತವೇ ಮೂಲ. ಹೀಗಾಗಿ ಸಂವಿಧಾನ ನಮಗೆ ನೀಡಿರುವ ಮತದಾನದ ಹಕ್ಕನ್ನು, ಅಮೂಲ್ಯವಾದ ಮತವನ್ನು ರಾಜ್ಯ ಮತ್ತು ದೇಶದ ಸರ್ವತೋಮುಖ ಅಭಿವೃದ್ಧಿಗಾಗಿ.. ಹಾಗೂ ನಾಡು.. ನುಡಿ.. ಜಲ.. ಭಾಷೆ.. ಮಣ್ಣಿಗಾಗಿ ...ಸದಾ ಮಿಡಿಯುವ.., ಜೊತೆಗೆ ಜನಸಾಮಾನ್ಯರ ಕಷ್ಟಕ್ಕೆ ಸ್ಪಂದಿಸುವ.. ಅವರ ಏಳಿಗೆಗಾಗಿ ಸದಾ ಸಿದ್ಧರಿರುವ ಜನಪರ ಕಾಳಜಿವುಳ್ಳ ಅಭ್ಯರ್ಥಿಗೆ ಮತವನ್ನು ನೀಡಿ. ಹಾಗೆಯೇ **"ಚುನಾವಣೆ ಎನ್ನುವ ಹಬ್ಬದಲ್ಲಿ ನೀವು ತಪ್ಪದೇ ಮತದಾನ ಮಾಡಿ, ಸಂಭ್ರಮಿಸಿ"** ಇದು ಸಂವಿಧಾನಕ್ಕೆ ನಾವು ನೀಡುವ ಗೌರವ.

ನನ್ನ ಅಭಿಪ್ರಾಯದಲ್ಲಿ ಯಾವುದೇ ರಾಜಕೀಯ ಪಕ್ಷಗಳಿರಲಿ ತಮ್ಮ ಪ್ರಣಾಳಿಕೆಯಲ್ಲಿ ಪ್ರಮುಖವಾಗಿ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಬೇಕು. ಏಕೆಂದರೆ ಇವೆರಡರಿಂದಲೇ ಕೆಳ ಹಾಗೂ ಮಧ್ಯಮ ವರ್ಗದ ಜನರು ಹೆಚ್ಚು ಹಣವನ್ನು ಕಳೆದುಕೊಳ್ಳುತ್ತಿರುವುದು.

ಅರಿಸ್ಟಾಟಲ್ ಅವರು ಹೇಳುವ ಹಾಗೇ ಪ್ರಜೆಗಳು ಎಲ್ಲಾ ವಿಷಯಗಳಲ್ಲೂ ಸಮಾನರು ಎಂಬ ವಿಚಾರ ಲಹರಿಯಿಂದ ಪ್ರಜಾಪ್ರಭುತ್ವದ ಕಲ್ಪನೆ ಮೂಡಿದೆ. ಹೀಗಾಗಿ ಸರ್ಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳು, ಸಮಾನವಾಗಿ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಿಗುವ ಹಾಗೆ ನೋಡಿಕೊಳ್ಳುವ ಜೊತೆಗೆ ನಿಮಗೆ ಅಗತ್ಯವಿದ್ದಾಗ ನೇರವಾಗಿ ಸಿಗುವಂತಹ ಅಭ್ಯರ್ಥಿಯನ್ನು ನೀವು ಮತದಾನ ಮಾಡುವ ಮೂಲಕ ಆಯ್ಕೆ ಮಾಡಿ. ಬದಲಾವಣೆ ನಿಮ್ಮಿಂದಲೇ ಆರಂಭವಾಗಲಿ. ತಪ್ಪದೇ ಮತ ಚಲಾಯಿಸಿ.


– ಮಾದರಹಳ್ಳಿ ಚಂದ್ರಶೇಖರ, ಮದ್ದೂರು ತಾಲೂಕು, ಮಂಡ್ಯ ಜಿಲ್ಲೆ.

ನಾಮಪತ್ರ ವಾಪಸ್ ಪಡೆದವರು ನಾಯಕರಾಗಲು ಸಾಧ್ಯವೇ?

ಮಾನ್ಯರೆ,

ಚಾಮರಾಜನಗರ ಲೋಕಸಭಾ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೊಳ್ಳೇಗಾಲ, ಹನೂರು, ಚಾಮರಾಜನಗರ, ಗುಂಡ್ಲುಪೇಟೆ, ಹೆಗ್ಗಡದೇವನ ಕೋಟೆ, ವರುಣ, ನಂಜನಗೂಡು ಹಾಗೂ ತಿ.ನರಸೀಪುರ ಸೇರಿದ್ದು, ಈ ಭಾಗದ ಅಭಿವೃದ್ಧಿಗಾಗಿ ರಾಷ್ಟ್ರೀಯ ಪಕ್ಷಗಳು ಸೇರಿ ಪಕ್ಷೇತರ ಅಭ್ಯರ್ಥಿಗಳು ಸ್ಪರ್ಧೆ ಮಾಡುವ ಸಲುವಾಗಿ ನಾಮಪತ್ರ ಸಲ್ಲಿಕೆ ಮಾಡಿ ತದ ನಂತರ ಕೆಲವು ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆದಿದ್ದಾರೆ. ಇದರಿಂದ ಸಾಮಾಜಿಕ, ಸಾರ್ವಜನಿಕ ವಲಯದಲ್ಲಿ ನಾಮಪತ್ರ ಸಲ್ಲಿಕೆ ಮಾಡಿ ಯಾವುದೋ ಕಾರಣಕ್ಕೆ ವಾಪಸ್ ಪಡೆಯುವುದಾದರೆ ಏಕೆ ನಾಮಪತ್ರ ಸಲ್ಲಿಸಬೇಕಿತ್ತು ಎಂದು ಮಾತನಾಡಿಕೊಳ್ಳುತ್ತಿದ್ದಾರೆ. ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿದು ಗೌರವಯುತವಾಗಿ ಪ್ರಾಮಾಣಿಕ ರಾಜಕಾರಣ ಮಾಡಲು ಮನಸ್ಸಿದ್ದರೆ ನಾಮಪತ್ರ ಸಲ್ಲಿಕೆ ಮಾಡಿ. ಅದನ್ನು ಬಿಟ್ಟು ಸುಮ್ಮನೆ ನಾಮಪತ್ರ ಸಲ್ಲಿಕೆ ಮಾಡುತ್ತೇನೆ ಎಂದು ಸಲ್ಲಿಕೆ ಮಾಡಿ ನಂತರ ಯಾರೋ ಹೇಳಿ ಕೇಳಿದ ಮಾತಿಗೆ ವಾಪಸ್ ಪಡೆಯುವುದೇಕೆ? ಈ ರೀತಿ ಮಾಡಿದರೆ ನಾಯಕರಾಗಲು ಸಾಧ್ಯವೇ?

–ನಾಗೇಶ್, ಮಾನಸಗಂಗೋತ್ರಿ, ಮೈಸೂರು



ಕೆಬಿಜಿಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...

ದೇಶಪ್ರೇಮಿಗಳೇ ಹೋಗೋಣ ಬನ್ನಿ ನಾಳೆ ಮತಗಟ್ಟೆಗೆ



ಲೋಕಸಭಾ ಚುನಾವಣೆ–2024, ರಾಜ್ಯದಲ್ಲಿ ಮೊದಲ ಹಂತದ ಚುನಾವಣೆಗೆ ಕ್ಷಣಗಣನೆ ಆರಂಭವಾಗಿದೆ. ಏಪ್ರಿಲ್ 26 (ಶುಕ್ರವಾರ)ರ ಬೆಳಗ್ಗೆ 7 ರಿಂದ ಸಂಜೆ 6ರವರೆಗೆ ಮತದಾನ ನಿಗದಿಯಾಗಿದೆ. ತಪ್ಪದೇ ಮತಗಟ್ಟೆಗೆ ಹೋಗೋಣ ಬನ್ನಿ. ರಹಸ್ಯ ಮತದಾನದಲ್ಲಿ ನಮ್ಮ ರಾಜಕೀಯ ಪ್ರತಿನಿಧಿಯನ್ನು ಚುನಾಯಿಸುವ ಪವಿತ್ರ ಮತವನ್ನು ನಾವು ಮೆಚ್ಚಿದ ಅಭ್ಯರ್ಥಿಗೆ ಹಾಕಿ ಬರೋಣ. ಅದುವೇ ನಿಮ್ಮ ದೇಶಪ್ರೇಮಕ್ಕೆ ಸಾಕ್ಷಿ. ಮಾತ್ರವಲ್ಲ ನಾವು–ನೀವು ದೇಶಕ್ಕೆ ಮಾಡುವ ಮಹಾ ಸೇವೆ. ಅಲ್ಲದೆ ನೀವು ಈ ಮೂಲಕ ಒಬ್ಬ ಪ್ರಜೆಯಾಗಿ ಮಾಡುವ ಧರ್ಮ–ಕರ್ಮ. ಮೇಲಾಗಿ ಪ್ರಜಾಪ್ರಭುತ್ವ, ಸಂವಿಧಾನದ ಸಂರಕ್ಷಣೆಗಾಗಿ ನೀವು ಮಾಡಲೇಬೇಕಾದ ಜವಾಬ್ದಾರಿ.

ಐದು ವರ್ಷಕ್ಕೊಂದು ದಿನ ನೀವು ದೇಶಕ್ಕಾಗಿ ಈ ಮತದಾನ ದಿನವನ್ನು ಮೀಸಲಿಡಬೇಕು. ಹಾಗೂ ಮಳೆ, ಬಿಸಿಲೆನ್ನದೆ, ಬೇರೆ ಚಿಕ್ಕ ಪುಟ್ಟ ಸಮಸ್ಯೆ ನೆಪ ಹೇಳದೆ ಮತಗಟ್ಟೆಗೆ ಹೋಗಲೇಬೇಕು; ಮತ ಚಲಾಯಿಸಲೇಬೇಕು. ಮತ ಹಾಕದೇ ಇರುವುದು ಕಾನೂನುಬಾಹಿರವಲ್ಲ. ಆದರೆ ಅದೊಂದು ನಮ್ಮ ನೈತಿಕ ಕರ್ತವ್ಯವೇ ಆಗಿದೆ. ಅದು ವೈಯಕ್ತಿಕ ಸ್ವಾತಂತ್ರ್ಯ ಎಂಬ ಅಸಹಜ, ಪ್ರಜಾಪ್ರಭುತ್ವ ವಿರೋಧಿಭಾಸವನ್ನು ಬಿಡಬೇಕು. ದೇಶಪ್ರೇಮ, ದೇಶಭಕ್ತಿಯನ್ನು ಮೆರೆಯಬೇಕು. ಮತ ಹಾಕುವುದು ಕಡ್ಡಾಯವಲ್ಲ ಎಂಬುದರ ಲಾಭ ಪಡೆದು, ಆ ದಿನದ ರಜೆಯನ್ನು ಯಕಶ್ಚಿತ್ ಕಾಲಹರಣದ ಮೂಲಕ ದುರುಪಯೋಗಪಡಿಸಿಕೊಂಡು, ಮತ ಹಾಕದೆ ಇರುವುದು, ಬೇರೆಡೆ ಮೋಜು–ಮಸ್ತಿ (ಪಿಕ್‌ನಿಕ್) ವಿಶ್ರಾಂತಿ, ವಿಹಾರಗಳಿಗೆ ಹೋಗುವುದು ಸರಿಯಲ್ಲ.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯೂ ಆದ ಡಾ.ಸಿ.ಎನ್.ಮಂಜುನಾಥ್, (ಜಯದೇವ ಆಸ್ಪತ್ರೆಯ ಮಾಜಿ ನಿರ್ದೇಶಕರು) ಮತಗಟ್ಟೆಗೆ ಹೋಗುವುದಕ್ಕೆ ಹಿಂದೆ–ಮುಂದೆ ನೋಡುವವರ ದೃಷ್ಟಿಯಲ್ಲಿಟ್ಟುಕೊಂಡು ಮಾರ್ಮಿಕವಾಗಿ, ಸ್ವಲ್ಪ ತಿಳಿ ಹಾಸ್ಯದ ಲೇಪನದೊಂದಿಗೆ ಹೀಗೆ ಹೇಳುತ್ತಾರೆ; ನಾವು ಮೂರು ರೀತಿಯ ವಾಯು ವಿಹಾರ (Walking)ವನ್ನು ಮಾಡುತ್ತೇವೆ. ಮೊದಲನೆಯದು ಬೆಳಗಿನ ವಾಕಿಂಗ್, ಸ್ವಯಂಪ್ರೇರಣೆಯಿಂದ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲಿಕ್ಕೆ (Morning Walk). ಎರಡನೆಯದು ನಿಮ್ಮ ವೈದ್ಯರ ಸಲಹೆಯ ಪ್ರಕಾರ ಅದನ್ನು ಆರೋಗ್ಯ ದೃಷ್ಟಿಯಿಂದ ಎಚ್ಚರಿಕೆಯ ನಡೆ (Warning Walk) ಎನ್ನಬಹುದು. ಮೂರನೆಯದು ಮನೋರಂಜನೆಗಾಗಿ ಪ್ರೀತಿಯಿಂದ ತನ್ನ ಹೆಂಡತಿ ಇಲ್ಲವೆ ಗಂಡನೊಟ್ಟಿಗೆ (spouse) ಹೋಗುವ ನಡೆ. ಅದನ್ನು ಪ್ರಿಯೆ/ಪ್ರಿಯನೊಡನೆಯ ನಡೆ (Darling walk) ಎನ್ನಬಹುದು.

ಮತದಾರರಿಗೆ ಡಾ.ಮಂಜುನಾಥರ ಮನವಿ ಏನೆಂದರೆ ಮತದಾರ ನಾಳೆ (26.4.2024) ಮತಗಟ್ಟೆಗೆ ಒಂದು ಡಾರ್ಲಿಂಗ್ ವಾಕ್ ಮಾಡಿ ಮತ ಹಾಕಿ ಬನ್ನಿ ಎನ್ನುವುದು. ನಮ್ಮ ದೇಹದ ವಿಚಾರದಲ್ಲಿ ನಾವು ಯಾವ ರೀತಿ ವೈದ್ಯರ ಮಾತನ್ನು ಕೇಳುತ್ತೇವೆಯೋ, ಅದೇ ರೀತಿ ನಾವು, ದೇಶಪ್ರೇಮಿಗಳು, ನಮ್ಮ ದೇಶದ ಬಗ್ಗೆಯೂ ಹಿರಿಯ ನಾಗರಿಕರ ಮಾತನ್ನು ಕೇಳಬೇಕು. ಅದು ನಮ್ಮ ದೇಶಕ್ಕೂ, ನಮ್ಮ ದೇಹಕ್ಕೂ ಒಳ್ಳೆಯದು.

ಥಾಮಸ್ ಜಫರ್‌ಸನ್, ಅಮೇರಿಕದ ಮೂರನೇ ಅಧ್ಯಕ್ಷ ಹಾಗೂ ಅಮೇರಿಕದ ಸ್ವಾತಂತ್ರ್ಯ ಘೋಷಣೆಯನ್ನು ಬರೆದ ಲೇಖಕ ಹೇಳಿದ್ದಾರೆ; ಮನುಷ್ಯ ಯಾವ ಕಾರಣಕ್ಕೂ ಬಿಟ್ಟುಕೊಡದಂತಹ ಹಕ್ಕುಗಳಿವೆ. ಅವುಗಳೆಂದರೆ – ಜೀವನ (Life), ಸ್ವಾತಂತ್ರ್ಯ (Liberty) ಹಾಗೂ ತನ್ನ ಸುಖವನ್ನು (Happiness) ತಾನು ಕಂಡು ಕೊಳ್ಳುವುದು.

ಈ ರೀತಿಯ ಹಕ್ಕನ್ನು ನಾವು ಪಡೆದಿದ್ದೇವೆ. ನಮ್ಮ ಸಂವಿಧಾನ, ಪ್ರಜಾಪ್ರಭುತ್ವವೂ ಇವುಗಳನ್ನು ನಮಗೆ ಕಲ್ಪಿಸಿಕೊಟ್ಟಿದೆ. ಆದರೆ ಅವುಗಳನ್ನು ಕಾಪಾಡಿಕೊಂಡು, ನಮ್ಮ ಜೀವನದಲ್ಲಿ ಅವುಗಳನ್ನು ದಕ್ಕಿಸಿಕೊಳ್ಳಬೇಕಾದರೆ ನಾವು ಆಯಾ ಕಾಲಕ್ಕೆ ನಮ್ಮ ಸಂಸತ್ತಿಗೆ ನಡೆಯುವ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಹಾಗೂ ಜವಾಬ್ದಾರಿಯುತವಾಗಿ ತಪ್ಪದೇ ಮತದಾನ ಮಾಡಬೇಕು.

ಈ ಸಂದರ್ಭದಲ್ಲಿ **ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್** ಅವರು ಜನವರಿ 26, 1950 ರಲ್ಲಿ ನಮ್ಮ ಸಂವಿಧಾನ ಅನುಷ್ಠಾನಕ್ಕೆ ಬಂದ ಸಂದರ್ಭದಲ್ಲಿ ಹೇಳಿದ ಮಾತು ಅರ್ಥಗರ್ಭಿತ : 'ಇನ್ನು ಮೇಲೆ ದೇಶದ ವಿಷಯದಲ್ಲಿ ಏನೇ ಗೊಂದಲ, ಕೆಟ್ಟದು, ದುರಾಡಳಿತ, ಭ್ರಷ್ಟಾಚಾರ ಹಾಗೂ ಕಷ್ಟ–ನಷ್ಟ ಸಂಭವಿಸಿದರೆ ನಾವು ನಮ್ಮನ್ನಲ್ಲದೆ ಬೇರೆ ಯಾರನ್ನೂ ನಿಂದಿಸಲು ಅಥವಾ ಹೊಣೆ ಮಾಡಲು ಸಾಧ್ಯವಿಲ್ಲ' (If hereafter things go wrong, we will have nobody to blame except ourselves).

ಹೌದು, 1975ರಲ್ಲಿ ಅಂಥದೊಂದು ಅಚಾತುರ್ಯ ನಡೆದು ಹೋಯಿತು. ಅದು **ರಾಷ್ಟ್ರೀಯ ತುರ್ತು ಪರಿಸ್ಥಿತಿ** (National Emergency). ಅಂತೂ ಅದರಿಂದ 1977ರಲ್ಲಿ ಹೊರಬಂದೆವು. ನೆನಪಿರಲಿ! ಅದು ಸಾಧ್ಯವಾಗಿದ್ದು ಚುನಾವಣೆಯಲ್ಲಿ ಜನರು ದೇಶದ ಹಿತಾಸಕ್ತಿಯನ್ನು ಕಾಪಾಡಲು ಮನಸ್ಸು ಮಾಡಿ, ಜವಾಬ್ದಾರಿಯಿಂದ ತಪ್ಪದೆ ಮತ ಹಾಕಿದ್ದರಿಂದ. ದೇಶ ಮೊದಲು ಎಂದು ಪರಿಭಾವಿಸಿದರೆ ಅದರ ಏಳ್ಗೆಯಲ್ಲಿ ಪ್ರತಿಯೊಬ್ಬರ ಏಳ್ಗೆಯೂ ಸಾಧ್ಯವಾಗುತ್ತದೆ.

ಕೊನೆ ಮಾತು: ನಾಳೆ ನಿಮ್ಮ ನಡೆ ಮತಗಟ್ಟೆ ಕಡೆಗೆ. ದೇಶ ಮುನ್ನಡೆಯಬೇಕಾದರೆ ದೇಶದ ಪ್ರಜೆಗಳು ದಾರಿ ತಪ್ಪಬಾರದು.

ಜೈ ಭಾರತ್

Email:
voice@starofmysore.com

ಸರ್ಕಾರಿ ಕೆಲಸ ನಿಷ್ಠೆಯುಳ್ಳವರಿಗೆ ಮಾತ್ರವೇ ದೇವರ ಕೆಲಸ!



ಶಂಕರೇಗೌಡ
ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ
ಮೊ. 9141054473

ತೊಂಬತ್ತರ ದಶಕದಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತರಾಗಿದ್ದ ಕೆ.ಆರ್. ಕಸ್ತೂರಿರಂಗನ್ ಅವರಿಗೆ ಸರಿರಾತ್ರಿ ಯಾರೇ ದೂರವಾಣಿ ಕರೆ ಮಾಡಿದರೂ ಅತ್ತಲಿಂದ "ಕಸ್ತೂರಿ ರಂಗನ್" ವಿಶ್ವಾಸ–ಭರವಸೆ ಧ್ವನಿ ಕೇಳಿಬರುತ್ತಿತ್ತು. ದೂರವಾಣಿಯಲ್ಲೇ ಸಮಸ್ಯೆ ಆಲಿಸಿ, ತಕ್ಷಣವೇ ವೈರ್‌ಲೆಸ್ ಮೂಲಕ ಸ್ಥಳೀಯ ಅಧಿಕಾರಿಗೆ ಸಮಸ್ಯೆ ಸಂಬಂಧ ನಿರ್ದೇಶನ ನೀಡುತ್ತಿದ್ದರು. ಅವರ ಜನಪರ ಕಾಳಜಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಸಮಸ್ಯೆ ಗಳಿಗೆ ಸ್ಪಂದಿಸುವ ಇಂತಹ ಹಿರಿಯ ಅಧಿ ಕಾರಿಗಳ ಭರವಸೆ, ವಿಶ್ವಾಸದ ನುಡಿ ನೊಂದವರಲ್ಲಿ ಸಮಾಧಾನ ತರುತ್ತಿತ್ತು. ಹಿರಿಯ ಅಧಿಕಾರಿಗಳ ತಕ್ಷಣದ ಸ್ಪಂದನೆಯಿಂದಾಗಿ ಕೆಳ ಹಂತದ ಅಧಿಕಾರಿಗಳಲ್ಲಿ ಕರ್ತವ್ಯ ಪಾಲನೆಯ ಅನಿವಾರ್ಯತೆ ಎಚ್ಚರವಾಗುತ್ತಿತ್ತು. ಹಾಗಾಗಿ ಸಾರ್ವಜನಿಕರ ಬಹುತೇಕ ಸಮಸ್ಯೆಗಳಿಗೆ ಸೂಕ್ತ ಪರಿಹಾರವೂ ಸಿಗುತ್ತಿತ್ತು. ಸಮಾಜ ಘಾತುಕ ಶಕ್ತಿ ಗಳು ಇಲಿ ಬಿಲ ಸೇರಿದ್ದವು. ಅಂದಿನ ದಿನಮಾನಗಳಲ್ಲಿ ಸರ್ಕಾರಿ ಇಲಾಖೆಗಳಿಗೆ ಅತ್ಯಾಧುನಿಕ ಸವಲತ್ತುಗಳ ಕೊರತೆಯಿದ್ದರೂ ಕಾನೂನು ಅನುಷ್ಠಾನ ಬದ್ಧತೆಗೆ ಕೊರತೆ ಇರಲಿಲ್ಲ. ಇಂದು ಎಲ್ಲಾ ರೀತಿಯ ಸೌಲಭ್ಯಗಳ ಹೊರತಾಗಿಯೂ ಸರ್ಕಾರಿ ಸೇವೆ ರಾಜಧಾನಿಯಿಂದ ನಾಡಕಚೇರಿಯವರೆಗೆ ಬಹುತೇಕ ಸಾರ್ವಜನಿಕರಿಗೆ ಸೇವೆ ಯಾಗಿ ಉಳಿದಿಲ್ಲ. ಇದಕ್ಕೆ ಅಪವಾದವೆಂಬಂತೆ ನೊಂದವರ ಪರವಾಗಿ, ವಿಳಂಬಕ್ಕೆ ಅವಕಾಶ ನೀಡದೇ, ಕಟ್ಟುನಿಟ್ಟಾಗಿ ಕಾನೂನು ಅನುಷ್ಠಾನ ಮಾಡುವ ಬೆರಳೆಣಿಕೆಯ ಅಧಿಕಾರಿಗಳು ಈಗಲೂ ನಮ್ಮ ನಡುವೆ ಅಲ್ಲೊಬ್ಬರು–ಇಲ್ಲೊಬ್ಬರು ಇದ್ದಾರೆ. ಅಂತಹ ಕೆಲವು ನಿದರ್ಶನಗಳನ್ನು ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ; ಕಳೆದ ವಾರ ನಾನು ನನ್ನ ಹತ್ತು ವರ್ಷದ ಮೊಮ್ಮಗ ನೊಂದಿಗೆ ಕಾರಂಜಿ ಕೆರೆ ಉದ್ಯಾನವನದಲ್ಲಿ ವಾಯು ವಿಹಾರಕ್ಕಾಗಿ, ಉದ್ಯಾನವನ ಪ್ರವೇಶಕ್ಕಾಗಿ ಅಲ್ಲಿದ್ದ ಕರ್ತವ್ಯ ನಿರತ ಸೆಕ್ಯುರಿಟಿ ಗಾರ್ಡ್‌ಗೆ ಎರಡು ಟಿಕೆಟ್ ಕೇಳಿದೆ, ಮಗೂಗೆ 12 ವರ್ಷ ತುಂಬಿರದ ಕಾರಣ ಪ್ರವೇಶ ಸಾಧ್ಯವಿಲ್ಲ ಎಂದ. ನನ್ನ ಪರಿಚಯ ಹೇಳಿಕೊಂಡರೂ ನೀವ್ಯಾರಾಗಿದ್ದರು ಸರಿ, ರೂಲ್ಸ್ ಪಾಲಿಸಬೇಕು ಎಂದು ಖಂಡ ತುಂಡವಾಗಿ ಹೇಳಿದ. ಕರ್ತವ್ಯನಿರತ ಸೆಕ್ಯುರಿಟಿ ಗಾರ್ಡ್‌ನ ತಿಂಗಳ ಪಗಾರದ ಬಗ್ಗೆ ಕುತೂಹಲದಿಂದ ಕೇಳಿದಾಗ, ಆತನ ಬಗ್ಗೆ ಕನಿಕರ ಬಂತು.ಆದರೂ ಕಡಿಮೆ ಪಗಾರ ಪಡೆಯುವ ಆತನ ಪ್ರಾಮಾಣಿಕ ಕರ್ತವ್ಯದ ಕಟಿಬದ್ಧತೆ ನನಗೆ ಖುಷಿ ಆಯ್ತು. ಆತನಿಗೊಂದು ದೊಡ್ಡ ಸೆಲ್ಯೂಟ್.



ಕಸ್ತೂರಿ ರಂಗನ್



ದಯಾನಂದ್

> ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು, ಅವರ ಕ್ಷೇಮಾಭಿವೃದ್ಧಿಗಾಗಿ ಕೆಲಸ ಮಾಡಲು ಸಾರ್ವಜನಿಕ ಸೇವಕರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಸರಕಾರ ಒದಗಿಸಿದರೂ ಸಹ ನೋಡೋಣ ಮಾಡೋಣ ಎಂಬ ಸಾರ್ವಜನಿಕ ಸೇವಕರ ಮನಃಸ್ಥಿತಿಯನ್ನು ಬದಲಿಸಲು ಪ್ರಜೆಗಳಿಗೆ ಉಳಿದಿರುವ ಒಂದೇ ಮಾರ್ಗವೆಂದರೆ, ಅದು ಕೆಲಸ ಮಾಡದ ಸಾರ್ವಜನಿಕ ಸೇವಕರನ್ನು ಪ್ರಶ್ನೆ ಮಾಡುವುದು ಮತ್ತು ಜನಪರವಾಗಿ ಕೆಲಸ ಮಾಡುವ ಜನಪ್ರತಿನಿಧಿಗಳನ್ನು ಆಯ್ಕೆ ಮಾಡು ವುದು. ಅದನ್ನು ಪ್ರಜೆಗಳು ಮಾಡದಿದ್ದರೆ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ. ಪ್ರಜೆಗಳೇ,ಈಗ ಚುನಾವಣೆ ಬಂದಿದೆ, ಪ್ರತಿಯೊಬ್ಬರೂ ತಪ್ಪದೇ ಮತದಾನದಲ್ಲಿ ಭಾಗವಹಿಸಿ, ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡಿ.

ಮತ್ತೊಂದು ಪ್ರಸಂಗ; ಬೆಂಗಳೂರಿನಲ್ಲಿ ನನಗಾದ ಸಣ್ಣ ರಸ್ತೆ ಅಪಘಾತದ ಸಂಬಂಧ ಅಲ್ಲಿನ ಸ್ಥಳೀಯ ಪೊಲೀಸರು ನನಗೆ ನೀಡಬೇಕಾದ ದಾಖಲೆಗಳನ್ನು ನೀಡದೇ, ತನಿಖೆಯಲ್ಲಿ ಆಗಿರುವ ಲೋಪಗಳನ್ನು ಸಹ ಸರಿಪಡಿಸಲು ಸ್ಪಂದಿಸದ ಕಾರಣ ನಾನು ಕಳೆದ ಮಾರ್ಚ್ 11ರ ಬೆಳಗ್ಗೆ 6.30 ಗಂಟೆಗೆ ಇಮೇಲ್ ಮೂಲಕ ಬೆಂಗಳೂರಿನ ಪೊಲೀಸ್ ಆಯುಕ್ತರನ್ನು ಸಂಪರ್ಕಿಸಿದಾಗ ಕೇವಲ 15 ನಿಮಿಷಕ್ಕೆ ಅವರಿಂದ ಉತ್ತರ ಬಂತು. ಕೇವಲ ಎರಡು ತಾಸಲ್ಲಿ ಅಲ್ಲಿನ ಸ್ಥಳೀಯ ಪೊಲೀಸರು ನನ್ನನ್ನು ಸಂಪರ್ಕಿಸಿ ಅವರಿಂದಾದ ವಿಳಂಬಕ್ಕೆ ವಿಷಾದ ವ್ಯಕ್ತಪಡಿಸಿ, ವಸ್ತುಸ್ಥಿತಿಯನ್ನು ನನಗೆ ಮನವರಿಕೆ ಮಾಡಿದರು. ಸದ್ಯ ಬೆಂಗಳೂರು ಹಾಲಿ ಪೊಲೀಸ್ ಕಮೀಷ್ನರ್ ದಯಾನಂದ ಮತ್ತು ಮೈಸೂರು ಮಾಜಿ ಪೊಲೀಸ್ ಕಮೀಷ್ನರ್ ಕಸ್ತೂರಿರಂಗನ್ ಅವರಂತಹ ಅಧಿಕಾರಿಗಳು ಎಲ್ಲೆಡೆ ಸಿಗುವಂತಾದರೆ ಸರಕಾರಗಳಿಗೆ ನಿಜಕ್ಕೂ ಒಳ್ಳೆಯ ಹೆಸರು ಬರುತ್ತದೆ. ಅದೇ ನಿಜವಾದ ಕಲ್ಯಾಣ ರಾಜ್ಯ. ಸಮಾಜದ ಒಳಿತಿಗೆ ನೊಂದವರ ಪರ ಕೆಲಸ ಮಾಡುವ ಇಂತಹ ಪ್ರಾಮಾಣಿಕ ಅಧಿಕಾರಿಗಳಿಗೊಂದು ಧನ್ಯವಾದ ಹೇಳೋಣ. ಇದು ಸಮರ್ಥ ಅಧಿಕಾರಿಗಳಿಗೆ ಸಮಾಜ ನೀಡುವ ಗೌರವ ಮತ್ತು ಇತರರಿಗೆ ಪ್ರೇರಣೆಯಾಗಲಿ ಎಂಬುದಷ್ಟೇ ನಮ್ಮ ಆಶಯ.

ಪ್ರಾಮಾಣಿಕ ಸೆಕ್ಯುರಿಟಿ ಗಾರ್ಡ್, ಕಸ್ತೂರಿರಂಗನ್ ಮತ್ತು ದಯಾನಂದರಂತಹ ಸಮರ್ಥ ಅಧಿಕಾರಿಗಳು ಎಲ್ಲೆಡೆ ಇದ್ದಾರೆ ಎಂದು ಸಮಾಜ ಭಾವಿಸಿದರೆ ಅದು ತಪ್ಪಾದೀತು. ಇದಕ್ಕೆ ತದ್ವಿರುದ್ಧವಾಗಿರುವ ವ್ಯವಸ್ಥೆಯ ಹಲವು ಉದಾಹರಣೆಗಳು ನಮಗೆ ಕಾಣಸಿಗುತ್ತವೆ. ಆಡಳಿತ ವ್ಯವಸ್ಥೆಯ ಕಣ್ಣು ತೆರೆಸಲು ಅವುಗಳನ್ನು ಸಹ ಇಲ್ಲಿ ಉಲ್ಲೇಖಿಸುವುದು ಅವಶ್ಯಕ.

ಇತ್ತೀಚೆಗೆ ಭೇಟಿಯಾದ ನನ್ನ ಮಿತ್ರರೊಬ್ಬರು 'ಏನ್ ಸರ್ ನಿಮ್ಮ ಪೊಲೀಸರಿಗೆ ಸೌಜನ್ಯ ಮತ್ತು ಕರ್ತವ್ಯದ ಕಾಳಜಿಯೇ ಇಲ್ಲ' ಎಂದರು. ಏನಾಯಿತೆಂದೆ. ಪೊಲೀಸ್ ಕಮೀಷನರ್ ಕಚೇರಿ ಸಮೀಪದ ಮಿರ್ಜಾ ಸರ್ಕಲ್ ನಲ್ಲಿ ಟ್ರಾಫಿಕ್ ಜಾಮ್ ಆಗಿತ್ತು. ಅದರ ಪರಿವೇ ಇಲ್ಲದೇ ಮೊಬೈಲ್ ಫೋನ್ ಹಿಡಿದು ನಿಂತಿದ್ದ ಟ್ರಾಫಿಕ್ ಸಿಬ್ಬಂದಿಗೆ 'ಏನ್ ಸ್ವಾಮಿ ಇಷ್ಟೊಂದು ಟ್ರಾಫಿಕ್ ಜಾಮ್ ಆಗಿದ್ದರೂ ಕ್ಲಿಯರ್ ಮಾಡದೇ ಮೊಬೈಲ್ ಫೋನ್ ನೋಡುತ್ತಿದ್ದೀರಲ್ಲ ಸರಿನಾ? ಟ್ರಾಫಿಕ್ ಕ್ಲಿಯರ್ ಮಾಡಬಾರದಾ" ಎಂದು ಹೇಳಿದರೆ 'ತನ್ನಷ್ಟಕ್ಕೆ ತಾನೆ ಟ್ರಾಫಿಕ್ ಕ್ಲಿಯರ್ ಆಗುತ್ತೆ ಅಲ್ಲಿತನಕ ತಾವು ಕಾಯಬೇಕು, ನಾನೇನು ಮಾಡಲಾಗಲ್ಲ' ಎಂದು ಉದ್ಧಟತನದಿಂದಲೇ ಉತ್ತರ ಕೊಟ್ಟು ಮತ್ತೆ ಫೋನ್‌ನಲ್ಲಿ ಏನೋ ನೋಡುವುದರಲ್ಲಿ ಟ್ರಾಫಿಕ್ ಪೊಲೀಸ್ ತಲ್ಲೀನರಾದ ಕಾರಣ ನನ್ನ ಅನಿಸಿಕೆ ಹೇಳಿದೆ ಎಂದು ತಮ್ಮ ಅಸಹನೆಯನ್ನು ಹೊರ ಹಾಕಿದರು. ಪೊಲೀಸ್ ಕಮೀಷನರ್‌ಗೆ ದೂರು ಕೊಡಿ ಕ್ರಮ ಕೈಗೊಳ್ಳುತ್ತಾರೆ ಎಂದು ನಾನು ಸಲಹೆ ನೀಡಿದೆ. 'ಆಡಳಿತ ಹಳಿ ತಪ್ಪಿದೆ ಏನೂ ಮಾಡಲಾಗಲ್ಲ, ಕೆಲಸ ಮಾಡದೇ ಸಂಬಳ ಪಡೆಯಲು ನೌಕರರಿಗೆ ಸರ್ಕಾರ ಲೈಸೆನ್ಸ್ ಕೊಟ್ಟಿರಬಹುದು ಬಿಡಿ' ಎಂದು ಸುಮ್ಮನಾದರು.

ಮೈಸೂರು ಕ್ರಾಫರ್ಡ್ ಹಾಲ್ ಹತ್ತಿರದ ಕೌಟಿಲ್ಯ ಸರ್ಕಲ್‌ನಲ್ಲಿ ಎಪ್ಪತ್ತು ವರ್ಷ ದಾಟಿದ ಟ್ರಾಫಿಕ್ ವಾರ್ಡನ್ ಮಹೇಶ್ ಸಮವಸ್ತ್ರ ಧರಿಸಿ, ಖಡಕ್ಕಾಗಿ ಪ್ರತಿನಿತ್ಯ ಸಂಜೆ ಎರಡು ಮೂರು ತಾಸು ಸಂಚಾರ ನಿಯಂತ್ರಣ ಮಾಡುತ್ತಾರೆ. ಅವರಿಗೆ ಯಾರ ಮೇಲುಸ್ತುವಾರಿಯೂ ಇಲ್ಲ, ವೇತನವಂತೂ ಇಲ್ಲವೇ ಇಲ್ಲ, ಸಮವಸ್ತ್ರ ಶುಚಿ ಮಾಡಲು ಯಾವುದೇ ಅಲೋಯನ್ಸ್ ಕೂಡಾ ಸಿಗುತ್ತಿಲ್ಲ. ಪ್ರತಿ ತಿಂಗಳು ತಪ್ಪದೇ ಪಗಾರ, ಇತರೇ ಭತ್ಯೆ ಪಡೆಯುವ ಸಾರ್ವಜನಿಕ ಸೇವಕರು ಟ್ರಾಫಿಕ್ ವಾರ್ಡನ್ ಮಹೇಶರ ಕರ್ತವ್ಯ ಪ್ರಜ್ಞೆ, ಕಳಕಳಿಯನ್ನು ಸ್ವಲ್ಪವಾದರೂ ಅನುಕರಣೆ ಮಾಡಿದರೆ, ಅದು 'ಸರ್ಕಾರದ ಕೆಲಸ ದೇವರ ಕೆಲಸ'ವಾಗುತ್ತದೆ.


ಹಳೇ ಜಿಲ್ಲಾಧಿಕಾರಿ ಕಚೇರಿ ಆರ್ಚ್ ಜಂಕ್ಷನ್‌ನಿಂದ ಪ್ರಾರಂಭಿಸಿ ಮೆಟ್ರೋಪೋಲ್ ಸರ್ಕಲ್ ತನಕ ಸಂಭವಿಸಿದ ರಸ್ತೆ ಅಪಘಾತಗಳನ್ನು ಅಂಕಿ ಅಂಶಗಳ ಸಮೇತ ಉಲ್ಲೇಖಿಸಿ ಅಪಘಾತಗಳನ್ನು ನಿಯಂತ್ರಿಸಲು ಸಾಧ್ಯವಾಗಬಹುದಾದ ಮುಂಜಾಗ್ರತಾ ಕ್ರಮಗಳನ್ನು ಅನುಷ್ಠಾನ ಮಾಡಲು ಕೋರಿ 19–10–2023ರಂದು ಆನ್ಲೈನ್‌ನಲ್ಲಿ ಹಿರಿಯ ಅಧಿಕಾರಿಗೆ ನಾನೇ ಮನವಿ ಸಲ್ಲಿಸಿದರೂ, ಅದು ಐದು ತಿಂಗಳಾದರೂ ಅನುಷ್ಠಾನಕ್ಕೆ ಬರಲಿಲ್ಲ, ಕೊನೆಗೆ ಕುತೂಹಲದಿಂದ ಮನವಿ ಅರ್ಜಿಯ ಇರುವಿಕೆ ಬಗ್ಗೆ ಮಾಹಿತಿ ಹಕ್ಕು ಮೂಲಕ ವಿಷಯ ಸಂಗ್ರಹಿಸಲಾಗಿ ಅದು ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ 2024ರ ಮಾರ್ಚ್ ಎರಡನೇ ವಾರದ ತನಕ ಯಾರ ಗಮನಕ್ಕೂ ಬಾರದೇ ವಿಶ್ರಾಂತಿಯಲ್ಲಿದ್ದ ಸಂಗತಿ ತಿಳಿಯಿತು. ಅಂತಿಮವಾಗಿ ಪ್ರಗತಿ ಕೇಳಲಾಗಿ ಅರ್ಜಿಯ ಮುಕ್ತಾಯ ಮಾಡುವ ಏಕೈಕ ಉದ್ದೇಶದಿಂದ ಜಿಲ್ಲಾಧಿಕಾರಿ ಕಚೇರಿ ಆರ್ಚ್ ಜಂಕ್ಷನ್‌ನಲ್ಲಿ ಪೊಲೀಸ್ ಡಬ್ಬ ಪ್ರತಿಷ್ಠಾಪಿಸಲಾಗಿದೆ. ಆದರೆ, ಅಲ್ಲಿ ಕರ್ತವ್ಯಕ್ಕೆ ಹಾಜ ರಾಗುವ ಸರಕಾರಿ ಸೇವಕ ಸಂಚಾರ ನಿಯಂತ್ರಣ ಮಾಡದೇ ಸದಾ ಕಾಲ ಮೊಬೈಲ್‌ನಲ್ಲಿ ತಲ್ಲೀನ ರಾದರೆ, ಅಪಘಾತ ತಡೆಯಲು ಸಾಧ್ಯವೇ? ಮನವಿಗೆ ಪರಿಹಾರ 'ನೋಡೋಣ, ಮಾಡೋಣ' ಒಕ್ಕಣೆಯ ಹಿಂಬರಹ ಸಿಕ್ಕಿದ್ದೇ ಸೌಭಾಗ್ಯ.

ಮೈಸೂರು ರೈಲ್ವೇ ನಿಲ್ದಾಣದ ಬಳಿ ಪ್ರಯಾಣಿಕರ ಅದರಲ್ಲೂ ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ 24x7 ಚಾಲ್ತಿಯಲ್ಲಿದ್ದ ಪ್ರಸ್ತುತ ರಾತ್ರಿ ವೇಳೆ ಸ್ಥಗಿತಗೊಂಡಿರುವ ಪೂರ್ವ ದರ ನಿಗದಿತ (ಪ್ರೀ ಪೇಯ್ಡ್) ಆಟೋ ಕೇಂದ್ರವನ್ನು ಪುನರಾರಂಭಿಸಲು ಕೋರಿ 9–2–2024ರಂದು ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಇದುವರೆಗೂ ಅದು ಜಾರಿಗೆ ಬಾರದ ಕಾರಣ ಹಿರಿಯ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಕೆಲವೇ ಪ್ರಯಾಣಿಕರ ಅನುಕೂಲಕ್ಕಾಗಿ ರಾತ್ರಿ ವೇಳೆ ಕೇಂದ್ರವನ್ನು ಪುನರಾರಂಭಿಸುವ ಅಗತ್ಯ ಕಂಡು ಬಂದಿಲ್ಲ ಎಂಬ ಕೆಳ ಹಂತದ ಅಧಿಕಾರಿಗಳ ಅಭಿಪ್ರಾಯ ಮಹಿಳಾ ಪ್ರಯಾಣಿಕರ ಸುರಕ್ಷತೆಯನ್ನು ಖಾತರಿಪಡಿಸುವುದೇ ಹೇಳಿ?

ಕಳೆದ ವಾರ ಚಾಮುಂಡಿಬೆಟ್ಟದಿಂದ ತಾವರೇಕಟ್ಟೆಗೆ ಸರ್ಕಾರಿ ಸಂಸ್ಥೆಯ ಬಸ್‌ನಲ್ಲಿ ಪ್ರಯಾಣ ಮಾಡಲು ಕಂಡಕ್ಟರ್‌ಗೆ ನನ್ನ ಡಿ ಜಿ ಲಾಕರ್ ಆ್ಯಪ್‌ನಲ್ಲಿದ್ದ ಆಧಾರ್ ದಾಖಲೆ ತೋರಿಸಿ ಹಿರಿಯ ನಾಗರಿಕರ ಟಿಕೆಟ್ ಕೇಳಿದೆ. ಇಲ್ಲಾ ಸರ್ ಒರಿಜಿನಲ್ ದಾಖಲೆ ಕೊಡಲೇಬೇಕು ಇಲ್ಲವಾದರೆ ಪೂರ್ಣ ಟಿಕೆಟ್ ತೆಗೆದುಕೊಳ್ಳಿ ಎಂದು ತನ್ನ ಕರ್ತವ್ಯ ಪ್ರಜ್ಞೆ ಪ್ರದರ್ಶನ ಮಾಡಿದ. ಕೊನೆಗೆ ವಿಧಿಯಿಲ್ಲದೆ ಪೂರ್ಣ ಟಿಕೆಟ್ ಪಡೆದು ಪ್ರಯಾಣಿಸಿದೆ. ಇಲ್ಲಿ ಹೇಳಬೇಕಾದ ವಿಷಯ ಇಷ್ಟೇ, ಕಂಡಕ್ಟರ್‌ಗೆ ದಾಖಲೆ ಪರಿಶೀಲನೆ ಅಗತ್ಯ ಎಂಬುದಷ್ಟೇ ತಿಳಿದಿದೆ ಹೊರತು ವ್ಯಾಲೆಟ್‌ನಲ್ಲಿರುವ ಡಿ ಜಿ ಲಾಕರ್‌ನ ದಾಖಲೆ ಸಹ ಅಸಲು ಎಂಬುದು ಆತನಿಗೆ ಮನವರಿಕೆ ಆಗಿಲ್ಲ. ಇದರಲ್ಲಿ ಆತನ ಮುಗ್ಧತೆಯನ್ನು ತಿದ್ದಬೇಕಾದ ಹೊಣೆ ಹಿರಿಯ ಅಧಿಕಾರಿಗಳದ್ದಲ್ಲವೇ?

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ



ಮೈಸೂರು-ಕೊಡಗು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಮೈಸೂರಿನ ಖ್ಯಾತ ವೈದ್ಯ ಡಾ.ಸುಶ್ರುತ್‌ಗೌಡ ಬಿಜೆಪಿ ಸೇರ್ಪಡೆ



ಬೆಂಗಳೂರು, ಏ.24 (ಕೆಎಂಶಿ)– ಮೈಸೂರಿನಲ್ಲಿ ಶಾಂತವೇರಿ ಗೋಪಾಲ ಗೌಡರ ಹೆಸರಿನಲ್ಲಿ ವೈದ್ಯಕೀಯ ಸೇವೆ ಸಲ್ಲಿಸುತ್ತಿರುವ ಡಾ.ಸುಶ್ರುತ್‌ಗೌಡ ಅವರು ಬಿಜೆಪಿ ಸಿದ್ಧಾಂತ ಒಪ್ಪಿ, ಪ್ರಧಾನಿ ನರೇಂದ್ರ ಮೋದಿ ಅವರ ಕೈಬಲಪಡಿಸಲು ಇಂದಿಲ್ಲಿ ಬಿಜೆಪಿ ಸೇರ್ಪಡೆಗೊಂಡರು. ಇವರು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು.

ಪಕ್ಷ ಸೇರ್ಪಡೆಗೊಂಡ ಡಾ.ಸುಶ್ರುತ್ ಗೌಡ ಅವರನ್ನು ಸ್ವಾಗತಿಸಿ ಮಾತನಾಡಿದ ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ಜನರಿಗೆ ವೈದ್ಯಕೀಯ ಸೇವೆ ನೀಡುವುದರೊಂದಿಗೆ ರಾಜಕಾರಣದಲ್ಲೂ ಸಕ್ರಿಯರಾಗಿದ್ದು, ಇವರ ಸೇರ್ಪಡೆಯಿಂದ ಈ ಭಾಗದಲ್ಲಿ ಪಕ್ಷಕ್ಕೆ ಹೆಚ್ಚಿನ ಬಲ ಬಂದಿದೆ, ಪಕ್ಷದ ಪರವಾಗಿ ಮೈಸೂರು ಭಾಗದಲ್ಲಿ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಳ್ಳಲಿದ್ದಾರೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದ ಓಲೈಕೆ, ತುಷ್ಟೀಕರಣ ರಾಜಕಾರಣ ಮಾಡುತ್ತಿದೆ. ಕಾನೂನು-ಸುವ್ಯವಸ್ಥೆ ಸಂಪೂರ್ಣ ಕುಸಿದುಹೋಗಿದೆ ಎಂದರು.

ಪಕ್ಷದ ರಾಜ್ಯ ಉಸ್ತುವಾರಿ ಡಾ.ರಾಧಾ ಮೋಹನ್‌ದಾಸ್ ಅಗರ್ವಾಲ್ ಮಾತನಾಡಿ, ಪ್ರಸಿದ್ಧ ವೈದ್ಯ ಡಾ. ಸುಶ್ರುತ್‌ಗೌಡ ಅವರು ಯಾವುದೇ ಸ್ವಾರ್ಥ, ಲಾಭದ ಅಪೇಕ್ಷೆ ಇಲ್ಲದೆ ಬಿಜೆಪಿ ಸೇರಿರುವುದು ಸ್ವಾಗತಾರ್ಹ ಎಂದು ಹೇಳಿದರು.

ಡಾ.ಸುಶ್ರುತ್‌ಗೌಡ ಮಾತನಾಡಿ, ಸುಮಾರು ಐದೂವರೆ ತಿಂಗಳ ಕಾಲ ಭಾರತ್ ಜೋಡೊದಲ್ಲಿ ತೊಡಗಿಸಿಕೊಂಡಿದ್ದೆ, ಕಾಂಗ್ರೆಸ್ ಸೇರಿದ ನಂತರ ನನ್ನ ದೂರದೃಷ್ಟಿ ಈಡೇರಿಸಲು ಅಸಾಧ್ಯ ಅನಿಸಿತು. ಮೋದಿ ಅವರ ದೂರದೃಷ್ಟಿ ಗಮನಿಸಿದ ಬಳಿಕ ಬಿಜೆಪಿ ಸೇರಲು ಯೋಚಿಸಿದೆ ಎಂದರು.

ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಡೇಂಜರ್ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಡಾ. ಸುಶ್ರುತ್‌ಗೌಡರು ರಾಹುಲ್‌ಗಾಂಧಿ ಅವರ ಮೊದಲ ಹಂತದ ಕನ್ಯಾಕುಮಾರಿಯಿಂದ ಜಮ್ಮು-ಕಾಶ್ಮೀರದವರೆಗಿನ ಭಾರತ್ ಜೋಡೋ ಅಭಿಯಾನದಲ್ಲಿ ಪಾಲ್ಗೊಂಡಿದ್ದರು. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆ ನಿಟ್ಟಿನಲ್ಲಿ ಕೆಲಸ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು.

ಸಮಾಜ ಸೇವೆಗೆ ಅವಕಾಶ ಸಿಗದ ಕಾರಣ ಕಾಂಗ್ರೆಸ್ ಬಿಡಬೇಕಾಯಿತು

ವೈದ್ಯ ಡಾ.ಸುಶ್ರುತ್‌ಗೌಡ ಸಮರ್ಥನೆ

ಮೈಸೂರು, ಏ.24(ಪಿಎಂ)– ಗ್ರಾಮೀಣ ಜನರು, ಬಡಜನತೆಗೆ ಗುಣಮಟ್ಟದ ಉಚಿತ ಆರೋಗ್ಯ ಸೇವೆ ನೀಡಬೇಕೆಂಬ ನನ್ನ ಪ್ಯಾಶನ್‌ಗೆ (ತುಡಿತ) ಕಾಂಗ್ರೆಸ್‌ನಲ್ಲಿ ಸೂಕ್ತ ಅವಕಾಶ ದೊರೆಯಲಿಲ್ಲ. ಹೀಗಾಗಿ ನರೇಂದ್ರ ಮೋದಿಯವರ ಅಭಿವೃದ್ಧಿ, ವಿಶೇಷವಾಗಿ ಆರೋಗ್ಯ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ, ಬಿಜೆಪಿ ತತ್ವ-ಸಿದ್ಧಾಂತ ನನ್ನ ಮೇಲೆ ಪ್ರಭಾವ ಉಂಟು ಮಾಡಿತು. ಈ ಹಿನ್ನೆಲೆಯಲ್ಲಿ ಯಾವುದೇ ಷರತ್ತುಗಳಿಲ್ಲದೇ ಬಿಜೆಪಿ ಸೇರ್ಪಡೆಯಾಗಿದ್ದೇನೆ ಎಂದು ಖ್ಯಾತ ವೈದ್ಯ ಡಾ.ಸುಶ್ರುತ್‌ಗೌಡ ತಿಳಿಸಿದರು.

ಬೆಂಗಳೂರು ಬಿಜೆಪಿ ಕಚೇರಿಯಲ್ಲಿ ಬುಧವಾರ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾದ ಬಳಿಕ ಸಂಜೆ ವೇಳೆಗೆ ಮೈಸೂರಿಗೆ ಆಗಮಿಸಿ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಬಿಜೆಪಿಯಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಕೆಲಸ ಮಾಡುತ್ತೇನೆ. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರನ್ನು ನಮ್ಮ ಒಕ್ಕಲಿಗ ಸಮುದಾಯ ಸೇರಿದಂತೆ ನನ್ನ ಅಭಿಮಾನಿಗಳು, ಹಿತೈಷಿಗಳು, ಸ್ನೇಹಿತರು ಬೆಂಬಲಿಸಬೇಕೆಂದು ಕೋರಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದು ವರ್ಷವಾಗುತ್ತಾ ಬಂದರೂ ನನ್ನ ಆರೋಗ್ಯ ಸೇವಾ ಯೋಜನೆಗೆ ಯಾವುದೇ ಅವಕಾಶ ದೊರೆಯಲಿಲ್ಲ. ಪ್ರತಿಭೆಗೆ ಸೂಕ್ತ ವೇದಿಕೆ ಕಲ್ಪಿಸಿ ಅವಕಾಶ ನೀಡಿದೇ ಇದ್ದರೆ ಯಾವುದೇ ಪ್ರಯೋಜನವಿಲ್ಲ. ನಾನು ಟಿಕೆಟ್ ದೊರೆಯದೇ ಇರುವ ಕಾರಣಕ್ಕೆ ಬಿಜೆಪಿ ಸೇರ್ಪಡೆಯಾಗಿಲ್ಲ. ಸಮಾಜ ಸೇವೆಗೆ ಸೂಕ್ತ ಅವಕಾಶ ಸಿಗಲಿಲ್ಲ ಎಂಬ ಕಾರಣಕ್ಕೆ ಕಾಂಗ್ರೆಸ್ ತೊರೆಯಬೇಕಾಯಿತು ಎಂದರು. ಇದಕ್ಕೂ ಮುನ್ನ ಡಾ.ಸುಶ್ರುತ್‌ಗೌಡರಿಗೆ ಬಿಜೆಪಿ ಧ್ವಜ ನೀಡುವ ಮೂಲಕ ಮಾಜಿ ಶಾಸಕರೂ ಆದ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಸ್ವಾಗತಿಸಿದರು. ಬಿಜೆಪಿ ಯುವ ಮೋರ್ಚಾ ನಗರಾಧ್ಯಕ್ಷ ರಾಕೇಶ್‌ಗೌಡ ಮತ್ತಿತರರು ಹಾಜರಿದ್ದರು.

ಮೈಸೂರಿಗೆ ರಾಜ ಪ್ರತಿನಿಧಿ ಬೇಕೋ, ಪ್ರಜಾ ಪ್ರತಿನಿಧಿ ಬೇಕೋ...!

ಯೋಚಿಸಿ ಮತ ನೀಡಿ ಎಂದ ಕೆಪಿಸಿಸಿ ವಕ್ತಾರೆ ತೇಜಸ್ವಿನಿ ಗೌಡ

ಮೈಸೂರು, ಏ.24(ಜಿಎ)–ದೇಶದಲ್ಲಿಯೇ ಮೊಟ್ಟ ಮೊದಲ ಪ್ರಜಾ ಪ್ರತಿನಿಧಿ ಸಭೆ ನಡೆದ ಮೈಸೂರಿಗೆ ರಾಜ ಪ್ರತಿನಿಧಿ ಬೇಕೋ ಅಥವಾ ಪ್ರಜಾ ಪ್ರತಿನಿಧಿ ಬೇಕೋ ಎಂದು ನಿರ್ಧರಿಸುವ ಸಮಯ ಬಂದಿದೆ ಎಂದು ಕೆಪಿಸಿಸಿ ವಕ್ತಾರೆ ತೇಜಸ್ವಿನಿ ಗೌಡ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಮೈಸೂರು-ಕೊಡಗು ಕ್ಷೇತ್ರದ ಆಕಾಂಕ್ಷಿಯಾಗಿದ್ದೆ, ಬಿಜೆಪಿಯಲ್ಲಿ ಸಾಕಷ್ಟು ಶ್ರಮಿಸಿದ್ದರಿಂದ ಬಿಜೆಪಿ ಪಕ್ಷದ ಮುಂದೆ ಬೇಡಿಕೆ ಇಟ್ಟಿದ್ದೆ. ಇದು ಸತ್ಯ. ಡಬಲ್ ಇಂಜಿನ್ ಸರ್ಕಾರ ಇದ್ದ ಸಂದರ್ಭದಲ್ಲಿ ಮೈಸೂರಿನ ಸ್ಮಾರ್ಟ್ ಸಿಟಿಗೆ ಎಷ್ಟು ಅನುದಾನ ಬಂದಿದೆ. ಆದರೆ, ಫಲಿತಾಂಶ ಕಾಣುತ್ತಿಲ್ಲ. ಹಾಗೇ ಇಲ್ಲಿನ ಪಾರಂಪರಿಕತೆ ಉಳಿಸಲು ಹಣ ಬಿಡುಗಡೆಯಾಗಿದೆ. ಆದರೆ, ಇಲ್ಲಿನ ಕಟ್ಟಡಗಳಿಗೆ ಪ್ಯಾಚ್ ವರ್ಕ್ ಮಾಡಿದ್ದಾರೆ. ಕಾಶಿ ಕಾರಿಡಾರ್ ಮಾಡಿದ್ದಾರೆ. ಆದರೆ, ಅಷ್ಟೊಂದು ಸೌಲಭ್ಯವಿರುವ ಮೈಸೂರಿನಲ್ಲಿ ಏಕೆ ಮಾಡಿಲ್ಲ ಅಭಿವೃದ್ಧಿ ಕಾರ್ಯಗಳನ್ನು ಪ್ರಶ್ನಿಸಬೇಕಿದೆ ಎಂದು ಹೇಳಿದರು.

ಮೈಸೂರು ಭಾಗದಲ್ಲಿ ಮಾತ್ರ ಒಕ್ಕಲಿಗರ ಪ್ರಾಬಲ್ಯವಿದೆ. ಈಗಾಗಲೇ ಕುಮಾರಸ್ವಾಮಿ ಅವರ ಕೋಟಾ ಮುಗಿದಿದ್ದು, ಅವರು ಉಂಡು ಹೋದ, ಕೊಂಡು ಹೋದ ಎಂಬಂತೆ ಬಿಜೆಪಿ ಮತ್ತು ಕಾಂಗ್ರೆಸ್ ಎರಡು ಪಕ್ಷಗಳಿಂದ ಮುಖ್ಯಮಂತ್ರಿಯಾಗಿದ್ದಾರೆ. ಸದ್ಯ ಕಾಂಗ್ರೆಸ್‌ನ ಡಿ.ಕೆ.ಶಿವಕುಮಾರ್ ಒಕ್ಕಲಿಗರ ನಾಯಕರಾಗಿ ಪ್ರಮುಖರಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಜೊತೆಗೆ ಕಾಂಗ್ರೆಸ್ ಮಾತ್ರ ಒಕ್ಕಲಿಗರಿಗೆ ಹೆಚ್ಚು ರಕ್ಷಣೆ ಮತ್ತು ಆದ್ಯತೆ ನೀಡಿದೆ. ಆದರೆ, ಯಡಿಯೂರಪ್ಪ ಅವರ ನಂತರ ಬಿಜೆಪಿಯಲ್ಲಿ ಆರ್.ಅಶೋಕ್ ಅವರನ್ನು ಮುಖ್ಯಮಂತ್ರಿ ಮಾಡಬಹುದಾಗಿತ್ತು. ಸಿ.ಟಿ.ರವಿ, ಪ್ರತಾಪಸಿಂಹಗೆ ಏಕೆ ಟಿಕೆಟ್ ನೀಡಲಿಲ್ಲ ಎಂದು ಪ್ರಶ್ನಿಸಿ ಬಿಜೆಪಿ ಸಮುದಾಯಗಳನ್ನು ಒಡೆದು ಆಳುವ ಕೆಲಸ ಮಾಡುತ್ತಿದೆ ಎಂದು ದೂರಿದರು.

ಯದುವೀರ್ ಮತ್ತು ಅವರ ಮನತನದ ಬಗ್ಗೆ ಸಾಕಷ್ಟು ಗೌರವಿದೆ. ಸುಧಾ ಮೂರ್ತಿಯವರಿಗೆ ಪ್ರಶಸ್ತಿ, ರಾಜ್ಯಸಭಾ ಸ್ಥಾನ ನೀಡುವ ಬದಲು ಯದುವೀರ್ ಅವರಿಗೂ ನೀಡಬೇಕಿತ್ತು. ರಾಜ್ಯದ ಮೇಕೆದಾಟು ಯೋಜನೆ ಪೂರ್ಣವಾಗಬೇಕಾದರೆ, ಡಿ.ಕೆ.ಸುರೇಶ್ ಅವರು ಆಯ್ಕೆಯಾಗಬೇಕು. ಹಾಗೇ ಕಾವೇರಿ ಸಮಸ್ಯೆ ಬಗೆಹರಿಸಬೇಕಾದರೆ, ಎಂ.ಲಕ್ಷ್ಮಣ್ ಅವರನ್ನು ಆಯ್ಕೆ ಮಾಡಿದರೆ, ಅವರು ಸಂಸತಿನಲ್ಲಿ ನಮ್ಮ ಗಟ್ಟಿ ಧ್ವನಿಯಾಗಿ ಮಾತನಾಡುತ್ತಾರೆ. ಆದ್ದರಿಂದ ಮತದಾರರು ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿ ಎಂದು ಕರೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಬಿ.ಪುಷ್ಪ ಅಮರನಾಥ್, ಪುಷ್ಪಲತಾ ಚಿಕ್ಕಣ್ಣ, ಲತಾ ಮೋಹನ್, ಶೋಭಾ ಮೋಹನ್ ಉಪಸ್ಥಿತರಿದ್ದರು.

ಮತದಾನ ಜಾಗೃತಿಗಾಗಿ ಪಂಜಿನ ಮೆರವಣಿಗೆ

ಮೈಸೂರು.ಏ.24– ಲೋಕಸಭಾ ಚುನಾವಣೆ ಹಿನ್ನೆಲೆ ಏಪ್ರಿಲ್ 26ರಂದು ಮತಗಟ್ಟೆಗಳಿಗೆ ತೆರಳಿ ತಪ್ಪದೇ ತಮ್ಮ ಮತವನ್ನು ಚಲಾಯಿಸುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹುಣಸೂರು ತಾಲೂಕು ಸ್ವೀಪ್ ಸಮಿತಿ ವತಿಯಿಂದ ಪಂಜಿನ ಮೆರವಣಿಗೆ ಜಾಥಾ ನಡೆಸಲಾಯಿತು.

ಕಲ್ಕುಣಿಕೆ ವೃತ್ತದ ಬಳಿಯಿರುವ ರಾಘವೇಂದ್ರ ಸ್ವಾಮಿ ಮಠದ ಮುಂಭಾಗದಿಂದ ಆಯೋಜಿಸಲಾಗಿದ್ದ ಪಂಜಿನ ಮೆರವಣಿಗೆ ಕಾರ್ಯಕ್ರಮಕ್ಕೆ ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಶಿವಕುಮಾರ ಪಂಜಿಗೆ ಬೆಳಕು ಹತ್ತಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಮತದಾನದ ದಿನದಂದು ಯಾವುದೇ ರೀತಿಯ ಸಮಸ್ಯೆಗಳಾಗದಂತೆ ನೋಡಿಕೊಳ್ಳುವಂತೆ, ಗ್ರಾಮ ಪಂಚಾಯಿತಿಗಳಲ್ಲಿ ಶೇ.100 ರಷ್ಟು ಮತದಾನವಾಗುವಂತೆ ಎಲ್ಲಾ ಅಧಿಕಾರಿಗಳು ಕ್ರಮ ವಹಿಸುವಂತೆ ಹಾಗೂ ಮತದಾರರನ್ನು ಮತಗಟ್ಟೆಗಳ ಕಡೆಗೆ ಕರೆತರಲು ಸೂಕ್ತ ವ್ಯವಸ್ಥೆ ಮಾಡುವಂತೆ ತಿಳಿಸಿದರು.

ಜಾಥಾದಲ್ಲಿ ನಮ್ಮ ನಡೆ ಮತಗಟ್ಟೆಯ ಕಡೆ, ಮರೆಯದಿರಿ ಏ.26ರಂದು ಮರೆಯದಿರಿ, ನಮ್ಮ ಮತ ನಮ್ಮ ಹಕ್ಕು ಹೀಗೆ ಸಾರ್ವಜನಿಕರು ಕಡ್ಡಾಯವಾಗಿ ಮತಗಟ್ಟೆಗಳಿಗೆ




ತೆರಳಿ ಮತ ಚಲಾಯಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ಪಂಜಿನ ಮೆರವಣಿಗೆಯ ಕಾಲ್ನಡಿಗೆ ಜಾಥಾವು ರಾಘವೇಂದ್ರ ಸ್ವಾಮಿ ದೇವಸ್ಥಾನದಿಂದ ಹೊರಟು ಕೆಹೆಚ್‌ಬಿ ಕಾಲೋನಿ, ಮರೂರಮ್ಮ ಕಾಲೋನಿ ಮಾರ್ಗವಾಗಿ ಹಾರಂಗಿ ಕಚೇರಿ, ಉಪವಿಭಾಗಾಧಿಕಾರಿಗಳ ವಸತಿ ಗೃಹದ ರಸ್ತೆ, ಪೊಲೀಸ್ ವಸತಿ ಗೃಹ ಹಾಗೂ ಸದಾಶಿವಯ್ಯನ ಕೊಪ್ಪಲು ಮಾರ್ಗವಾಗಿ ಕಲ್ಕುಣಿಕೆ ವೃತ್ತದಲ್ಲಿ ಅಂತ್ಯಗೊಂಡಿದ್ದು, ವಾರ್ಡ್ ನಂ.1ರಿಂದ 9 ರಲ್ಲಿರುವ ಮತಗಟ್ಟೆ ಸಂಖ್ಯೆ 129 ರಿಂದ 141ರಲ್ಲಿನ ನಿವಾಸಿಗಳಿಗೆ ಮತದಾನದ ಕುರಿತು ಅರಿವು ಮೂಡಿಸಲಾಯಿತು.

ತಾಲೂಕು ಯೋಜನಾಧಿಕಾರಿ ಎಂ.ಎಸ್.ರಾಜೇಶ್, ವ್ಯವಸ್ಥಾಪಕ ಮಹೇಶ್ ನಾಯಕ್, ಸಹಾಯಕ ನಿರ್ದೇಶಕ ಗಿರಿಧರ್, ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿಗಳಾದ ಚಂದ್ರಶೇಖರ್, ಲೋಕೇಶ್, ನಗರಸಭೆ ಸ್ವೀಪ್ ನೋಡಲ್ ಅಧಿಕಾರಿಗಳಾದ ಸೋಮಸುಂದರ್, ಶಶಿ, ತಾಲೂಕಿನ ಎಲ್ಲಾ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ಕರವಸೂಲಿಗಾರರು, ಕಂಪ್ಯೂಟರ್ ಆಪರೇಟರ್‌ಗಳು, ತಾಪಂ-ಗ್ರಾಪಂ ಸಿಬ್ಬಂದಿ ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಾಯಿ ತ್ರಿಪುರ ಸುಂದರಿ ದೇವಿ ಅಮ್ಮಣ್ಣಿಯವರು ದಾರಿಪುರದಲ್ಲಿ ಮಹಿಳೆಯರನ್ನು ಭೇಟಿ ಮಾಡಿ ಮತಯಾಚನೆ ಮಾಡಿದರು. ಈ ವೇಳೆ ಗ್ರಾಮದ ಮಹಿಳೆಯರು ಅವರಿಗೆ ಆರತಿ ಬೆಳಗಿ, ಸ್ವಾಗತಿಸಿ, ಫಲತಾಂಬೂಲ ನೀಡಿ, ಗೌರವಿಸಿದರು. ದಿವ್ಯ ಅರಸ್, ಗಾಯಿತ್ರಿದೇವಿ, ಸುಲೋಚನ, ಮಂಗಳಮ್ಮ, ಚಿನ್ನಮ್ಮ, ಶೃತಿ, ಸುಂದರಮ್ಮ, ರತ್ನಮ್ಮ, ಚಿನ್ನಮ್ಮ, ಮಲ್ಲೇಶ್, ಹರೀಶ್, ಗುರುಸ್ವಾಮಿ, ಹಿನಕಲ್ ಮಹೇಶ್, ಪರಮೇಶ್, ಗುರುಲಿಂಗಪ್ಪ, ಯುವ ಮೋರ್ಚಾ ಮಾಜಿ ಅಧ್ಯಕ್ಷ ಡಿ.ಚಂದ್ರಶೇಖರ್, ಗ್ರಾಮಸ್ಥರು ಹಾಜರಿದ್ದರು.



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಒಡೆಯರ್ ಅವರ ಪರ ಬಿಜೆಪಿ ಮುಖಂಡ ಅರುಣ್‌ಕುಮಾರ್‌ಗೌಡ ಎಸ್‌ಬಿಎಂ ಲೇಔಟ್‌ನಲ್ಲಿ ಮತಯಾಚಿಸಿದರು. ಈ ವೇಳೆ ಬೋಗಾದಿ ಗ್ರಾಪಂ ಮಾಜಿ ಅಧ್ಯಕ್ಷ ಹಾಲಿನ ಪುಟ್ಟೇಗೌಡ ಜೈಕುಮಾರ್, ಪಂಚಾಯಿತಿ ಮಾಜಿ ಸದಸ್ಯರಾದ ರವಿಕುಮಾರ್, ಕೆಂಚೇಗೌಡ, ಸ್ವಾಮಿ, ಮುಖಂಡರಾದ ನಂದೀಶ್, ಬಸವರಾಜ್, ಯಮುನಾ ಕೃಷ್ಣಮೂರ್ತಿ, ಬಸವೇಗೌಡ, ಮಾರುತಿ ಲೋಕೇಶ್, ಉಮೇಶ್, ಮಂಜು, ಅವಿನಾಶ್ ಮತ್ತಿತರರಿದ್ದರು.

ಬೈಕ್ ಜಾಥಾ ಮೂಲಕ ಮತದಾನ ಜಾಗೃತಿ



ಮೈಸೂರು.ಏ.24– ಲೋಕಸಭಾ ಚುನಾವಣೆಯಲ್ಲಿ ಮತದಾನ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮಂಗಳವಾರ ನಂಜನಗೂಡು ತಾಲೂಕು ಸ್ವೀಪ್ ಸಮಿತಿ ವತಿಯಿಂದ ಅಧಿಕಾರಿಗಳು ಬೈಕ್ ಜಾಥಾ ಮೂಲಕ ಕಡ್ಡಾಯ ಮತದಾನದ ಅರಿವು ಮೂಡಿಸಿದರು.

ಸಹಾಯಕ ಚುನಾವಣಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ (ಅಭಿವೃದ್ಧಿ) ಜಗನಾಥ್ ಮೂರ್ತಿ ಮಾತನಾಡಿ, ಶಕ್ತಿಯುತವಾದ ಹಾಗೂ ಹೆಚ್ಚು ಪರಿಣಾಮಕಾರಿಯಾದ ಮತದಾನವನ್ನು ಕಡ್ಡಾಯವಾಗಿ ಮಾಡಬೇಕು, ಮತ ಚಲಾಯಿಸುವುದು. ಸಂವಿಧಾನದ ಹಕ್ಕಾಗಿದ್ದು 18 ವರ್ಷ ಮೇಲ್ಪಟ್ಟ ಯಾವುದೇ ವ್ಯಕ್ತಿಯು ಮತದಾನ ಪ್ರಕ್ರಿಯೆಯಿಂದ ಹೊರಗುಳಿಯಬಾರದು ಎಂದರು.

ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿ ಮತದಾನ ಘೋಷ ವಾಕ್ಯಗಳ ಫಲಕ ಹಿಡಿದು ದ್ವಿಚಕ್ರ ವಾಹನ ಏರಿ ತಾಲೂಕು ಪಂಚಾಯಿತಿಯಿಂದ ಅಂಬೇಡ್ಕರ್ ವೃತ್ತ, ಶ್ರೀಕಂಠೇಶ್ವರ ದೇವಸ್ಥಾನ, ಎಂ.ಜಿ.ರಸ್ತೆ, ಮಾರುಕಟ್ಟೆ ರಸ್ತೆ, ದೇವಿರಮ್ಮನಹಳ್ಳಿ ಗೇಟ್ ಸರ್ಕಲ್ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಸಾಗಿ ಏ.26ರಂದು ತಪ್ಪದೇ ಮತ ಚಲಾಯಿಸುವಂತೆ ಪ್ರೇರೇಪಿಸಿದರು. ಕಾರ್ಯಕ್ರಮದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಪೂರ್ಣಿಮಾ, ಸಹಾಯಕ ನಿರ್ದೇಶಕ ಶಿವಕುಮಾರ್, ತಾಲೂಕು, ಗ್ರಾಪಂ ಸಿಬ್ಬಂದಿ ಹಾಜರಿದ್ದರು.

ಕಾಂಗ್ರೆಸ್ ಬೆಂಬಲಿಸಲು ದಲಿತ ಹೋರಾಟಗಾರರ ಒಕ್ಕೂಟ ಮನವಿ

ಮೈಸೂರು, ಏ.24(ಜಿಎ)–ಪ್ರಜಾಪ್ರಭುತ್ವ, ಸಮಾನತೆ, ಬಹುತ್ವ, ಒಕ್ಕೂಟ, ಸಂವಿಧಾನದ ಸಂಪೂರ್ಣ ಅನುಷ್ಠಾನ ಕೇವಲ ಕಾಂಗ್ರೆಸ್‌ನಿಂದಷ್ಟೇ ಸಾಧ್ಯ. ಹೀಗಾಗಿ ಲೋಕಸಭಾ ಚುನಾವಣೆಯಲ್ಲಿ ದಲಿತರು ಬಿಜೆಪಿ, ಜನತಾದಳ ಮೈತ್ರಿ ಅಭ್ಯರ್ಥಿಗಳ ಬದಲು ಕಾಂಗ್ರೆಸ್ಸನ್ನು ಬೆಂಬಲಿಸಬೇಕೆಂದು ಡಾ. ಬಿ.ಆರ್. ಅಂಬೇಡ್ಕರ್ ದಲಿತ ಹೋರಾಟಗಾರರ ಒಕ್ಕೂಟದ ರಾಜ್ಯಾಧ್ಯಕ್ಷ ಶ್ರೀಧರ ಕಲಿವೀರ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈತ್ರಿ ಪಕ್ಷಗಳು ಸುಳ್ಳು ಭರವಸೆಗಳೇ ತುಂಬಿರುವ ಪ್ರಣಾಳಿಕೆ ಸಂಕಲ್ಪ ಪತ್ರ ಹೊರತಂದು ಮತದಾರರನ್ನು ವಂಚಿಸುತ್ತಿವೆ. 400 ಸ್ಥಾನ ಗೆದ್ದು ಲೋಕಸಭೆ, ರಾಜ್ಯಸಭೆಗಳಲ್ಲಿ ಬಹುಮತ ಸಾಧಿಸಿ ಸಂವಿಧಾನ ಬದಲಾಯಿಸುವ ಗುರಿ ಎನ್‌ಡಿಎ ಹೊಂದಿದೆ ಎಂದು ಆರೋಪಿಸಿದರು.

ಬಿಜೆಪಿ ಅಸ್ಪೃಶ್ಯತೆ, ಅಸಮಾನತೆಗಳಿಗೆ ವಿರುದ್ಧ ಇದ್ದು, ಬಿಜೆಪಿಯ ಅಭ್ಯರ್ಥಿ ಯದುವೀರ್ ಅವರು ಬಿಜೆಪಿ ಸೇರಿರುವುದು ನಾಲ್ವಡಿ ಅವರ ಆಶಯಗಳಿಗೆ ವಿರುದ್ಧವಾಗಿದೆ. ಆದ್ದರಿಂದ ಲೋಕಸಭಾ ಚುನಾವಣೆಯಲ್ಲಿ ದಲಿತರು ಕಾಂಗ್ರೆಸ್ ಅಭ್ಯರ್ಥಿಗಳಾದ ಲಕ್ಷ್ಮಣ ಮತ್ತು ಸುನೀಲ್ ಬೋಸ್ ಅವರನ್ನು ಬೆಂಬಲಿಸಿ ಎಂದು ಕರೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಎಂ. ಗೋವಿಂದರಾಜು, ಎಂ. ಗುರುಮೂರ್ತಿ ಶಿವಮೊಗ್ಗ, ರಾಜಗೋಪಾಲ್, ಎ. ಗೋಪಾಲ್, ಬಸವರಾಜ ನೆಲಮಂಗಲ ಉಪಸ್ಥಿತರಿದ್ದರು.

ಪರಿಶಿಷ್ಟ ಸಮುದಾಯ ಕಾಂಗ್ರೆಸ್‌ಗೆ ಬೆಂಬಲ

ಮೈಸೂರು, ಏ.24(ಜಿಎ)– ಪರಿಶಿಷ್ಟ ಸಮುದಾಯದ ಎಡಗೈ ಮತ್ತು ಬಲಗೈ ಗುಂಪುಗಳು ಯಾವುದೇ ಗೊಂದಲವಿಲ್ಲದೆ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿವೆ ಎಂದು ದಸಂಸ ಜಿಲ್ಲಾ ಸಂಚಾಲಕ ಭುಗತಗಳ್ಳಿ ಕೆ.ಮಣಿಯಯ್ಯ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಬಿಜೆಪಿಯಿಂದ ನಮ್ಮ ಸಮುದಾಯಗಳ ಅಭಿವೃದ್ಧಿ ಸಾಧ್ಯವಿಲ್ಲ. ಎನ್.ಮಹೇಶ್ ಅಂತವರನ್ನು ಬಳಸಿ ನಮ್ಮ ಸಮುದಾಯಕ್ಕೆ ಅವಮಾನ ಮಾಡಲಾಗುತ್ತಿದೆ. ಕಾಂಗ್ರೆಸ್ ಗ್ಯಾರಂಟಿ ನಮ್ಮೆಲ್ಲರ ಅಭಿವೃದ್ಧಿಗೆ ಸಹಕರಿಸಿದ್ದು, ಎಲ್ಲ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಲು ಪರಿಶಿಷ್ಟರ ಎರಡೂ ಗುಂಪುಗಳು ಮುಂದಾಗಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಮುಖಂಡರಾದ ಬೊಕ್ಕಳ್ಳಿ ಲಿಂಗಯ್ಯ, ಈಶ್ವರ್ ಬೊಮ್ಮನಹಳ್ಳಿ, ಪುಟ್ಟಮಾದಯ್ಯ, ಸುರೇಶ್ ಇದ್ದರು.

ಕಾಯಕ ಸಮುದಾಯ ಎಂ.ಲಕ್ಷ್ಮಣ, ಸುನೀಲ್ ಬೋಸ್ ಬೆಂಬಲಿಸಲಿ

ಕಾಂಗ್ರೆಸ್ ಹಿಂದುಳಿದ ವರ್ಗಗಳ ಅಧ್ಯಕ್ಷ ಎನ್.ಆರ್.ನಾಗೇಶ್ ಮನವಿ

ಮೈಸೂರು, ಏ.24(ಜಿಎ)–ಕಾಂಗ್ರೆಸ್ ಅಭ್ಯರ್ಥಿಗಳಾದ ಎಂ.ಲಕ್ಷ್ಮಣ ಮತ್ತು ಚಾಮರಾಜನಗರ ಕ್ಷೇತ್ರದಲ್ಲಿ ಸುನೀಲ್ ಬೋಸ್ ಅವರನ್ನು ಗೆಲ್ಲಿಸಲು ಕಾಯಕ ಸಮುದಾಯ ಮುಂದಾಗಬೇಕು ಎಂದು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎನ್.ಆರ್.ನಾಗೇಶ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಾತನಾಡಿದ ಅವರು, ನೊಂದ ಸಮಾಜಗಳ ಪರವಾಗಿ ಕಾಂಗ್ರೆಸ್ ಪಕ್ಷ ಬಿಟ್ಟರೆ, ಬೇರೆ ಯಾವುದೇ ಪಕ್ಷಗಳು ಯೋಜನೆಗಳನ್ನು ನೀಡಿಲ್ಲ. ಸವಿತಾ ಸಮಾಜ, ಮಡಿವಾಳ, ಯಾದವ, ಈಡಿಗ, ನೇಕಾರ ವಿಶ್ವಕರ್ಮ, ಗಾಣಿಗ, ಉಪ್ಪಾರ ಹೀಗೆ ಅನೇಕ ಸಮಾಜಗಳಿಗೆ ಸಮಾಜದ ಮಹಾಪುರುಷರ ಜಯಂತಿ, ನಿಗಮ ಸ್ಥಾಪನೆ, ನಿಗಮ ಮಂಡಳಿಗಳಲ್ಲಿ ಸ್ಥಾನ ಸೇರಿದಂತೆ ರಾಜಕೀಯವಾಗಿ ಸ್ಥಾನಮಾನ ನೀಡಿದೆ ಎಂದರು.

2013ರಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ನೊಂದ ಸಮಾಜಗಳಿಗೆ ಸಾಕಷ್ಟು ಯೋಜನೆಗಳನ್ನು ನೀಡಿದ್ದಾರೆ. ಆದ್ದರಿಂದ ಹಿಂದುಳಿದ ಸಮುದಾಯಗಳನ್ನು ಬೆಂಬಲಿಸಲು ಕಾಂಗ್ರೆಸ್ ಪಕ್ಷ ಬದ್ಧವಾಗಿದೆ. ಗ್ಯಾರಂಟಿ ಅನುಷ್ಠಾನಕ್ಕೆ ತಂದು ನುಡಿದಂತೆ ನಡೆದಿದೆ. ಶೋಷಿತರ ಪರವಿರುವ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಮುಖ್ಯ ಎಂದರು.

ಸುದ್ದಿಗೋಷ್ಠಿಯಲ್ಲಿ ವಿಭಾಗದ ಮುಖಂಡರಾದ ಶ್ರೀಕಾಂತ್, ಕಮಲಾ ಅನಂತರಾಮ್, ರಾಜ, ದಿವಾಕರ್, ಮಹೇಶ್, ರವಿಕುಮಾರ್, ಕಿರಣ್ ಕುಮಾರ್ ಉಪಸ್ಥಿತರಿದ್ದರು.



ಮೈಸೂರು ವಿಜಯನಗರದಲ್ಲಿರುವ ಯೋಗನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ವಿಶ್ವ ಹಿಂದೂ ಪರಿಷತ್ ವತಿಯಿಂದ ಭಕ್ತಾದಿಗಳಿಗೆ ಕಡ್ಡಾಯ ಮತದಾನದ ಜಾಗೃತಿ ಮೂಡಿಸಲಾಯಿತು. ಇದೇ ಸಂದರ್ಭದಲ್ಲಿ ವಿಶ್ವ ಹಿಂದೂ ಪರಿಷದ್ ವಿಭಾಗ ಸಂಯೋಜಕಿ ಸವಿತಾ ಘಾಟ್ಕೆ, ಸಹ ಕಾರ್ಯದರ್ಶಿ ಜಯಶ್ರೀ, ಗಿರಿಜಾ, ಸುಧಾ, ರಾಣಿ ಹಾಗೂ ಇನ್ನಿತರರು ಹಾಜರಿದ್ದರು.



ಮೈಸೂರಿನ ವಾರ್ಡ್ ನಂ.41ರ ಕೆ.ಟಿ.ಸ್ಟ್ರೀಟ್, ಸೊಪ್ಪಿನ ಕೇರಿ, ಒಕ್ಕಲಗೇರಿ ಭಾಗದಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಒಡೆಯರ್ ಪರವಾಗಿ ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ ಪ್ರಚಾರ ನಡೆಸಿದರು. ಈ ವೇಳೆ ಬಿಜೆಪಿ ಮುಖಂಡರಾದ ಶಾಂತಿ, ಹರೀಶ್, ಗಣೇಶ್, ಶಿವು, ದರ್ಶನ್, ದಿವಾಕರ್, ನಿತಿನ್ ಹಾಗೂ ಯುವ ಮುಖಂಡರು ಉಪಸ್ಥಿತರಿದ್ದರು

ನೇಹಾ ಹಿರೇಮಠ ಹತ್ಯೆಗೆ ಖಂಡನೆ

ಮೈಸೂರು,ಏ.24–ಇತ್ತೀಚೆಗೆ ಹುಬ್ಬಳ್ಳಿಯ ಕಾಲೇಜಿನಲ್ಲಿ ಹಾಡುಹಗಲೇ ನಡೆದ ನೇಹಾ ಹಿರೇಮಠ ಹತ್ಯೆಯನ್ನು ಮೈಸೂರು ನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕರಾಜ್ ಖಂಡಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಶಿಕ್ಷಣಕ್ಕಾಗಿ ಶಾಲಾ-ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳಿಗೆ ರಾಜ್ಯದಲ್ಲಿ ಸುರಕ್ಷತೆ ಇಲ್ಲದಂತಾಗಿರುವುದು ಆತಂಕಕಾರಿ ವಿಚಾರ. ಅಲ್ಪಸಂಖ್ಯಾತರ ತುಷ್ಟೀಕರಣಕ್ಕೆ ಹಿಂದೂ ಸಮಾಜದ ಮನೆ ಮಕ್ಕಳು ಬಲಿಯಾಗುತ್ತಿರುವುದು ನಿಜಕ್ಕೂ ದೌರ್ಭಾಗ್ಯದ ಸಂಗತಿ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆ. ತಪ್ಪಿತಸ್ಥ ಫಯಾಜ್‌ನಿಗೆ ನೀಡುವ ಶಿಕ್ಷೆ ಮುಂದೆ ಸಮಾಜದಲ್ಲಿ ಧನಾತ್ಮಕ ಬದಲಾವಣೆಗೆ ನಾಂದಿಯಾಗಿ ಜನಸಾಮಾನ್ಯರಲ್ಲಿ ಧೈರ್ಯ ಮೂಡುವಂತಾಗಬೇಕು. ಪಾಲಕರೂ ಸಹ ಶಾಲಾ-ಕಾಲೇಜಿಗೆ ಹೋಗುವ ಮಕ್ಕಳ ಚಲನವಲನಗಳ ಕುರಿತು ಹೆಚ್ಚು ಜವಾಬ್ದಾರಿ ವಹಿಸಬೇಕು ಎಂದಿದ್ದಾರೆ.

ಸಂವಿಧಾನದ ಹಕ್ಕು ಕಸಿಯುವ ಪಕ್ಷ ತಿರಸ್ಕರಿಸಿ

ಮಾನವ ಬಂಧುತ್ವ ವೇದಿಕೆ ಮನವಿ

ಮೈಸೂರು, ಏ.24(ಜಿಎ)–ಧರ್ಮ, ದೇವರ ಹೆಸರಲ್ಲಿ ಮತ ಕೇಳುವ, ಕೋಮುವಾದ ಪ್ರತಿಪಾದಿಸುವ, ಸಂವಿಧಾನ ಹಕ್ಕುಗಳನ್ನು ಕಸಿಯುವ ಪಕ್ಷವನ್ನು ಜನತೆ ವಿರೋಧಿಸಬೇಕು ಎಂದು ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಎ.ಬಿ. ರಾಮಚಂದ್ರಪ್ಪ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಳೆದ ಹತ್ತು ವರ್ಷದಲ್ಲಿ 27 ಬೃಹತ್ ಉದ್ಯಮಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿದೆ. ದೇಶದ ಸಾಮರಸ್ಯ, ಭ್ರಾತೃತ್ವಕ್ಕೆ ಧಕ್ಕೆ ತಂದಿದೆ. ಪ್ರಜಾಪ್ರಭುತ್ವ ಉಳಿಸಲು ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ನೀಡಬೇಕು. ಆದ್ದರಿಂದ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಮಹಿಳಾ ಘಟಕದ ಸಂಚಾಲಕಿ ಲೀಲಾ ಸಂಪಿಗೆ, ಜಿಲ್ಲಾ ಸಂಚಾಲಕ ದ್ಯಾವಪ್ಪನಾಯಕ, ವಿಭಾಗೀಯ ಸಂಚಾಲಕ ಸತೀಶ್‌ಕುಮಾರ್, ಸಂವಿಧಾನ ಹಿತರಕ್ಷಣ ಸಮಿತಿ ನಗರಾಧ್ಯಕ್ಷ ಸತ್ಯನಾರಾಯಣ್ ಉಪಸ್ಥಿತರಿದ್ದರು.

ನಾಳೆ ಮಂಡ್ಯ ಲೋಕಸಭಾ ಚುನಾವಣೆ

ಮತದಾನಕ್ಕೆ ಸಕಲ ಸಿದ್ಧತೆ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ

ಮತದಾನದ ದಿನ ವೇತನ ಸಹಿತ ರಜೆ

ಏ.26 ರಂದು ಮತದಾನ ನಡೆಯಲಿದ್ದು, ಮತದಾನ ದಿನದಂದು ಮತ ಚಲಾಯಿಸಲು ಅನುಕೂಲವಾಗುವಂತೆ ಅರ್ಹ ಮತದಾರರಾಗಿರುವ ಎಲ್ಲಾ ವ್ಯವಹಾರಿಕಾ ಸಂಸ್ಥೆಗಳು, ಔದ್ಯಮಿಕ ಸಂಸ್ಥೆಗಳು ಮತ್ತು ಇನ್ನಿತರೆ ಸಂಸ್ಥೆಗಳಲ್ಲಿ ಕಾಯಂ ಆಗಿ ಅಥವಾ ದಿನ ಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ ಮತದಾನ ಮಾಡಲು ಅನುಕೂಲವಾಗುವಂತೆ ಪ್ರಜಾ ಪ್ರತಿನಿಧಿ ಕಾಯ್ದೆ–1951 ರ ಕಲಂ 135 (ಬಿ) ಅಡಿಯಲ್ಲಿ ಎಲ್ಲಾ ಉಪಬಂಧಗಳಿಗೆ ಒಳಪಟ್ಟು ವೇತನ ಸಹಿತ ರಜೆ ನೀಡಲಾಗುವುದು ಎಂದರು.

ಮಾದರಿ ನೀತಿ ಜಾರಿಯಾದ ಮಾ.16 ರಿಂದ ಏ.23 ರವರೆಗೆ ರೂ. 1,06,08,990/–ನಗದು, ರೂ.1,50,27,871.39/– ಮೌಲ್ಯದ ಮದ್ಯ, ರೂ. 2,17,040 ಮೌಲ್ಯದ ಡ್ರಗ್ಸ್ ಹಾಗೂ ರೂ. 40,000 ಮೌಲ್ಯದ 2000 ಸೀರೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು. ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 1822 ಮತಗಟ್ಟೆಯಲ್ಲಿ ಕಾರ್ಯ ನಿರ್ವಹಿಸಲು 2099 ಪಿಆರ್‌ಓಗಳು, 2099 ಎಪಿಆರ್‌ಓಗಳು, 4198 ಪಿಓಗಳು, ಒಟ್ಟು 8396 ಸಿಬ್ಬಂದಿಗಳನ್ನು ನೇಮಕ ಮಾಡಿ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.

ಮಂಡ್ಯ,ಏ.24– ಏ.26ರಂದು ನಡೆಯಲಿರುವ ಮಂಡ್ಯ ಲೋಕಸಭಾ ಕ್ಷೇತ್ರದ ಮತದಾನಕ್ಕೆ ಸಕಲ ರೀತಿಯಲ್ಲೂ ಜಿಲ್ಲಾಡಳಿತ ಸಜ್ಜುಗೊಂಡಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಬುಧವಾರ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರ ವ್ಯಾಪ್ತಿಗೆ ಸಂಬಂಧಿಸಿದಂತೆ ಏ.4ರಂದು ಪ್ರಕಟವಾಗಿರುವ ಅಂತಿಮ ಮತದಾರರ ಪಟ್ಟಿಯಂತೆ 17,79,243 ಮತದಾರರಿದ್ದಾರೆ. ಮಳವಳ್ಳಿಯಲ್ಲಿ ಗಂಡು –126118, ಹೆಣ್ಣು–127487, ತೃತೀಯ ಲಿಂಗಿಗಳು–23, ಒಟ್ಟು 253628 ಮತದಾರರಿದ್ದಾರೆ. ಮದ್ದೂರಿನಲ್ಲಿ ಗಂಡು–104280, ಹೆಣ್ಣು–111443, ತೃತೀಯ ಲಿಂಗಿಗಳು–22, ಒಟ್ಟು 215745 ಮತದಾರರಿದ್ದಾರೆ. ಮೇಲುಕೋಟೆಯಲ್ಲಿ ಗಂಡು –100379, ಹೆಣ್ಣು–103010, ತೃತೀಯ ಲಿಂಗಿಗಳು–9, ಒಟ್ಟು 203398 ಮತದಾರರಿದ್ದಾರೆ ಎಂದು ವಿವರಿಸಿದರು.

ಮಂಡ್ಯದಲ್ಲಿ ಗಂಡು–111868, ಹೆಣ್ಣು–117759, ತೃತೀಯಲಿಂಗಿಗಳು– 36, ಒಟ್ಟು 229663 ಮತದಾರರಿದ್ದಾರೆ. ಶ್ರೀರಂಗಪಟ್ಟಣ ಗಂಡು–106157, ಹೆಣ್ಣು–111431, ತೃತೀಯಲಿಂಗಿಗಳು– 44, ಒಟ್ಟು 217632 ಮತದಾರರಿದ್ದಾರೆ. ನಾಗಮಂಗಲದಲ್ಲಿ ಗಂಡು–107760, ಹೆಣ್ಣು–108783, ತೃತೀಯಲಿಂಗಿಗಳು–11, ಒಟ್ಟು 216554 ಮತದಾರರಿದ್ದಾರೆ. ಕೃಷ್ಣರಾಜಪೇಟೆಯಲ್ಲಿ ಗಂಡು–111542 ಹೆಣ್ಣು–112284 ತೃತೀಯ ಲಿಂಗಿಗಳು– 11, ಒಟ್ಟು 223837 ಮತದಾರರಿದ್ದಾರೆ ಹಾಗೂ ಕೆಆರ್.ನಗರದಲ್ಲಿ ಗಂಡು–108008, ಹೆಣ್ಣು–110766, ತೃತೀಯ ಲಿಂಗಿಗಳು– 12, ಒಟ್ಟು 218786 ಮತದಾರರಿದ್ದಾರೆ ಎಂದು ತಿಳಿಸಿದರು.

2076 ಮತಗಟ್ಟೆಗಳು: ಮತದಾನಕ್ಕಾಗಿ 2076 ಮತಗಟ್ಟೆಗಳನ್ನು ಸಿದ್ಧಪಡಿಸಲಾಗಿದ್ದು, ಎಲ್ಲಾ ರೀತಿಯ ಮೂಲಭೂತ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆ ಮಳವಳ್ಳಿ–272, ಮದ್ದೂರು–254, ಮೇಲುಕೋಟೆ–264, ಮಂಡ್ಯ–264, ಶ್ರೀರಂಗಪಟ್ಟಣ–249, ನಾಗಮಂಗಲ–260, ಕೃಷ್ಣರಾಜಪೇಟೆ–261, ಕೆ. ಆರ್ ನಗರ–252 ಮತಗಟ್ಟೆಗಳಿವೆ ಎಂದರು.

1120 ಮತಗಟ್ಟೆಗಳಲ್ಲಿ ವೆಬ್ ಕ್ಯಾಸ್ಟಿಂಗ್: ಮಳವಳ್ಳಿ– 137, ಮದ್ದೂರು–127, ಮೇಲುಕೋಟೆ– 192, ಮಂಡ್ಯ–131, ಶ್ರೀರಂಗಪಟ್ಟಣ– 125, ನಾಗಮಂಗಲ– 150, ಕೃಷ್ಣರಾಜಪೇಟೆ– 132, ಕೆಆರ್. ನಗರ– 126, ಒಟ್ಟು– 1120 ಮತಗಟ್ಟೆಗಳಲ್ಲಿ ವೆಬ್ ಕಾಸ್ಟಿಂಗ್ ಅನ್ನು ಅಳವಡಿಸಲಾಗುವುದು ಎಂದರು.

ಮದ್ಯ ಮಾರಾಟ ಬಂದ್

ಚುನಾವಣೆಯ ಮತದಾನವು ಏಪ್ರಿಲ್ 26ರಂದು ಹಾಗೂ ಮತ ಎಣಿಕೆಯ ಕಾರ್ಯವು ಜೂ.4 ರಂದು ನಡೆಯಲಿದೆ. ಮತದಾನದ ಸಮಯದಲ್ಲಿ ಹಾಗೂ ಮತ ಎಣಿಕೆ ಸಮಯದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಮತದಾನದ ದಿನದಂದು ಮತದಾರರಿಗೆ ಮುಕ್ತ ಮತ್ತು ನ್ಯಾಯೋಚಿತ ಮತದಾನಕ್ಕೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಮತದಾನ ಮತ್ತು ಮತ ಎಣಿಕೆ ದಿನದಂದು ಶುಷ್ಕ ದಿನವೆಂದು ಘೋಷಿಸಲಾಗಿದೆ. ಮಂಡ್ಯ ಜಿಲ್ಲೆಯಾದ್ಯಂತ ಏ.24 ರ ಸಂಜೆ 6 ಗಂಟೆಯಿಂದ ಏ.27 ರ ಬೆಳಿಗ್ಗೆ 6 ಗಂಟೆಯವರೆಗೆ ಹಾಗೂ ಮಂಡ್ಯ ವಿಶ್ವವಿದ್ಯಾನಿಲಯ ವಾಣಿಜ್ಯ ವಿಭಾಗದಲ್ಲಿ ಜೂ.4 ರಂದು ಮತ ಎಣಿಕೆ ಕಾರ್ಯವು ನಡೆಯುವ ಹಿನ್ನೆಲೆ ಮಂಡ್ಯ ನಗರ ವ್ಯಾಪ್ತಿ ಹಾಗೂ ನಗರದ ವ್ಯಾಪ್ತಿಯಿಂದ 5 ಕಿ.ಮೀ. ಸುತ್ತಳತೆ ವ್ಯಾಪ್ತಿಯಲ್ಲಿ ಜೂ.3ರಂದು ಸಂಜೆ 6 ಗಂಟೆಯಿಂದ ಜೂ.5 ರ ಬೆಳಿಗ್ಗೆ 6 ಗಂಟೆಯವರೆಗೆ ಎಲ್ಲಾ ತರಹದ ಮದ್ಯದ ಅಂಗಡಿ, ಬಾರ್ ಅಂಡ್ ರೆಸ್ಟೋರೆಂಟ್ /ಕ್ಲಬ್‌ಗಳನ್ನು ಮುಚ್ಚುವಂತೆ ಹಾಗೂ ಸದರಿ ಅವಧಿಯಲ್ಲಿ ಮದ್ಯ ತಯಾರಿಕ ಘಟಕಗಳು, ಮದ್ಯ ಮಾರಾಟ, ಹಂಚಿಕೆ ಸಾಗಾಣಿಕೆ ಮತ್ತು ಶೇಖರಣೆ ಮಾಡುವುದನ್ನು ನಿಷೇಧಿಸಿ ಶುಷ್ಕ ದಿನಗಳೆಂದು ಆದೇಶ ಹೊರಡಿಸಲಾಗಿದೆ ಎಂದರು.

ಮತದಾನವು ಏ.26 ರಂದು ನಡೆಯಲಿದ್ದು, ಸ್ಥಳೀಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮತದಾರರಲ್ಲದ ರಾಜಕೀಯ ಮುಖಂಡರು, ಕಾರ್ಯಕರ್ತರು, ಸ್ಟಾರ್ ಕ್ಯಾಂಪೇನರ್‌ಗಳು, ಮೆರವಣಿಗೆ ಆಯೋಜಕರು ಸೇರಿದಂತೆ ಮತ್ತಿತರರು ಏ.24 ರಂದು ಸಂಜೆ 6 ಗಂಟೆಗೆ ಕ್ಷೇತ್ರ ಬಿಡಬೇಕೆಂದು ಈಗಾಗಲೇ ಸಂಬಂಧಪಟ್ಟ ಸಹಾಯ ಚುನಾವಣಾ ಅಧಿಕಾರಿಗಳಿಗೆ ಮತ್ತು ಆಯಾ ತಹಶಿಲ್ದಾರ್‌ರವರಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಮತದಾನದ ಕೊನೆಯ 48 ಗಂಟೆ ಅವಧಿಗೆ ಒಬ್ಬ ಅಭ್ಯರ್ಥಿಗೆ ಮೂರು ವಾಹನಗಳು ಮಾತ್ರ ಬಳಕೆಗೆ ಅವಕಾಶವಿರುತ್ತದೆ. ಅಭ್ಯರ್ಥಿಯ ಅನುಪಸ್ಥಿತಿಯಲ್ಲಿ ಅಭ್ಯರ್ಥಿಗೆ ನೀಡಿದ ವಾಹನವನ್ನು ಇತರರು ಉಪಯೋಗಿಸುವಂತಿಲ್ಲ. ಅನುಮತಿಸಿದ ವಾಹನಗಳಲ್ಲಿ ಐದು ಜನಕ್ಕಿಂತ ಹೆಚ್ಚು ಜನರು ಪ್ರಯಾಣಿಸತಕ್ಕದ್ದಲ್ಲ. ಈ ಅವಧಿಯಲ್ಲಿ 5 ಜನಕ್ಕಿಂತ ಹೆಚ್ಚಿನ ಜನ ಸೇರದಂತೆ ಸಿ.ಆರ್.ಪಿ.ಸಿ ಕಲಂ 144 ರಡಿ ನಿಷೇಧಾಜ್ಞೆ ಹೊರಡಿಸಲಾಗಿದೆ ಎಂದರು.

ಗೋಷ್ಠಿಯಲ್ಲಿ ಜಿ.ಪಂ. ಸಿಇಓ ಶೇಕ್ ತನ್ವಿರ್ ಆಸೀಫ್, ಎಸ್ಪಿ ಎನ್.ಯತೀಶ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು, ಚುನಾವಣಾ ತಹಶೀಲ್ದಾರ್ ವೆಂಕಟಾಚಲಪತಿ, ವಾರ್ತಾಧಿಕಾರಿ ಎಚ್.ಎಸ್.ನಿರ್ಮಲಾ ಉಪಸ್ಥಿತರಿದ್ದರು.

ಬಹಿರಂಗ ಪ್ರಚಾರಕ್ಕೆ ತೆರೆ: ಎರಡೂ ಪಕ್ಷದ ಅಭ್ಯರ್ಥಿಗಳಿಂದ ಅಂತಿಮ ಕ್ಷಣದ ಕಸರತ್ತು

ಮಂಡ್ಯ ನಗರದಲ್ಲಿ ಹೆಚ್ಡಿಕೆ ಭರ್ಜರಿ ರೋಡ್ ಶೋ



ಎನ್‌ಡಿಎ ಅಭ್ಯರ್ಥಿ ಕುಮಾರಸ್ವಾಮಿ ಅವರ ಭರ್ಜರಿ ರೋಡ್ ಶೋ

ಮಂಡ್ಯ,ಏ.24– ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ(ಸ್ಟಾರ್‌ಚಂದ್ರು) ಬಹಿರಂಗ ಪ್ರಚಾರದ ಕೊನೆಯ ದಿನವಾದ ಬುಧವಾರ ಮಂಡ್ಯದಲ್ಲಿ ಭರ್ಜರಿ ರೋಡ್ ಶೋ ನಡೆಸುವ ಮೂಲಕ ಶಕ್ತಿ ಪ್ರದರ್ಶನ ನಡೆಸಿದರು.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಹೆಚ್ಡಿಕೆ ರೋಡ್‌ಶೋಗೆ ಸಾವಿರಾರು ಮಂದಿ ಸಾಕ್ಷಿಯಾದರು. ಮಂಡ್ಯ ವಿಶ್ವವಿದ್ಯಾನಿಲಯ ಆವರಣದಿಂದ ಪುತ್ರ ನಿಖಿಲ್ ಕುಮಾರಸ್ವಾಮಿ ಹಾಗೂ ಜೆಡಿಎಸ್ ಮುಖಂಡರ ಜೊತೆಗೂಡಿ ರೋಡ್ ಶೋ ಮೂಲಕ ಮತಯಾಚನೆಗೆ ಹೊರಟು ಸಂಜಯ ವೃತ್ತದವರೆಗೆ ಮೈತ್ರಿ ಪಕ್ಷದ ಅಭ್ಯರ್ಥಿಗೆ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಜಯಘೋಷ ಮೊಳಗಿಸಿ ಹರ್ಷೋದ್ಗಾರದ ನಡುವೆ ಪುಷ್ಪಾರ್ಚನೆ ಮೂಲಕ ಹೆಜ್ಜೆ ಹಾಕಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹೆಚ್ಡಿಕೆ, ಮಂಡ್ಯ ಜಿಲ್ಲೆಯ ಜನರು ನನಗೆ ರಾಜಕೀಯವಾಗಿ ಶಕ್ತಿ ಕೊಟ್ಟಿದ್ದಾರೆ. ನಾನು ಎರಡು ಬಾರಿ ಮುಖ್ಯಮಂತ್ರಿಯಾಗಲು ಮಂಡ್ಯ ಜನರ ಕೊಡುಗೆ ಅಪಾರವಾಗಿದೆ. ಈ ಭಾಗದ ಜನರ ಸಮಸ್ಯೆಗೂ ನಾನು ಸ್ಪಂದಿಸಿದ್ದೇನೆ. ಕಾಂಗ್ರೆಸ್ಸಿಗರ ವಿರೋಧದ ನಡುವೆಯೂ ಮೈತ್ರಿ ಸರ್ಕಾರದಲ್ಲಿ ರೈತರ ಸಾಲಮನ್ನಾ ಮಾಡಿದ್ದೇನೆ. ಜೊತೆಗೆ ರೈತರು ಆತ್ಮಹತ್ಯೆ ಮಾಡಿಕೊಂಡಾಗ ಅವರ ಮನೆಗಳಿಗೆ ಭೇಟಿ ಕೊಟ್ಟು ಸಾಂತ್ವನ ಹೇಳಿದ್ದೇನೆ. ರೈತರ ಬದುಕು ಆಸನಾಗಬೇಕೆಂದರೆ ನನಗೊಂದು ಅವಕಾಶ ಕೊಡಿ ಎಂದು ಮನವಿ ಮಾಡಿದರು.

ರಾಜ್ಯ ಸರ್ಕಾರ ಕಾವೇರಿ ನೀರನ್ನು ಸಂಪೂರ್ಣವಾಗಿ ತಮಿಳುನಾಡಿಗೆ ಬಿಟ್ಟು ಮಂಡ್ಯ ಜನ ಬರದಿಂದ ಕಂಗೆಡುವಂತೆ ಮಾಡಿದೆ ಕಾವೇರಿ ವಿಚಾರದಲ್ಲಿ ಜಿಲ್ಲೆಯ ಜನರಿಗೆ ನ್ಯಾಯ ಸಿಕ್ಕೇ ಸಿಗುತ್ತದೆ. ಮೋದಿ ಅವರ ಬಳಿ ಈ ಬಗ್ಗೆ ಮಾತನಾಡಿ ಕಾವೇರಿಗೆ ಶಾಶ್ವತ ಪರಿಹಾರ ಒದಗಿಸುವ ಕಾರ್ಯವನ್ನು ನನಗೆ ಬಿಡಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್‌ಕುಮಾರಸ್ವಾಮಿ, ಮಾಜಿ ಶಾಸಕರಾದ ಜಿ.ಬಿ.ಶಿವಕುಮಾರ್, ಕೆ.ಟಿ.ಶ್ರೀಕಂಠೇಗೌಡ, ಮುಖಂಡರಾದ ಬಿ.ಆರ್.ರಾಮಚಂದ್ರ, ಅಶೋಕ್ ಜಯರಾಂ, ಡಿ.ರಮೇಶ್, ಕೆ.ಎಸ್.ವಿಜಯಾನಂದ, ಚುದಗಾಲು ಶಿವಣ್ಣ ಎಂ.ಪಿ.ಅರುಣ್ ಕುಮಾರ್ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು. 10 ಸಾವಿರಕ್ಕೂ ಅಧಿಕ ಮಂದಿ ರೋಡ್‌ಶೋಗೆ ಸಾಕ್ಷಿಯಾದರು.

ಇದಕ್ಕೂ ಮುನ್ನ ಮಾಜಿ ಸಿಎಂ ಹೆಚ್ಡಿಕೆ ಮದ್ದೂರು ತಾಲೂಕಿನ ಕೊಪ್ಪದಲ್ಲಿ ಮಾಜಿ ಶಾಸಕ ಕೆ.ಸುರೇಶ್‌ಗೌಡ ಜೊತೆಗೆ ಭರ್ಜರಿ ರೋಡ್‌ಶೋ ನಡೆಸಿದರು. ಮಂಡ್ಯದ ವಕೀಲರ ಸಂಘಕ್ಕೆ ಭೇಟಿ ಕೊಟ್ಟು ಅಲ್ಲೂ ಸಹ ವಕೀಲ ಮತದಾರರ ಬಳಿ ಮತಯಾಚಿಸಿದರು.

ಮಂಡ್ಯದಲ್ಲಿ ಸ್ಟಾರ್‌ಚಂದ್ರು ರೋಡ್ ಶೋ



ಮಂಡ್ಯದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್‌ಚಂದ್ರು ಭರ್ಜರಿ ರೋಡ್ ಶೋ ನಡೆಸಿದರು

ಮಂಡ್ಯ,ಏ.24– ಮಂಡ್ಯ ಲೋಕಸಭಾ ಚುನಾವಣೆಯ ಬಹಿರಂಗ ಪ್ರಚಾರದ ಕೊನೆಯ ದಿನ ಕಾಂಗ್ರೆಸ್ ಪಕ್ಷದ ಮುಖಂಡರು ಮಂಡ್ಯ ನಗರದಲ್ಲಿ ಬೃಹತ್ ರ‍್ಯಾಲಿ ನಡೆಸಿದರು.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರವಾಗಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ರವಿಕುಮಾರ್ ಗಣಿಗ ಜೊತೆಗೂಡಿ ಕೊನೆಯ ದಿನದ ಪ್ರಚಾರ ಮಾಡಿದರು.

ನಗರದ ಕಾರಿಮನೆ ಗೇಟ್‌ನಿಂದ ಬೈಕ್ ರ‍್ಯಾಲಿ ಮೂಲಕ ಪ್ರಚಾರ ಆರಂಭಿಸಿದ ಕಾಂಗ್ರೆಸ್ ನಾಯಕರು ಬೆಂಗಳೂರು–ಮೈಸೂರು ಹೆದ್ದಾರಿ ಮೂಲಕ ಜಯಚಾಮರಾಜೇಂದ್ರ ಒಡೆಯರ್ ವೃತ್ತ ಆರ್.ಪಿ.ರಸ್ತೆ ಅಂಬೇಡ್ಕರ್ ರಸ್ತೆಯಲ್ಲಿ ಮತಯಾಚಿಸಿ ಹೊಸಹಳ್ಳಿ ಸೇರಿದಂತೆ ಮಂಡ್ಯ ನಗರ ಭಾಗದಲ್ಲಿ ಭರ್ಜರಿ ಮತಬೇಟೆ ನಡೆಸಿದರು.

ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಸರ್ಕಾರ ಕೊಟ್ಟಿರುವ ಯೋಜನೆಗಳು ಈಗಾಗಲೇ ಜನರ ಮನೆ ಬಾಗಿಲಿಗೆ ತಲುಪಿದೆ. ಕೇಂದ್ರ ಸರ್ಕಾರದ ಮತ್ತಷ್ಟು ಯೋಜನೆಗಳು ನಿಮ್ಮ ಬಳಿಗೆ ಬರಬೇಕೆಂದರೆ ಕೇಂದ್ರದಲ್ಲೂ ಇಂಡಿಯಾ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರಬೇಕು. ಅಭಿವೃದ್ಧಿಯ ದೃಷ್ಟಿಯಿಂದ ಮಂಡ್ಯ ಜನ ಸ್ಟಾರ್ ಚಂದ್ರು ಬೆಂಬಲಿಸುವಂತೆ ಕರೆ ನೀಡಿದರು.

ಕುಮಾರಸ್ವಾಮಿ ಗೆಲುವಿಗಾಗಿ ಉರುಳು ಸೇವೆ



ಶ್ರೀರಂಗಪಟ್ಟಣ:ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಹೆಚ್.ಡಿ ಕುಮಾರಸ್ವಾಮಿ ಅವರ ಗೆಲುವಿಗಾಗಿ ಅಭಿಮಾನಿಗಳು ಪ್ರಾರ್ಥಿಸಿ ಉರುಳು ಸೇವೆ ನಡೆಸಿದರು.

ಪಟ್ಟಣದ ಶ್ರೀ ರಂಗನಾಥಸ್ವಾಮಿ ದೇವಾಲಯದ ಮುಂಭಾಗ ಹೆಚ್‌ಡಿಕೆ ಗ್ರೂಪ್ ಸಂಘದ ಅಧ್ಯಕ್ಷ ಕಿರಂಗೂರು ಕುಮಾರಸ್ವಾಮಿ ನೇತೃತ್ವದಲ್ಲಿ ಕುಮಾರಸ್ವಾಮಿ ಅಭಿಮಾನಿಗಳು ಜಮಾವಣೆಗೊಂಡ ಗೆಲುವಿಗಾಗಿ ಪ್ರಾರ್ಥನೆ ಸಲ್ಲಿಸಿ ನಂತರ ಉರುಳು ಸೇವೆ ನಡೆಸಿದರು. ನಂತರ ಕಿರಂಗೂರು ಕುಮಾರಸ್ವಾಮಿ ಮಾತನಾಡಿ, ಮಂಡ್ಯ ಲೋಕಸಭಾ ಮೈತ್ರಿ ಅಭ್ಯರ್ಥಿ ಹೆಚ್.ಡಿ ಕುಮಾರಸ್ವಾಮಿ ಅವರ ಗೆಲುವಿಗಾಗಿ ಅಭಿಮಾನಿಗಳಾದ ನಾವು ಶ್ರೀ ರಂಗನಾಥ ಸ್ವಾಮಿಯ ಆಶೀರ್ವಾದ ಪಡೆದು, ಉರುಳು ಸೇವೆ ಸಲ್ಲಿಸಿದ್ದೇವೆ. ಕುಮಾರಸ್ವಾಮಿ ಅವರ ಗೆಲುವಿನ ಭರವಸೆ ಇದ್ದು, ಹೆಚ್ಚಿನ ಬಹುಮತದಿಂದ ಅವರಿಗೆ ಗೆಲುವಾಗಬೇಕು ಹಾಗಾಗಿ ಈ ಸೇವೆ ಸಲ್ಲಿಸಿದ್ದೇವೆ. ಅವರ ಗೆಲುವಿನ ನಂತರ ಶ್ರೀ ರಂಗನಾಥನಿಗೆ 101 ಈಡುಗಾಯಿ ಸೇವೆ ಮಾಡುವುದಾಗಿ ತಿಳಿಸಿದರು.

ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಎಂ. ಸಂತೋಷ್, ಪುರಸಭಾ ಸದಸ್ಯರಾದ ಎಸ್. ಪ್ರಕಾಶ್, ಶ್ರೀನಿವಾಸ್, ರಘು, ಕೃಷ್ಣಪ್ಪ ಚಂದನ್, ನೆಲಮನೆ ಗುರುಪ್ರಸಾದ್, ಜಗದೀಶ್, ಕುಮಾರ್, ಏಜಾಜ್‌ಪಾಷ, ಪಿಲಿಪ್ಸ್ ಸೇರಿದಂತೆ ಕುಮಾರಸ್ವಾಮಿ ಅಭಿಮಾನಿಗಳು, ಜೆಡಿಎಸ್–ಬಿಜೆಪಿ ಪಕ್ಷದ ಕಾರ್ಯಕರ್ತರು ಇದ್ದರು.

ಸರಗಳ್ಳನ ಬಂಧನ; 55 ಗ್ರಾಂ ಚಿನ್ನದ ಸರ, ಬೈಕ್ ವಶ



ಮೈಸೂರು, ಏ.24(ಎಸ್‌ಪಿಎನ್)– ಸರಗಳ್ಳನನ್ನು ಬಂಧಿಸಿರುವ ಕುವೆಂಪುನಗರ ಪೊಲೀಸರು 55 ಗ್ರಾಂ ಚಿನ್ನದ ಸರ ಹಾಗೂ ಕೃತ್ಯಕ್ಕೆ ಬಳಸಿದ್ದ ಬೈಕನ್ನು ವಶಕ್ಕೆ ಪಡೆದಿದ್ದಾರೆ.

ಚಾಮರಾಜನಗರದ ನಿವಾಸಿ ರಂಗಸ್ವಾಮಿ ಬಂಧಿತ ಆರೋಪಿ. ಈತ ಮದುವನ ಉದ್ಯಾನ ಬಳಿ ವಾಕಿಂಗ್ ಮಾಡುತ್ತಿದ್ದ ಮಹದೇವಮ್ಮ ಅವರ ಚಿನ್ನದ ಸರವನ್ನು ಕಿತ್ತುಕೊಂಡು ಏ.23ರಂದು ಪರಾರಿಯಾಗಿದ್ದ. ಮಂಗಳವಾರ ರಾತ್ರಿ ದೇವಯ್ಯನಹುಂಡಿ ಖಾಸಗಿ ಕಲ್ಯಾಣದ ಮಂಟಪದ ಬಳಿ ಕ್ಷುಲ್ಲಕ ವಿಚಾರಕ್ಕೆ ಸಾರ್ವಜನಿಕರೊಂದಿಗೆ ಜಗಳವಾಡುತ್ತಿದ್ದಾಗ ಗಸ್ತಿನಲ್ಲಿದ್ದ ಪೇದೆಗಳಾದ ಶ್ರೀನಿವಾಸ್, ಮುಕುಂದೇಗೌಡ ಈತನನ್ನು ವಿಚಾರಿಸಿದಾಗ ಹಳೆಯ ಅಪರಾಧಿ, ಮದುವನ ಉದ್ಯಾನವನದ ಬಳಿ ಚಿನ್ನದ ಸರಕಳ್ಳತನ ಮಾಡಿದ್ದನ್ನು ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಪ್ರಕರಣದ ಸಂಬಂಧ ಮಹದೇವಮ್ಮ ನೀಡಿದ ದೂರಿನ ಮೇರೆಗೆ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಪತ್ತೆ ಕಾರ್ಯವನ್ನು ಕೆ.ಆರ್. ವಿಭಾಗದ ಎಸಿಪಿ ರಮೇಶ್ ಕುಮಾರ್ ಉಸ್ತುವಾರಿಯಲ್ಲಿ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಯೋಗೇಶ್ ನೇತೃತ್ವದಲ್ಲಿ ಎಸ್‌ಐಗಳಾದ ಗೋಪಾಲ್, ರಾಧ ಮತ್ತು ಸಿಬ್ಬಂದಿಗಳಾದ ಮಂಜುನಾಥ್, ಆನಂದ್, ಹಜರತ್ ಅಲಿ, ಸುರೇಶ್ ಹಾಗೂ ನಾಗೇಶ್ ಮಾಡಿದ್ದಾರೆ.

ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕೆಂಬ ಆಶಯ; ಯುವಕನಿಂದ ಸೈಕಲ್ ಯಾತ್ರೆ



ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಮಂತ್ರಿ ಯಾಗಬೇಕೆಂಬ ಸಂಕಲ್ಪದೊಂದಿಗೆ ಸೈಕಲ್ ಯಾತ್ರೆ ಆರಂಭಿಸಿರುವ ಧಾರವಾಡ ಮೂಲದ ಯುವಕ ಭರತ್ ತವನೂರ ಬುಧವಾರ ಮೈಸೂರು ತಲುಪಿದರು.

ಮೈಸೂರು, ಏ.24(ಎಸ್‌ಪಿಎನ್)– ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಮಂತ್ರಿಯಾಗಬೇಕೆಂಬ ಸಂಕಲ್ಪದೊಂದಿಗೆ ಧಾರವಾಡ ಮೂಲದ ಯುವಕ ಭರತ್ ತವನೂರ ಅವರು, ಭಾರತ್ ಬಚಾವೋ ಸೈಕಲ್ ಯಾತ್ರೆ ಮೈಸೂರು ತಲುಪಿದ್ದು, ಬುಧವಾರ ಮೈಸೂರು ಚಾಮರಾಜಪುರಂನ ಬಿಜೆಪಿ ಕಚೇರಿಗೆ ಆಗಮಿಸಿದರು.

34 ವರ್ಷದ ಯುವಕ ಭರತ್, ಧಾರವಾಡ ಜಿಲ್ಲೆಯ ಎಸ್‌ಎಸ್‌ಕೆ ಕಾಲೇಜಿನಲ್ಲಿ ಪಿಯುಸಿ ವ್ಯಾಸಂಗ ಮಾಡಿದ್ದು, ಮೂಲತಃ ಹುಬ್ಬಳ್ಳಿ–ಧಾರವಾಡ ಜಿಲ್ಲೆಯವರು. ಬೆಳಗಾವಿಯಿಂದ ಫೆ.18 ರಂದು ಸೈಕಲ್ ಯಾತ್ರೆಆರಂಭಿಸಿ ಬಾಗಲಕೋಟೆ ಬಿಜಾಪುರ, ಕಲ್ಬುರ್ಗಿ, ರಾಯಚೂರು, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಬೆಂಗಳೂರು, ಉತ್ತರ, ದಕ್ಷಿಣ, ಚಿಕ್ಕಬಳ್ಳಾಪುರ ಮೂಲಕ ಇದೀಗ ಮೈಸೂರಿಗೆ ಆಗಮಿಸಿದ್ದಾರೆ.

ಫೆಬ್ರವರಿ 18 ರಂದು ಭರತ್ ತವನೂರ ಪ್ರಾರಂಭ ಮಾಡಿರುವ ಈ ಸೈಕಲ್ ಯಾತ್ರೆಯು ಸುಮಾರು 2,200 ಕಿಮೀ ಕ್ರಮಿಸಿ, ಮತ್ತೊಮ್ಮೆ ಮೋದಿ ಬೆಂಬಲಿಸುವಂತೆ ಆಯಾಯ ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಮತದಾರರಿಗೆ ಮನವಿ ಮಾಡಿರುವುದಾಗಿ ಮಾಧ್ಯಮಗಳಿಗೆ ತಿಳಿಸಿದರು.

ಬುಧವಾರ ಮೈಸೂರಿನ ಭಾಜಪ ಕಚೇರಿಗೆ ಆಗಮಿಸಿದ ಭರತ್ ಅವರನ್ನು ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಮೈಸೂರು ನಗರ ಉಪಾಧ್ಯಕ್ಷ ಜೋಗಿ ಮಂಜು, ಕೆ.ಆರ್.ಕ್ಷೇತ್ರ ಯುವ ಮೋರ್ಚಾ ಅಧ್ಯಕ್ಷ ನಿಶಾಂತ್, ಕಿಶೋರ್, ಮಣಿರತ್ನಂ ಸ್ವಾಗತಿಸಿದರು.

ಡಾ.ರಾಜ್‌ಕುಮಾರ್ ಪ್ರತಿ ಚಿತ್ರದಿಂದ ಒಂದೊಂದು ಜೀವನ ಸಂದೇಶ

ಹಿರಿಯ ಸಾಹಿತಿ ಬನ್ನೂರು ಕೆ.ರಾಜುರಿಂದ ವರನಟನ ಸ್ಮರಣೆ



ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಡೆದ ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಪುಷ್ಪಾರ್ಚನೆ ಸಲ್ಲಿಸಿದರು.

ಮೈಸೂರು, ಏ.24(ಎಸ್‌ಪಿಎನ್)– ವರನಟ ಡಾ.ರಾಜ್‌ಕುಮಾರ್ ಅಭಿನಯದ 208 ಚಿತ್ರಗಳು ಸಮಾಜಕ್ಕೆ ಒಂದೊಂದು ಸಂದೇಶವನ್ನು ನೀಡುತ್ತವೆ. ಅದರಲ್ಲಿ 'ಬಂಗಾರದ ಮನುಷ್ಯ' ಹಾಗೂ 'ಜೀವನ ಚೈತ್ರ' ಚಿತ್ರಗಳು ಬಿಡುಗಡೆಯಾದ ನಂತರ ಸಮಾಜದಲ್ಲಿ ಅನೇಕ ಬದಲಾವಣೆಗಳಾಗಿವೆ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಮೈಸೂರು ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಡೆದ ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಡಾ.ರಾಜ್‌ಕುಮಾರ್ ಕನ್ನಡದ ಅದ್ಭುತ ಕಲಾವಿದ. ಅವರು ಪೌರಾಣಿಕ ನಾಟಕ, ವೃತ್ತಿ ರಂಗಭೂಮಿ, ಎಲ್ಲಾ ಪ್ರಾಕಾರದ ಸಿನಿಮಾಗಳಲ್ಲಿ ನಟಿಸಿ ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅವರು ನಟಿಸಿರುವ ಒಂದೊಂದು ಸಿನಿಮಾವು ಒಂದೊಂದು ಸಂದೇಶಗಳನ್ನು ಸಮಾಜಕ್ಕೆ ನೀಡಿವೆ ಎಂದರು.

ಹಲವು ವರ್ಷಗಳ ಹಿಂದೆ ಡಾ. ರಾಜ್ ಕುಮಾರ್ ಕುರಿತಾದ 'ಕನ್ನಡದ ರಾಜಕುಮಾರ' ಪುಸ್ತಕವನ್ನು ರಚಿಸಿ, ಅವರಿಂದಲೇ ಬಿಡುಗಡೆ ಮಾಡಿಸಬೇಕೆಂಬ ಹಠದಿಂದ ಬೆಂಗಳೂರಿಗೆ ತೆರಳಿದ್ದೆ. ಆಗ ನಾನು ಪಿಯುಸಿಯಲ್ಲಿ ವ್ಯಾಸಂಗ ಓದುತ್ತಿದ್ದೆ. ಅವರನ್ನು ಭೇಟಿ ಮಾಡಿದ್ದ ಸಂದರ್ಭದಲ್ಲಿ ನನ್ನ ಮಾತುಗಳನ್ನು ಆಲಿಸಿದ ಡಾ.ರಾಜ್‌ಕುಮಾರ್, ಪುಸ್ತಕ ಬಿಡುಗಡೆಗೆ ಆಗುವ ಖರ್ಚು–ವೆಚ್ಚಗಳ ಬಗ್ಗೆ ಹಾಗೂ ಸಮಾರಂಭ ಆಯೋಜಿಸುವಾಗ ಆಗುವ ಅಡೆ–ತಡೆಗಳ ಬಗ್ಗೆ ಸಂಪೂರ್ಣ ವಾಗಿ ನನಗೆ ವಿವರಿಸಿದ್ದರು.

ಅಲ್ಲದೆ, ನಂಜನಗೂಡಿನಲ್ಲಿ ಹಿರಿಯ ನಿರ್ದೇಶಕ ಜಿ.ವಿ.ಅಯ್ಯರ್ ಅವರ ನೇತೃತ್ವದಲ್ಲಿ ಸಮಾರಂಭ ಆಯೋಜಿಸಲಾಗಿದೆ. ಆ ಸಮಾರಂಭದಲ್ಲಿ ನಾನು ಕೂಡ ಭಾಗವಹಿಸುತ್ತೇನೆ. ಆ ಸಂದರ್ಭದಲ್ಲಿ ಈ ಪುಸ್ತಕವನ್ನು ಬಿಡುಗಡೆ ಮಾಡುವುದಾಗಿ ಒಪ್ಪಿಗೆ ಸೂಚಿಸಿದ ಪ್ರಸಂಗವನ್ನು ಎಳೆಎಳೆಯಾಗಿ ವಿವರಿಸಿದ್ದರು. ಆ ಮಾತಿನಂತೆ ಆ ಪುಸ್ತಕವನ್ನು ಅವರೇ ಬಿಡುಗಡೆಗೊಳಿಸಿದ ಪ್ರಸಂಗವನ್ನು ಸ್ಮರಿಸಿದರು.

ಡಾ.ರಾಜ್‌ಕುಮಾರ್ ಅವರು, ಕಡಿಮೆ ಓದಿದ್ದರೂ ಅಭಿನಯದಲ್ಲಿ ಅವರಿಗೆ ಅವರೇ ಸಾಟಿ. ಕನ್ನಡದಲ್ಲಿ ಅವರನ್ನು ಮೀರಿಸುವ ಮತ್ತೊಬ್ಬ ಕಲಾವಿದ ಮತ್ತೆ ಹುಟ್ಟುವುದಿಲ್ಲ. ಅಲ್ಲದೆ, 1991–92ರಲ್ಲಿ ಕರ್ನಾಟಕ ರತ್ನ ಪ್ರಶಸ್ತಿಯನ್ನು ಮೊದಲು ಕುವೆಂಪು ಅವರಿಗೆ ನೀಡಬೇಕೋ ಅಥವಾ ವರನಟ ಡಾ.ರಾಜ್‌ಕುಮಾರ್ ಅವರಿಗೆ ನೀಡಬೇಕೋ ಎಂಬ ಗೊಂದಲದಲ್ಲಿದ್ದ ರಾಜ್ಯ ಸರ್ಕಾರಕ್ಕೆ ಡಾ.ರಾಜ್‌ಕುಮಾರ್ ಅವರೇ ಮೊದಲು ಕರ್ನಾಟಕ ರತ್ನ ಪ್ರಶಸ್ತಿಯನ್ನು ಕುವೆಂಪು ಅವರಿಗೆ ನೀಡಿ, ಎಂಬ ಸಲಹೆ ನೀಡಿದ ಅಪರೂಪದ ವ್ಯಕ್ತಿತ್ವ ಡಾ.ರಾಜ್ ಅವರದ್ದು ಎಂದರು.

ಡಾ.ರಾಜ್ ಕುಮಾರ್ ಅವರ ಸಾಧನೆಯನ್ನು ಹೇಳಿದರೆ, ನಾಲ್ಕು ದಿನಗಳು ಸಾಲದು. ಅವರ ಜೀವಿತಾವಧಿಯಲ್ಲಿ ಕನ್ನಡ ಚಲನಚಿತ್ರಕ್ಕೆ ನೀಡಿರುವ ಕೊಡುಗೆ ಅಪಾರ. ಅವರ ತತ್ವಾದರ್ಶಗಳನ್ನು ಇಂದಿನ ಯುವ ಕಲಾವಿದರು ಅಳವಡಿಸಿಕೊಂಡು ನಾಡು–ನುಡಿಗೆ ತಮ್ಮದೆ ಕೊಡುಗೆ ನೀಡಬೇಕೆಂದು ಸಲಹೆ ನೀಡಿದರಲ್ಲದೆ, ಡಾ.ರಾಜ್‌ಕುಮಾರ್ ಜನ್ಮ ದಿನದ ನೆನಪಲ್ಲಿ ಅವರ ಸಾಧನೆಯನ್ನು ಜನರಿಗೆ ತಿಳಿಸಿಕೊಡಲು ಪ್ರಯತ್ನಿಸಿರುವ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಪದಾಧಿಕಾರಿಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ, ಪದ್ಮಶ್ರೀ ಜೈನ ಮಹಿಳಾ ಸಮಾಜದ ಅಧ್ಯಕ್ಷೆ ಲತಾ ಸುದರ್ಶನ್ ಉಪಸ್ಥಿತರಿದ್ದರು.




ಡಾ.ರಾಜ್‌ಕುಮಾರ್ ಅವರ ಜನ್ಮದಿನದ ಅಂಗವಾಗಿ ಮೈಸೂರು ಅರಮನೆ ಮುಂಭಾಗದ ಡಾ.ರಾಜ್‌ಕುಮಾರ್ ಉದ್ಯಾನವನದಲ್ಲಿನ ಅವರ ಪ್ರತಿಮೆಗೆ ಮೈಸೂರು ಹೋಟೆಲ್ ಮಾಲೀಕರ ಸಂಘದ ವತಿಯಿಂದ ಬುಧವಾರ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಕಾರ್ಯಕಾರಿ ಸಮಿತಿ ಸದಸ್ಯರಾದ ಹೇಮಂತಕುಮಾರ್, ಎ ಸಿ ರವಿ, ಟಿ.ಆರ್.ಸುರೇಶ, ಮಹದೇವ, ಅರುಣ್ ಉಪಸ್ಥಿತರಿದ್ದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 20ರಿಂದ ಅಧ್ಯಯನ ಶಿಬಿರ

ಮೈಸೂರು, ಏ.24– ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಮೇ 20 ರಿಂದ ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮಠಾಧಿಪತಿಗಳು, ಸಾಧಕರು ಹಾಗೂ ಅಧ್ಯಾತ್ಮಿಕ ಜಿಜ್ಞಾಸುಗಳಿಗೆ ಅಧ್ಯಯನ ಶಿಬಿರವನ್ನು ಏರ್ಪಡಿಸಲಾಗಿದೆ. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿವೆ.


ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಬಿ.ರಾಜೇಶ್ ಅವರನ್ನು ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದಲ್ಲಿ ನೇರವಾಗಿ ಅಥವಾ 0821–2548212, ಅಥವಾ ಮೊ: 9964 141560 ಮೂಲಕ ಹಾಗೂ ಶಿಬಿರದ ಸಂಚಾಲಕರಾದ ಚುಂಚನಹಳ್ಳಿ ಶ್ರೀಗಳು, ಕೆ.ಪಿ.ಬಸವರಾಜಪ್ಪ, ಎಸ್.ನಂದೀಶ್, ಬಿ. ಮಾದಪ್ಪ ಮತ್ತು ಗವಿಯಪ್ಪದೇವರು ಅವರನ್ನು ಕ್ರಮವಾಗಿ 9945494612, 9880596359, 9379682611, 98805 06091 ಮತ್ತು 9845541667 ಮೊಬೈಲ್‌ಗಳಲ್ಲಿ ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿಕೊಳ್ಳಬಹುದಾಗಿದೆ.

ಕಾನತಂಡ ಡಾಲೂ ಈರಪ್ಪ ನಿಧನ



ಮೈಸೂರು, ಏ.24–ಮೂಲತಃ ವಿರಾಜಪೇಟೆಯ ಕದನೂರು ಗ್ರಾಮದವರಾಗಿದ್ದು, ಮೈಸೂರಿನ ಬೃಂದಾವನ ಬಡಾವಣೆ ಒಂದನೇ ಹಂತದಲ್ಲಿ ವಾಸಿಸುತ್ತಿದ್ದ ಕಾನತಂಡ ಡಾಲೂ ಈರಪ್ಪ (78) ಅವರು ಬುಧವಾರ ಸಂಜೆ ನಿಧನರಾದರು.

ಮೃತರು ಪತ್ನಿ ರಾಣಿ ಪಾರ್ವತಿ (ಮಂಡನೆರವಂಡ), ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಏ.25) ಮಧ್ಯಾಹ್ನ 1 ಗಂಟೆಗೆ ಗೋಕುಲಂನಲ್ಲಿರುವ ಚಿರಶಾಂತಿ ಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.





ಪಿ.ಪಟ್ಟಣ ತಾಲೂಕಿನ ಪಂಚವಳ್ಳಿಯ ವಿಶೇಷ ಮತಗಟ್ಟೆ.



ಕಂಪಲಾಪುರದ ಯುವ ಮತದಾರರ ಮತಗಟ್ಟೆ.



ತಿ.ನರಸೀಪುರ ತಾಲೂಕಿನ ಹೆಮ್ಮಿಗೆ ಗ್ರಾಮದ ಸಖಿ ಮತಗಟ್ಟೆ.

ಮತದಾರರ ಮನ ಸೆಳೆಯುತ್ತಿವೆ ಅತ್ಯಾಕರ್ಷಕ, ಅರ್ಥಪೂರ್ಣ ಮತಗಟ್ಟೆಗಳು

ಮೈಸೂರು,ಏ.24–ಯುವ, ಸಖಿ, ವಿಶೇಷಚೇತನ, ಮಾದರಿ ಹಾಗೂ ವಿಷಯಧಾರಿತ ಮತಗಟ್ಟೆಗಳು ಈ ಬಾರಿ ವಿವಿಧ ರೀತಿಯಲ್ಲಿ ಮತದಾರರ ಕೈ ಬೀಸಿ ಕರೆಯಲಿವೆ. ಜಿಲ್ಲಾ ಸ್ವೀಪ್ ಸಮಿತಿ ನೇತೃತ್ವದಲ್ಲಿ ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿನ ಒಟ್ಟು 2915 ಮತಗಟ್ಟೆಗಳ ಪೈಕಿ 99 ಮತಗಟ್ಟೆಗಳು ಈ ಬಾರಿ ನಾನಾ ರೀತಿಯಲ್ಲಿ ಕಂಗೊಳಿಸಲಿವೆ. 55 ಸಖಿ ಬೂತ್, 11 ವಿಶೇಷಚೇತನರ ಮತಗಟ್ಟೆ, 11 ಯುವ ಮತಗಟ್ಟೆ, 12 ಸಾಂಪ್ರದಾಯಿಕ ಮತಗಟ್ಟೆ ಮತ್ತು 10 ಮಾದರಿ ಮತಗಟ್ಟೆಗಳನ್ನು ರೂಪಿಸಲಾಗಿದೆ. ಒಂದೊಂದು ಮತಗಟ್ಟೆಗಳು ನಾನಾ ವಿಧಗಳಲ್ಲಿ ಜನಾಕರ್ಷಿಸಲಿವೆ.

ವಿಶ್ವಾಸ ತುಂಬುವ ವಿಶೇಷಚೇತನರ ಮತಗಟ್ಟೆ



ಪಿರಿಯಾಪಟ್ಟಣದ ಬೈಲುಕುಪ್ಪೆಯಲ್ಲಿ ವಿಶೇಷಚೇತನರ ಮತಗಟ್ಟೆ.

ವಿಶೇಷಚೇತನರು ಸಹ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಚುನಾವಣಾ ಆಯೋಗ ರ್‍ಯಾಂಪ್ ವ್ಯವಸ್ಥೆ, ವ್ಹೀಲ್‌ಚೇರ್, ಸಹಾಯಕರ ನಿಯೋಜನೆ, ಅಂಧ ಮತದಾರರಿಗೆ ಬ್ರೈಲ್ ಲಿಪಿಯಲ್ಲಿ ಸಿದ್ಧಪಡಿಸಿರುವ ಮಾದರಿ ಮತಪತ್ರದ ಪ್ರದರ್ಶನ ಹಾಗೂ ಅದರ ವಿವರಣೆಯ ಆಡಿಯೋ ಮತಗಟ್ಟೆಗಳಲ್ಲಿ ಲಭ್ಯವಿರುತ್ತದೆ.

ಭಾಗಶಃ ಅಂಧತ್ವ ಹೊಂದಿರುವ ಮತದಾರರಿಗೆ ಮ್ಯಾಗ್ನಿಫೈಡ್ ಲೆನ್ಸ್ ಬಳಸಿ ಮತದಾನ ಮಾಡುವ ಸೌಲಭ್ಯ ದೊರಕುತ್ತದೆ. ಕಿವುಡ ಮತ್ತು ಮೂಗ ಮತದಾರರಿಗೆ ಸಂಜ್ಞೆ ಭಾಷೆ ಬಳಸಿ ಮತದಾನ ಮಾಡುವ ವಿಧಾನದ ಬಗ್ಗೆ ಸಹಾಯಕರು ಲಭ್ಯವಿರುತ್ತಾರೆ. ಪಿರಿಯಾಪಟ್ಟಣದ ಬೈಲುಕುಪ್ಪೆ ಸ.ಹಿ.ಪ್ರಾ.ಶಾಲೆ, ಕೆ.ಆರ್.ನಗರ ತಾಲೂಕಿನ ಚಂದಗಾಲು ವ್ಯಾಪ್ತಿಯ ಸ.ಹಿ.ಪ್ರಾ ಶಾಲೆ, ಹುಣಸೂರು ಪಟ್ಟಣದಲ್ಲಿರುವ ಸರ್ಕಾರಿ ಬಾಲಕರ ಪಿಯು ಕಾಲೇಜು, ಹೆಚ್.ಡಿ.ಕೋಟೆಯ ಹೈರಿಗೆ ವ್ಯಾಪ್ತಿಯ ಸ.ಹಿ.ಪ್ರಾ ಶಾಲೆ, ನಂಜನಗೂಡಿನ ಚಿನ್ನಗುಂದಿ ಹುಂಡಿ ಸ.ಹಿ.ಪ್ರಾ.ಶಾಲೆ, ಟಿ.ನರಸೀಪುರ ತಾಲೂಕಿನ ಸರ್ಕಾರಿ ಪಿಯು ಕಾಲೇಜು (ಪ್ರೌಢಶಾಲೆ ವಿಭಾಗ), ವರುಣ ಕ್ಷೇತ್ರದ ಕೆಂಪಸಿದ್ದನಹುಂಡಿ ಸ.ಹಿ.ಪ್ರಾ ಶಾಲೆ, ಚಾಮುಂಡೇಶ್ವರಿ ಕ್ಷೇತ್ರದ ಶೆಟ್ಟಿನಾಯಕನಹಳ್ಳಿ ಸ.ಹಿ.ಪ್ರಾ ಶಾಲೆ, ಕೃಷ್ಣರಾಜ ಕ್ಷೇತ್ರದ ನಾಚನಹಳ್ಳಿ ಪಾಳ್ಯ ಜೆಎಸ್‌ಎಸ್ ಪ್ರೌಢಶಾಲೆ, ಚಾಮರಾಜ ಕ್ಷೇತ್ರದ ಮೇಟಗಳ್ಳಿ ವ್ಯಾಪ್ತಿಯ ಜೆಎಸ್‌ಎಸ್ ಪ್ರೌಢಶಾಲೆ, ನರಸಿಂಹರಾಜ ಕ್ಷೇತ್ರದ ಕೆಸರೆಯ ಪಿಯು ಕಾಲೇಜುಗಳಲ್ಲಿ ವಿಶೇಷಚೇತನರಿಗೆ ವಿಶೇಷ ಮತಗಟ್ಟೆ ತೆರೆದಿದ್ದು, ವಿಶೇಷ ಆಸಕ್ತಿ ವಹಿಸಿ ಅಲಂಕಾರ ಮಾಡಿರುವುದು, ಗ್ರಾಮಸ್ಥರು, ಮತದಾರರನ್ನು ಸೆಳೆಯುತ್ತಿವೆ.


ಸಾಂಪ್ರದಾಯಿಕ ಮತಗಟ್ಟೆ

ಗಿರಿಜನ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿರುವ ಮತಗಟ್ಟೆಗಳನ್ನು ಸ್ಥಾಪಿಸಿ ಈ ಮತಗಟ್ಟೆಗಳನ್ನು ಸ್ಥಳೀಯರು ಬಳಕೆ ಮಾಡುವ ಸಾಮಗ್ರಿಗಳು ಹಾಗೂ ಪ್ರಾಕೃತಿಕವಾಗಿ ದೊರೆಯುವ ವಸ್ತುಗಳನ್ನು ಬಳಕೆ ಮಾಡಿಕೊಂಡು ಮತಗಟ್ಟೆಗಳನ್ನು ಸ್ಥಳೀಯರ ಸಂಪ್ರದಾಯ ಹಾಗೂ ಆಚರಣೆಗಳನ್ನು ಪ್ರತಿಬಿಂಬಿಸುವ ಪ್ರತಿಕೃತಿಗಳೊಂದಿಗೆ ಚಿತ್ತಾಕರ್ಷಕವಾಗಿ ಮನಸೆಳೆಯುವಂತೆ ಸಿಂಗರಿಸಿ, ಮತದಾರರನ್ನು ಮತದಾನಕ್ಕೆ ಪ್ರೇರೇಪಿಸುವ ಮೂಲಕ ಮತದಾರರನ್ನು ಕೈಬೀಸಿ ಕರೆಯುತ್ತಿದೆ.

ಮೈಸೂರು ಜಿಲ್ಲಾಡಳಿತದಿಂದ ಇದೇ ಮೊದಲ ಬಾರಿ ಯಶಸ್ವಿ ಪ್ರಯೋಗ

55 ಸಖಿ ಮತಗಟ್ಟೆ

ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ತಲಾ 5 ಸಖಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಈ ಮತಗಟ್ಟೆಗಳನ್ನು ವಿವಿಧ ಬಣ್ಣ ಹಾಗೂ ಚಿತ್ತಾಕರ್ಷಕ ಗೋಡೆ ಬರಹಗಳ ಮೂಲಕ ಮಹಿಳೆಯ ಸಾಮರ್ಥ್ಯ, ಸಬಲೀಕರಣ ಮತ್ತು ಮತದಾನದ ಪ್ರಾಮುಖ್ಯತೆಗಳನ್ನು ತಿಳಿಸುತ್ತಾ ಮತದಾನ ಜಾಗೃತಿ ಸಂದೇಶಗಳನ್ನು ಬಿತ್ತರಿಸಲು ವಿಶೇಷವಾಗಿ ಮತಗಟ್ಟೆ ನಿರ್ಮಿಸಲಾಗಿದೆ. ಈ ಮತಗಟ್ಟೆಗಳಲ್ಲಿ ಮಹಿಳಾ ಮತದಾರರ ಸಂಖ್ಯೆ ಶೇ.50ಕ್ಕಿಂತ ಹೆಚ್ಚಿರುವುದರಿಂದ ಈ ಮತಗಟ್ಟೆಯಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲಾ ಮತಗಟ್ಟೆ ಅಧಿಕಾರಿಗಳು, ಪೊಲೀಸ್ ಸಿಬ್ಬಂದಿ ಮತ್ತು ಸ್ವಯಂ ಸೇವಕರು ಮಹಿಳೆಯರಾಗಿರುವುದು ವಿಶೇಷವಾಗಿರುತ್ತದೆ. ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ತಲಾ 5 ಸಖಿ ಮತಗಟ್ಟೆಗಳು ಜನರನ್ನು ಆಕರ್ಷಿಸಲಿವೆ. ಗುಲಾಬಿ ಬಣ್ಣದಲ್ಲಿ ಪ್ರಕೃತಿಯೊಂದಿಗೆ ಮಹಿಳೆಯ ಚಿತ್ರ ಬಿಡಿಸುವ ಮೂಲಕ ಮತದಾನ ಕುರಿತು ಜಾಗೃತಿ ಮೂಡಿಸಲಾಗುವುದು. ಮಾತ್ರವಲ್ಲದೇ ಮತದಾನದ ದಿನ ಸಖಿ ಮತಗಟ್ಟೆಯಲ್ಲಿ ಮಹಿಳಾ ಚುನಾವಣಾಧಿಕಾರಿಗಳೇ ಕಾರ್ಯನಿರ್ವಹಿಸುವುದು ವಿಶೇಷವಾಗಿದೆ.




ಕಣಗಾಲು ಗ್ರಾಮದ ಸಖಿ ಮತಗಟ್ಟೆ.



ಚಿಕ್ಕೋಡನಹಳ್ಳಿಯ ಸಾಂಪ್ರದಾಯಿಕ ಮತಗಟ್ಟೆ.

ವಿಷಯಾಧಾರಿತ ಮತಗಟ್ಟೆ

ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ತಲಾ ಒಂದರಂತೆ ಪ್ರಸ್ತುತ ಸನ್ನಿವೇಶಕ್ಕೆ ಅನುಗುಣವಾಗಿ ವಿಷಯಾಧಾರಿತ ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಈ ಮತಗಟ್ಟೆಗಳಲ್ಲಿ ಆಯಾ ವಿಷಯಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಯನ್ನು ತಿಳಿಸುವ ಪ್ರದರ್ಶಿಕೆಗಳ ಪ್ರದರ್ಶನ ಹಾಗೂ ಮಾಹಿತಿಗಳನ್ನು ಗೋಡೆ ಬರಹಗಳ ಮೂಲಕ ಆಕರ್ಷಣೀಯವಾಗಿ ಚಿತ್ರದ ಮೂಲಕ ಮೂಡಿಸಿ ಮತದಾರರ ಮನಸೂರೆಗೊಳ್ಳುವಂತೆ ನಿರ್ಮಿಸಲಾಗಿದೆ.



ಕಲಿಯೂರು ಗ್ರಾಪಂ ವಿಷಯಾಧಾರಿತ ಮತಗಟ್ಟೆ.


ಪಿರಿಯಾಪಟ್ಟಣದ ಪಂಚವಳ್ಳಿಯ ಸ.ಹಿ.ಪ್ರಾ.ಶಾಲೆಯಲ್ಲಿ ಪೌಷ್ಟಿಕಾಂಶಯುಕ್ತ ಆಹಾರ ಮತ್ತು ಮಕ್ಕಳ ಸುರಕ್ಷತೆ ವಿಷಯಾಧಾರಿತ ಮತಗಟ್ಟೆ, ಕೆ.ಆರ್.ನಗರದ ಚೌಕಹಳ್ಳಿಯ ಸ.ಕಿ.ಪ್ರಾ. ಶಾಲೆಯಲ್ಲಿ ಜಾಗತಿಕ ತಾಪಮಾನ ವಿಷಯಾಧಾರಿತ ಮತಗಟ್ಟೆ, ಹುಣಸೂರಿನ ಬನ್ನಿಕುಪ್ಪೆ ಸ.ಹಿ.ಪ್ರಾ.ಶಾಲೆಯಲ್ಲಿ ಜಲಸಂರಕ್ಷಣೆ ವಿಷಯಾಧಾರಿತ ಮತಗಟ್ಟೆ, ಹೆಚ್.ಡಿ.ಕೋಟೆಯ ಕಾಕನಕೋಟೆ ಅರಣ್ಯ ಕಚೇರಿಯಲ್ಲಿ ವನಸಿರಿ ನಾಡು ವಿಷಯಾಧಾರಿತ ಮತಗಟ್ಟೆ, ನಂಜನಗೂಡು ಹೆಮ್ಮರಗಾಲ ಮತ್ತು ಬಂಕಹಳ್ಳಿಯಲ್ಲಿ ಕೃಷಿ ಋಷಿ ವಿಷಯಾಧಾರಿತ ಮತಗಟ್ಟೆ, ಟಿ.ನರಸೀಪುರ ತಾಲೂಕಿನ ಕಲಿಯೂರಿನ ಸ.ಹಿ.ಪ್ರಾ.ಶಾಲೆ (ಹಳೇ ಕಟ್ಟಡ) ಹಸಿರೇ ಉಸಿರು ವಿಷಯಾಧಾರಿತ ಮತಗಟ್ಟೆ, ವರುಣ ಕ್ಷೇತ್ರದ ಮಲ್ಲೂಪುರದಲ್ಲಿ ವರ್ಲಿ ಕಲೆ ವಿಷಯಾಧಾರಿತ ಮತಗಟ್ಟೆ, ಚಾಮುಂಡೇಶ್ವರಿ ಕ್ಷೇತ್ರ ಯಡಹಳ್ಳಿ ಸ.ಹಿ.ಪ್ರಾ.ಶಾಲೆಯಲ್ಲಿ ಜಾನಪದ ಕಲೆ ಮತ್ತು ಗ್ರಾಮೀಣ ಕ್ರೀಡೆ ವಿಷಯಾಧಾರಿತ ಮತಗಟ್ಟೆ, ಕೃಷ್ಣರಾಜ ಕೇತ್ರ ಕುರುಬರಹಳ್ಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆರೋಗ್ಯ ಸಿರಿ ವಿಷಯಾಧಾರಿತ ಮತಗಟ್ಟೆ, ಚಾಮರಾಜ ಕ್ಷೇತ್ರದ ವಿಜಯನಗರದ ಭಾರತೀಯ ವಿದ್ಯಾಭವನದಲ್ಲಿ ಪರಿಸರ ಸಂರಕ್ಷಣೆ ವಿಷಯಾಧಾರಿತ ಮತಗಟ್ಟೆ, ನರಸಿಂಹರಾಜ ಕ್ಷೇತ್ರದ ಮೆಸ್ಕೊ ಐಟಿಐ (MESCO ITI)ನಲ್ಲಿ ಮಹಿಳಾ ಸಬಲೀಕರಣ ದೇಶದ ಪ್ರಗತಿಗೆ ಕಾರಣ ವಿಷಯಾಧಾರಿತ ಮತಗಟ್ಟೆಗಳನ್ನು ನಿರ್ಮಿಸುವ ಮೂಲಕ ವಿವಿಧ ಸಂದೇಶಗಳನ್ನು ಸಾರಲಿವೆ.

ಯುವ ಮತಗಟ್ಟೆಗಳು

ಹೆಚ್ಚಿನ ಸಂಖ್ಯೆಯ ಯುವ ಮತದಾರರು ಇರುವ ಮತಗಟ್ಟೆಗಳನ್ನು ಯುವ ಮತಗಟ್ಟೆಗಳನ್ನಾಗಿ ತೆರೆಯಲಾಗಿದೆ.

ಪ್ರಜಾಪ್ರಭುತ್ವದ ಹಬ್ಬದಲ್ಲಿ ಮೊದಲ ಬಾರಿಗೆ ಮತದಾನ ಮಾಡುವ ನವ ಯುವ ಮತದಾರರನ್ನು ಸೆಳೆಯಲು ಮತಗಟ್ಟೆಗಳನ್ನು ಆಕರ್ಷಣೀಯವಾಗಿ ನಿರ್ಮಿಸಿ, ಮತಗಟ್ಟೆಯಲ್ಲಿ ಸೆಲ್ಫಿ ಬೂತ್ ಸ್ಥಾಪಿಸಲಾಗಿದೆ. ಮೊದಲ ಬಾರಿಗೆ ಮತದಾನ ಮಾಡಲು ಆಗಮಿಸುವವರನ್ನು ವಿವಿಧ ರೀತಿಯಲ್ಲಿ ಸ್ವಾಗತಿಸಿ ಅವರ ಮೊದಲ ಅನುಭವವನ್ನು ಅವಿಸ್ಮರಣೀಯವನ್ನಾಗಿಸಲು ಜಿಲ್ಲಾಡಳಿತ ಸಜ್ಜಾಗಿದೆ.

ಪಿರಿಯಾಪಟ್ಟಣದ ಕಂಪಲಾಪುರದ ಸ.ಹಿ.ಪ್ರಾ.ಶಾಲೆ, ಕೆ.ಆರ್.ನಗರದ ಸಾಲಿಗ್ರಾಮದ ಪ್ರಿ ಮೆಟ್ರಿಕ್ ಹಾಸ್ಟೆಲ್, ಹುಣಸೂರಿನ ಹಳೇಬೀಡು ವ್ಯಾಪ್ತಿಯ ಸ.ಹಿ.ಪ್ರಾ ಶಾಲೆ, ಹೆಚ್.ಡಿ.ಕೋಟೆಯ ನಂಜನಾಯಕನಹಳ್ಳಿಯ ಸ.ಹಿ.ಪ್ರಾ ಶಾಲೆ, ನಂಜನಗೂಡಿನ ದೇವಿರಮ್ಮನಹಳ್ಳಿಯ ಸ.ಹಿ.ಪ್ರಾ.ಶಾಲೆ, ಟಿ.ನರಸೀಪುರದ ಕಲಿಯೂರು ವ್ಯಾಪ್ತಿಯ ಸ.ಹಿ.ಪ್ರಾ ಶಾಲೆ, ವರುಣ ಕ್ಷೇತ್ರದ ಲಲಿತಾದ್ರಿಪುರಂನ ಸ.ಹಿ.ಪ್ರಾ.ಶಾಲೆ, ಚಾಮುಂಡೇಶ್ವರಿ ಕ್ಷೇತ್ರ ಉದ್ಬೂರು ವ್ಯಾಪ್ತಿಯ ಸ.ಹಿ.ಪ್ರಾ.ಶಾಲೆ, ಕೃಷ್ಣರಾಜ ಕ್ಷೇತ್ರದ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜು, ಚಾಮರಾಜ ಕ್ಷೇತ್ರದ ಮಂಡಿಮೊಹಲ್ಲಾದ ವಿದ್ಯಾವರ್ಧಕ ಕಾನೂನು ಕಾಲೇಜು, ನರಸಿಂಹರಾಜ ಕ್ಷೇತ್ರದ ಯರಗನಹಳ್ಳಿಯ ಮೌಲನಾ ಅಜಾದ್ ರೆಸಿಡೆನ್ಸಿಯಲ್ ಬಾಲಕಿಯರ ಶಾಲೆಯ ಮತಗಟ್ಟೆಗಳಲ್ಲಿ ಯುವ ಮತದಾರರನ್ನು ಸೆಳೆಯುವ ನಿಟ್ಟಿನಲ್ಲಿ ನಾನಾ ರೀತಿ ವಿಭಿನ್ನ ಪ್ರಯತ್ನ ನಡೆಸಿದೆ.



ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ಗ್ರಾಮದಲ್ಲಿ ನಿರ್ಮಿಸಿರುವ ಬುಡಕಟ್ಟು ಸಾಂಪ್ರದಾಯಿಕ ಮತಗಟ್ಟೆ

ಲೋಕಸಭಾ ಚುನಾವಣೆ ನಂತರ ರಾಜ್ಯದ ಕಾಂಗ್ರೆಸ್ ಸರ್ಕಾರ ಗುಜರಿ ಸೇರಲಿದೆ

ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ಲೇವಡಿ

ಮೈಸೂರು, ಏ.24(ಎಂಟಿವೈ)–ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ಮೇಲೆ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ 'ಹಳೆ ಪೇಪರ್ ಖಾಲಿ ಸೀಸ'ದ ಸರ್ಕಾರ ಗುಜರಿ ಸೇರುವುದು ಖಚಿತ ಎಂದು ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಲೇವಡಿ ಮಾಡಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಹಿಂದುಳಿದ ವರ್ಗಗಳ ಹಿತ ಕಾಯುವ ನಿಟ್ಟಿನಲ್ಲಿ ವಿವಿಧ ನಿಗಮ ಮಂಡಳಿಗಳಿಗೆ ಹೆಚ್ಚಿನ ಅನುದಾನ ನೀಡಿತ್ತು. ಇದರಿಂದ ಹಿಂದುಳಿದ ವರ್ಗಗಳ ಅಭಿವೃದ್ಧಿ ಸಾಧ್ಯವಾಗಿತ್ತು. ಅನೇಕ ಫಲಾನುಭವಿಗಳಿಗೆ ಆರ್ಥಿಕ ನೆರವು ಸಿಕ್ಕಿತ್ತು. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರ ಹಿಂದುಳಿದ ವರ್ಗಗಳ ನಿಗಮ–ಮಂಡಳಿಗಳಿಗೆ ನೀಡುತ್ತಿದ್ದ ಅನುದಾನ ಕಡಿತಗೊಳಿಸಿ, ಅದನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿದೆ. ಇದರಿಂದ ಹಿಂದುಳಿದ ವರ್ಗಗಳ ಹಿತವನ್ನು ಬಲಿ ಕೊಟ್ಟಿದೆ ಎಂದು ಕಿಡಿಕಾರಿದರು.

ಬಿಜೆಪಿ ಸರ್ಕಾರದ ಕೊಡುಗೆ ಹಾಗೂ ಪ್ರಧಾನಿ ಮೋದಿ ಅವರ ಸಾಧನೆಯನ್ನು ಮನಗಂಡು ರಾಜ್ಯದ ಜನತೆ ಕೇಂದ್ರದಲ್ಲಿ ಮತ್ತೊಮ್ಮೆ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ತರಲು ಉತ್ಸುಕರಾಗಿದ್ದಾರೆ. ಮತ್ತೊಮ್ಮೆ ಮೋದಿ ಘೋಷಣೆಯೊಂದಿಗೆ ಪಕ್ಷದ ಕಾರ್ಯಕರ್ತರು ಪ್ರಚಾರದಲ್ಲಿ ತೊಡಗಿದ್ದು, ಎಲ್ಲೆಡೆ ಉತ್ತಮ ಪ್ರತಿ ಕ್ರಿಯೆ ವ್ಯಕ್ತವಾಗುತ್ತಿದೆ. ಆದರೆ ಕಾಂಗ್ರೆಸ್ ಸರ್ಕಾರ ಬಿಜೆಪಿ ವಿರುದ್ಧ ಅಪಪ್ರಚಾರ, ಸುಳ್ಳು ಜಾಹೀರಾತು ಮೂಲಕ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದೆ. ಸಂವಿಧಾನದ ವಿಚಾರದಲ್ಲೂ ಸುಳ್ಳು ಹೇಳುತ್ತಿದ್ದಾರೆ. ಸಂವಿಧಾನಕ್ಕೆ ಗೌರವ ಕೊಟ್ಟಿದ್ದು ಬಿಜೆಪಿ. ಎಲ್ಲೆಡೆ ಅತ್ಯಾಚಾರ, ಭಯೋತ್ಪಾದನಾ ಚಟುವಟಿಕೆ ಹೆಚ್ಚಾಗುತ್ತಿವೆ ಎಂದು ರಘು ಕೌಟಿಲ್ಯ ಆರೋಪಿಸಿದರು.

ಬರ ಪರಿಹಾರ ವಿಚಾರದಲ್ಲಿ ರಾಜ್ಯ ಸರ್ಕಾರ ಸುಳ್ಳು ಹೇಳುತ್ತಿದೆ. ಅರ್ಜಿ ಸಲ್ಲಿಸುವಿಕೆಯಲ್ಲಿ ತಾಂತ್ರಿಕ ದೋಷ ಇದ್ದ ಕಾರಣ ಸಕಾಲಕ್ಕೆ ಪರಿಹಾರ ಬಿಡುಗಡೆಯಾಗಿಲ್ಲ. ಕರ್ನಾಟಕ ಸೇರಿದಂತೆ 12 ರಾಜ್ಯಗಳಿಗೂ ಬರ ಪರಿಹಾರ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಕೇಂದ್ರದ ಬಿಜೆಪಿ ಸರ್ಕಾರ ವಿಶ್ವಕರ್ಮ ಯೋಜನೆಯಡಿ ಹಿಂದುಳಿದ ವರ್ಗಗಳಿಗೆ ಸಾಕಷ್ಟು ಕಾರ್ಯಕ್ರಮ ಜಾರಿಗೊಳಿಸಿದೆ. ಆದರೆ, ರಾಜ್ಯ ಸರ್ಕಾರ ಅಭಿವೃದ್ಧಿಯನ್ನು ಕಡೆಗಣಿಸಿದೆ. ಯುಗ ಮೆಚ್ಚುವ ಕೊಡುಗೆ ಅರಸರು ನೀಡಿದ್ದರೆ, ಯುಗ ಮೆಚ್ಚುವ ಕೆಲಸವನ್ನು ಮೋದಿ ಮಾಡುತ್ತಿದ್ದಾರೆ. ಬಿಜೆಪಿ ರಾಜ್ಯಕ್ಕೆ ಚೊಂಬು ನೀಡಿದೆ ಎಂದು ಕಾಂಗ್ರೆಸ್ ಹೇಳುತ್ತಿದೆ. ಚೊಂಬು ಕಳಸದ ಸಂಕೇತ. ಕರ್ನಾಟಕ ಸರ್ಕಾರ ಹಳೆ ಡಬ್ಬ ಖಾಲಿ ಸೀಸದಂತೆ ಆಗಿದೆ. ಲೋಕಸಭಾ ಚುನಾವಣೆ ಬಳಿ ಹಳೆ ಡಬ್ಬ ಖಾಲಿ ಸೀಸದಂತಹ ಸರ್ಕಾರ ಗುಜರಿ ಸೇರುತ್ತದೆ ಎಂದು ಕಿಡಿಕಾರಿದರು.

ವಿಕಸಿತ ಭಾರತಕ್ಕಾಗಿ ಬಿಜೆಪಿ ಬೆಂಬಲಿಸಿ

ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಮನವಿ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಏ.24(ಎಂಟಿವೈ)– 2047ರವರೆಗೆ ವಿಕಸಿತ ಭಾರತ ಮಾಡುವ ನಿಟ್ಟಿನಲ್ಲಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವಂತೆ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಉಪಾಧ್ಯಕ್ಷೆ, ನಟಿ ಮಾಳವಿಕಾ ಅವಿನಾಶ್ ಮನವಿ ಮಾಡಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು. ಏ.26ರಂದು ನಡೆಯುತ್ತಿರುವ ಲೋಕಸಭಾ ಚುನಾವಣೆಯ ಮತದಾನ ಎದುರಿಸಲು ಬಿಜೆಪಿ ಸಜ್ಜಾಗಿದೆ. ಮೊದಲ ಹಂತದ ಚುನಾವಣೆ ಹಳೇ ಮೈಸೂರು ಭಾಗದಲ್ಲಿ ನಡೆಯುತ್ತಿದ್ದು, ಮೊದಲ ಹಂತದಲ್ಲಿ ನಡೆಯುವ ಚುನಾವಣೆಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿ ಗೆಲ್ಲಲಿದೆ. ಅದರಲ್ಲೂ ಮೈಸೂರು–ಕೊಡಗು, ಚಾಮರಾಜನಗರ, ಮಂಡ್ಯ, ಹಾಸನ, ತುಮಕೂರು ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿಗಳು ಹೆಚ್ಚಿನ ಲೀಡ್ ಪಡೆದು ಗೆಲ್ಲಲಿದ್ದಾರೆ ಎಂದು ಹೇಳಿದರು.

ಕಳೆದ 10 ವರ್ಷದಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ಅತ್ಯುತ್ತಮ ಆಡಳಿತ ನಡೆಸುವ ಮೂಲಕ ಸಾಧನೆ ಮಾಡಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಕಾರ್ಯಕರ್ತರು ತಲೆ ತಗ್ಗಿಸುವ ಕೆಲಸ ಕೇಂದ್ರ ಸರ್ಕಾರ ಮಾಡಿಲ್ಲ. ಕೇಂದ್ರ ಸರ್ಕಾರದ ಸಾಧನೆಯಿಂದಾಗಿ ಹಾಗೂ ಜಾರಿಗೊಳಿಸಿರುವ ಯೋಜನೆಗಳಿಂದಾಗಿ ಧೈರ್ಯದಿಂದ ಕಾರ್ಯಕರ್ತರು ಮತ ಕೇಳಬಹುದು ಎಂದು ಹೇಳಿದರು.

2013ರಲ್ಲಿ ದೇಶದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಗಟ್ಟಿನಿಲುವ ಪ್ರದರ್ಶಿಸಲು ಹಾಗೂ ಪ್ರಮುಖ ನೀತಿ ತಾಳಲು ಸಾಧ್ಯವಾಗದಂತಹ ಪರಿಸ್ಥಿತಿ ಇತ್ತು. ಇದನ್ನು ಗಮನಿಸಿದ ದೇಶದ ಜನತೆ ಮೋದಿ ನೇತೃತ್ವದ ಸರ್ಕಾರ ರಚನೆಗೆ ಆಶೀರ್ವದಿಸಿದ್ದರು. ಎರಡು ಬಾರಿ ಪ್ರಧಾನಿಯಾಗಿ ಮೋದಿ ಉತ್ತಮ ಆಡಳಿತ ನಡೆಸಿದ್ದಾರೆ. ಅವರು ಸತತ ಮೂರನೇ ಬಾರಿಯೂ ಪ್ರಧಾನಿಯಾಗಿ ಆಯ್ಕೆಯಾಗುವುದು ಖಚಿತ. ಇದರಿಂದ ಜನತೆ ಬಿಜೆಪಿ ಅಭ್ಯರ್ಥಿಗಳಿಗೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಕೋವಿಡ್ ಸಂದರ್ಭದಲ್ಲಿ ವಿಶ್ವದಲ್ಲೇ ಎಲ್ಲಾ ಕ್ಷೇತ್ರಗಳಲ್ಲೂ ಹಿನ್ನಡೆಯಾಗಿತ್ತು. ಈ ವೇಳೆ ಪ್ರಧಾನಿ ಮೋದಿ ಅವರು ಕೈಗೊಂಡ ಕಠಿಣ ನಿರ್ಧಾರಗಳು ಹಾಗೂ ಕೆಲವು ಕಾರ್ಯಕ್ರಮಗಳು ಕೊರೊನಾ ಸಂದರ್ಭದಲ್ಲಿ ಆಗಿದ್ದ ಹಿನ್ನಡೆಯನ್ನು ಹಿಂದಿಕ್ಕಲು ಸಾಧ್ಯವಾಯಿತು. ಮೋದಿ ಮೂರನೇ ಅವಧಿಯಲ್ಲಿ ಭಾರತದ ಅಭಿವೃದ್ಧಿ ಇನ್ನಷ್ಟು ಉತ್ತುಂಗಕ್ಕೆ ಕೊಂಡೊಯ್ಯಲಿದ್ದಾರೆ. ಮಹಿಳೆಯರಿಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. 2047ರ ವೇಳೆಗೆ ವಿಕಸಿತ ಭಾರತ ಆಗಬೇಕಾದರೆ ಬಿಜೆಪಿ ಗೆಲ್ಲಿಸಬೇಕು. ಈ ಬಾರಿ ದೇಶದಲ್ಲಿ ಬಿಜೆಪಿ ಅಭ್ಯರ್ಥಿಗಳು 370 ಕ್ಷೇತ್ರದಲ್ಲಿ ಗೆಲ್ಲಬೇಕು ಎಂಬ ಸಂಕಲ್ಪ ಮಾಡಿದ್ದಾರೆ. ಎನ್‌ಡಿಎ ಅಭ್ಯರ್ಥಿಗಳು 400ಕ್ಕೂ ಹೆಚ್ಚು ಕ್ಷೇತ್ರದಲ್ಲಿ ಗೆಲ್ಲಲಿದ್ದಾರೆ. ರಾಜ್ಯದಲ್ಲಿ 28 ಕ್ಷೇತ್ರಗಳಲ್ಲೂ ಬಿಜೆಪಿ ಗೆಲುವು ಸಾಧಿಸುವುದು ಖಚಿತ ಎಂದರು. ಸುದ್ದಿಗೋಷ್ಠಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ರಾಜ್ಯ ಬಿಜೆಪಿ ಉಪಾಧ್ಯಕ್ಷ ಎಂ.ರಾಜೇಂದ್ರ, ಮುಖಂಡರಾದ ಕೇಬಲ್ ಮಹೇಶ್, ಮಹೇಶ್ ರಾಜೇ ಅರಸ್, ವಸಂತ್ ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಬಿಜೆಪಿಯಲ್ಲಿ ಉಸಿರುಗಟ್ಟಿಸುವ ಸ್ಥಿತಿ, ಅದಕ್ಕೆ ಆ ಪಕ್ಷ ಬಿಟ್ಟು, ಕಾಂಗ್ರೆಸ್ ಸೇರಿದೆ

ಕಾಂಗ್ರೆಸ್ ಮುಖಂಡ ಕೋಟೆ ಎಂ.ಶಿವಣ್ಣ



ಮೈಸೂರು, ಏ.24(ಜಿಎ)–ಬಿಜೆಪಿಯಲ್ಲಿ ಉಸಿರುಗಟ್ಟಿಸುವ ಸ್ಥಿತಿ ಇರುವುದರಿಂದ ನಾನು ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡೆ. ಬಿಜೆಪಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಉತ್ತಮ ಸ್ಥಾನಮಾನ ದೊರೆಯುವುದಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ನೀಡುವುದರಿಂದ ಮಾತ್ರ ದಲಿತರ, ಬಡವರ ಉದ್ಧಾರ ಸಾಧ್ಯ ಎಂದು ಕಾಂಗ್ರೆಸ್ ಮುಖಂಡ ಕೋಟೆ ಎಂ.ಶಿವಣ್ಣ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯ ನಾಯಕರನ್ನು ಬೆಳೆಸದೇ ಪ್ರಯೋಗದ ಹೆಸರಲ್ಲಿ ಧ್ವನಿ ಅಡಗಿಸುವುದೇ ಬಿಜೆಪಿ ನಿಯಮ. ಅಲ್ಲಿ ಹಿಂದುಳಿದವರಿಗೆ ಉಸಿರುಗಟ್ಟುವ ವಾತಾವರಣವಿದೆ. ಯಾವುದೇ ಗೌರವ ಸಿಗಲಿಲ್ಲ ಎಂದರು.

ಒಳ ಮೀಸಲಾತಿ ಬಗ್ಗೆ ಚರ್ಚೆಯಾಗಲಿಲ್ಲ. ಆದರಿಂದ ಮರಳಿ ಕಾಂಗ್ರೆಸ್‌ಗೆ ಬಂದಿದ್ದು, ನೆಮ್ಮದಿ ದೊರೆತಿದೆ. ಕಾಂಗ್ರೆಸ್ ಸೇರ್ಪಡೆಗೊಂಡ ನಂತರ ಚಾಮರಾಜನಗರದಲ್ಲಿ ಅನೇಕ ಪ್ರಚಾರ ಸಭೆಗಳನ್ನು ನಡೆಸಿದ್ದು, ಅಲ್ಲಿ ಕಾಂಗ್ರೆಸ್ ಅಲೆ ಇದೆ ಎಂದು ತಿಳಿಯುತ್ತಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಂತರ ಕೆಪಿಸಿಸಿ ಉಪಾಧ್ಯಕ್ಷ ಜಿ.ಎನ್.ನಂಜುಂಡಸ್ವಾಮಿ ಮಾತನಾಡಿ, ನಾನು ಚಾಮರಾಜನಗರ ಲೋಕಸಭಾ ಚುನಾವಣೆಯ ಆಕಾಂಕ್ಷಿಯಾಗಿದ್ದೆ. ಆದರೆ, ಪಕ್ಷ ಸುನೀಲ್ ಬೋಸ್ ಅವರಿಗೆ ಅವಕಾಶ ಮಾಡಿಕೊಟ್ಟಿದೆ. ನಂತರ ಪಕ್ಷದ ನಿರೀಕ್ಷೆಯಂತೆ ಚುನಾವಣೆಯಲ್ಲಿ ಕೆಲ ಜವಾಬ್ದಾರಿಗಳನ್ನು ನಿಭಾಯಿಸುತ್ತಿದ್ದು, ಎಲ್ಲೆಡೆ ಕಾಂಗ್ರೆಸ್ ಗೆಲುವಿನ ವಾತಾವರಣವಿದೆ. ಸಾಮರಸ್ಯದೊಂದಿಗೆ ಎಲ್ಲರ ಬದುಕಿಗೆ ಬೆಂಬಲ ನೀಡುವ ಕೆಲಸವಾಗಿದೆ. ರೈತರ ಉತ್ತಮ ಜೀವನಕ್ಕೆ ಕಾಂಗ್ರೆಸ್ ಮಾತ್ರ ಭರವಸೆ ಎಂದು ಕೋಟೆ ಶಿವಣ್ಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸುನೀಲ್ ಕುಮಾರ್, ರಾಕೇಶ್‌ಕುಮಾರ್, ಶೇಖರ್, ಕೆ.ರಮೇಶ್ ಉಪಸ್ಥಿತರಿದ್ದರು.

ಕೊಡಗಿನಲ್ಲಿ ಯದುವೀರ್ ಭರ್ಜರಿ ರೋಡ್ ಶೋ

• ಚಿತ್ರನಟಿ ತಾರಾ, ಬಿಜೆಪಿ ಮುಖಂಡರ ಸಾಥ್ • ಕಾರ್ಯಕರ್ತರ ಹರ್ಷೋದ್ಗಾರ



ಮಡಿಕೇರಿಯಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್ ರೋಡ್ ಶೋ ಮೂಲಕ ಮತಯಾಚಿಸಿದರು.

ಮಡಿಕೇರಿ, ಏ.24–ಚುನಾವಣಾ ಬಹಿರಂಗ ಪ್ರಚಾರದ ಕೊನೆಯ ದಿನವಾದ ಬುಧವಾರ ಮಡಿಕೇರಿಯಲ್ಲಿ ಮೈಸೂರು–ಕೊಡಗು ಲೋಕ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರ್ಜರಿ ರೋಡ್ ಶೋ ನಡೆಸುವ ಮೂಲಕ ಮತಯಾಚಿಸಿದರು.

ಚಿತ್ರನಟಿ, ವಿಧಾನಪರಿಷತ್ ಸದಸ್ಯೆ ತಾರಾ, ಜಿಲ್ಲೆಯ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತ ರೊಂದಿಗೆ ಮೊದಲು ನಗರದ ಶ್ರೀ ಚೌಡೇಶ್ವರಿ ದೇವ ಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ತಮ್ಮ ಗೆಲುವಿ ಗಾಗಿ ಪ್ರಾರ್ಥಿಸಿದರು. ಬಳಿಕ ಕಾರ್ಯಕರ್ತರ ಹರ್ಷೋದ್ಗಾರಗಳ ನಡುವೆ ಶ್ರೀ ಚೌಡೇಶ್ವರಿ ದೇವಾ ಲಯದಿಂದ ಆರಂಭಗೊಂಡ ರೋಡ್ ಶೋ ಮಹ ದೇವಪೇಟೆ, ಹಳೆಯ ಖಾಸಗಿ ಬಸ್ ನಿಲ್ದಾಣ ಮಾರ್ಗ ವಾಗಿ ಕೋಟೆಯ ಮುಂಭಾಗದ ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದವರೆಗೆ ನಡೆಸಲಾಯಿತು.

ರೋಡ್ ಶೋ ಆರಂಭಕ್ಕೂ ಮುನ್ನ ಸುದ್ದಿಗಾರ ರೊಂದಿಗೆ ಮಾತನಾಡಿದ ವಿಧಾನ ಪರಿಷತ್ ಸದಸ್ಯೆ ತಾರಾ, ಬಿಜೆಪಿ ಪರವಾಗಿ ರಾಜ್ಯ ಮತ್ತು ದೇಶದಲ್ಲಿ ಉತ್ತಮ ವಾತಾವರಣವಿದೆ. ಪಕ್ಷದ ಅಭ್ಯರ್ಥಿ ಯದುವೀರ್ ಅವರ ಬಗ್ಗೆ ಮೈಸೂರು–ಕೊಡಗು ಲೋಕಾಸಭಾ ಕ್ಷೇತ್ರದಾದ್ಯಂತ ಜನರ ಒಲವು ಕಂಡು ಬರುತ್ತಿದೆ. ಹಿಂದಿನಿಂದಲು ಮೈಸೂರು ರಾಜವಂಶಸ್ಥರು ಮತ್ತು ಜನರ ನಡುವೆ ಭಾವ ನಾತ್ಮಕ ಸಂಬಂಧವಿದೆ. ಈ ಬಾರಿ ಯದುವೀರ್ ಅವರಿಗೆ ಕ್ಷೇತ್ರದ ಜನತೆ ಆಶೀರ್ವದಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಭ್ಯರ್ಥಿ ಯದುವೀರ್ ಮಾತನಾಡಿ, ಮೈಸೂರು ಮತ್ತು ಕೊಡಗು ಭಾಗದಲ್ಲಿ ಬಿಜೆಪಿ ಪರವಾಗಿ ಉತ್ತಮ ಒಲವು ಕಂಡು ಬಂದಿದೆ ಎಂದರು.

ರೋಡ್ ಶೋನಲ್ಲಿ ಮಾಜಿ ಶಾಸಕರಾದ ಕೆ.ಜಿ. ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್, ಎಂಎಲ್‌ಸಿ ಸುಜಾ ಕುಶಾಲಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ, ಮಡಿಕೇರಿ ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಪಕ್ಷದ ಪ್ರಮುಖರಾದ ರೀನಾ ಪ್ರಕಾಶ್, ಮಹೇಶ್ ಜೈನಿ, ನೆಲ್ಲೀರ ಚಲನ್, ಬಿ.ಕೆ.ಅರುಣ್ ಕುಮಾರ್, ಬಿ.ಕೆ.ಜಗದೀಶ್, ಅಪ್ಪು ರವೀಂದ್ರ, ಪಿ.ಡಿ.ಪೊನ್ನಪ್ಪ, ನಾಗೇಶ್ ಕುಂದಲ್ಪಾಡಿ, ಯಮುನಾ ಚಂಗಪ್ಪ, ಉಮೇಶ್ ಸುಬ್ರಮಣಿ, ಸಜಿಲ್ ಕೃಷ್ಣನ್, ತಳೂರು ಕಿಶೋರ್ ಕುಮಾರ್ ಇತರರು ಪಾಲ್ಗೊಂಡಿದ್ದರು.

ಸದೃಢ ಭಾರತಕ್ಕಾಗಿ ಬಿಜೆಪಿ ಬೆಂಬಲಿಸಿ



ವಿರಾಜಪೇಟೆಯಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್ ಚಿತ್ರನಟಿ ತಾರಾ, ಮಾಜಿ ಶಾಸಕ ಕೆ.ಜಿ.ಬೋಪಯ್ಯ ಅವರೊಂದಿಗೆ ರೋಡ್ ಶೋ ನಡೆಸಿದರು.

ವಿರಾಜಪೇಟೆ: ಸದೃಢ ಭಾರತ ನಿರ್ಮಾಣ ಕ್ಕಾಗಿ ಎಲ್ಲರೂ ಬಿಜೆಪಿ ಬೆಂಬಲಿಸಬೇಕು ಎಂದು ಮೈಸೂರು–ಕೊಡಗೂ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಮನವಿ ಮಾಡಿದರು.

ಪಟ್ಟಣದಲ್ಲಿ ಬುಧವಾರ ರೋಡ್ ಶೋ ನಡೆಸಿ ಮಾತನಾಡಿದ ಅವರು, ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿ ಆಗಲು ಕಮಲದ ಗುರುತಿಗೆ ಮತ ನೀಡುವ ಮೂಲಕ ಕ್ಷೇತ್ರದ ಎಲ್ಲರೂ ಬಿಜೆಪಿಯೊಂದಿಗೆ ಕೈಜೋಡಿಸಬೇಕು. ದೇಶದ ಹಿತಕ್ಕಾಗಿ ಪ್ರಕೃತಿ ಉಳಿಸಿ ಬೆಳೆಸುವ ಕೆಲಸವನ್ನು ಮುಂದಿನ ಯುವ ಪೀಳಿಗೆಯೂ ಮುಂದುವರೆಸುವಂತಾಗಲಿ ಎಂದು ತಿಳಿಸಿದರು.

ಇದೇ ವೇಳೆ ಪಟ್ಟಣದ ತೆಲುಗರ ಬೀದಿಯಿಂದ ಪ್ರಾರಂಭವಾದ ರೋಡ್ ಶೋ ಪಟ್ಟಣದ ಜೈನರ ಬೀದಿ, ದೊಡ್ಡಟ್ಟಿ ಚೌಕಿ, ಗಡಿಯಾರ ಕಂಬ, ಖಾಸಗಿ ಬಸ್ ನಿಲ್ದಾಣ ಸೇರಿದಂತೆ ವಿವಿಧೆಡೆ ನಡೆಸಲಾಯಿತು. ಮಹಿಳಾ ತಂಡದ ಚಂಡೆ ವಾದ್ಯ ಆಕರ್ಷಣೀಯವಾಗಿತ್ತು. ಮಾಜಿ ಶಾಸಕ ಕೆ.ಜಿ.ಬೋಪಯ್ಯ, ವಿಧಾನ ಪರಿಷತ್ ಸದಸ್ಯರಾದ ತಾರಾ, ಸುಜಾಕುಶಾಲಪ್ಪ ಕೊಡಗೂ–ಮೈಸೂರು ಕ್ಷೇತ್ರದ ಬಿಜೆಪಿ ಚುನಾವಣಾ ಉಸ್ತುವಾರಿ ಪಳೆಯಂಡ ರಾಬಿನ್ ದೇವಯ್ಯ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿಕಾಳಪ್ಪ, ತಾಲೂಕು ಅಧ್ಯಕ್ಷ ಸುವೀನ್ ಗಣಪತಿ, ನಗರಾಧ್ಯಕ್ಷ ಟಿ.ಪಿ.ಕೃಷ್ಣ, ಕಾರ್ಯಕರ್ತರು ಹಾಜರಿದ್ದರು.

ತೋಟದ ಕೆರೆಯಲ್ಲಿ ಸಿಲುಕಿದ್ದ ಕಾಡಾನೆಗಳ ರಕ್ಷಣೆ



ಕುಮುಟೂರು ಗ್ರಾಮದ ಕಾಫಿ ತೋಟದ ಕೆರೆಯ ನೀರಿನಲ್ಲಿ ಸಿಲುಕಿದ್ದ ಕಾಡಾನೆಗಳು.

ಮಡಿಕೇರಿ: ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಕುಮುಟೂರು ಗ್ರಾಮದ ಕಾಫಿ ತೋಟವೊಂದರ ಕೆರೆಗೆ ನೀರು ಕುಡಿಯಲು ಬಂದು ನೀರಿನಲ್ಲಿ ಸಿಲುಕಿ ಒದ್ದಾಡುತ್ತಿದ್ದ 4 ಹೆಣ್ಣಾನೆಗಳನ್ನು ಅರಣ್ಯಾಧಿಕಾರಿ ಗಳು ಹಾಗೂ ಸಿಬ್ಬಂದಿ ಬುಧವಾರ ರಕ್ಷಿಸಿದರು.

ಶ್ರೀಮಂಗಲ ಎರ್ಮಾಡು ಸ್ವಾಗತ ಕಮಾನು ಸಮೀಪದ ಕೊಟ್ರಂಗಡ ಸುಬ್ರಮಣಿ ಎಂಬುವರ ಕಾಫಿ ತೋಟದಲ್ಲಿ ಮಂಗಳವಾರ ಬೆಳಗ್ಗೆಯಿಂ ದಲೇ ಸುಮಾರು 10 ಕಾಡಾನೆಗಳ ಹಿಂಡು ಬೀಡು ಬಿಟ್ಟಿತ್ತಲ್ಲದೇ, ಕೃಷಿ ಫಸಲು ಹಾನಿಪಡಿಸಿ ರಾತ್ರಿ ಪಕ್ಕದ ಬಾಚೆಟೀರ ದೀಪಕ್ ಎಂಬುವರ ತೋಟಕ್ಕೆ ನುಸುಳಿದ್ದವು.

ಮಂಗಳವಾರ ರಾತ್ರಿ 1 ಗಂಟೆಯಲ್ಲಿ ಪಕ್ಕದ ತೋಟದ ಲೈನ್ ಮನೆಯಲ್ಲಿ ವಾಸವಿದ್ದ ಕಾರ್ಮಿ ಕರು ಕಾಡಾನೆಗಳು ತೋಟದ ಕೆರೆಯಲ್ಲಿ ಸಿಲುಕಿ ಘೀಳಿಡುತ್ತಿರುವ ಬಗ್ಗೆ ಬಾಚಂಗಡ ಕಾರ್ಯಪ್ಪಗೆ ಮಾಹಿತಿ ನೀಡಿದ್ದರು. ಇವುಗಳ ಪೈಕಿ ನಾಲ್ಕೈದು ಕಾಡಾನೆಗಳು ಹರಸಾಹಸದಿಂದ ಕೆರೆಯಿಂದ ಮೇಲೆ ಬಂದಿದ್ದು, ಇನ್ನುಳಿದ 4 ಹೆಣ್ಣಾನೆಗಳು ನೀರಿನಿಂದ ಹೊರಬರಲು ಆಗದೇ ಒದ್ದಾಡುತ್ತಿದ್ದವು. ಬುಧ ವಾರ ಬೆಳಗ್ಗೆ ಭೇಟಿ ನೀಡಿದ ಅರಣ್ಯಾಧಿಕಾರಿಗಳು, ಜೆಸಿಬಿ ಮೂಲಕ ಕಾಡಾನೆಗಳನ್ನು ರಕ್ಷಿಸಿದರು.

ತಾಪಂ ಮಾಜಿ ಸದ್ಯಸ ಪಲ್ವಿನ್, ಶ್ರೀಮಂಗಲ ಗ್ರಾಪಂ ಸದಸ್ಯ ಮಾದೀರ ಸುದಿ ಪೊನ್ನಪ್ಪ, ಗ್ರಾಮಸ್ಥರಾದ ಬಾಚಂಗಡ ಕಾರ್ಯಪ್ಪ, ಕಟ್ಟೇರ ದೇವಯ್ಯ, ಕೊಟ್ರಂಗಡ ವಿನೇಶ್, ಮಾದೀರ ಮಧು, ಬಾಚಂಗಡ ಬೋಪಯ್ಯ, ಎಸಿಎಫ್ ಗೋಪಾಲ್, ಆರ್‌ಎಫ್‌ಓ ಬಿ.ಎಂ.ಶಂಕರ್, ಡಿಆರ್‌ಎಫ್‌ಓ ಮಂಜುನಾಥ್, ಅರಣ್ಯಾ ಧಿಕಾರಿಗಳಾದ ದಿವಾಕರ್, ಗಣೇಶ್, ಅಂತೋಣಿ, ತಿತಿಮತಿ ಆನೆ ಕಾರ್ಯಪಡೆ, ಪೊನ್ನಂಪೇಟೆ ಆರ್‌ಆರ್‌ಟಿ ಸಿಬ್ಬಂದಿ ಹಾಜರಿದ್ದರು.

1600 ಪೊಲೀಸ್ ಸಿಬ್ಬಂದಿ ನಿಯೋಜನೆ: ಎಸ್ಪಿ ರಾಮರಾಜನ್ ಮಾಹಿತಿ



ಮಡಿಕೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾತನಾಡಿದರು.

ಮಡಿಕೇರಿ, ಏ.24–ಲೋಕಸಭಾ ಚುನಾವಣೆ ಯನ್ನು ಪಾರದರ್ಶಕ ಮತ್ತು ಶಾಂತಿಯುತವಾಗಿ ನಡೆಸಲು ಜಿಲ್ಲಾ ಪೊಲೀಸ್ ಇಲಾಖೆ ಸನ್ನದ್ಧ ವಾಗಿದ್ದು, ಒಟ್ಟು 1600 ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಚುನಾವಣಾ ಕರ್ತವ್ಯಕ್ಕೆ ನಿಯುಕ್ತರಾದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಚುನಾವಣೆ ನಿರ್ವಹಣೆ ಕುರಿತು ತಿಳಿಸಿ ಮಾತನಾಡಿದ ಅವರು, ಮತಗಟ್ಟೆಗಳಲ್ಲಿ ಕರ್ತವ್ಯಕ್ಕೆ ನಿಯೋಜಿತ ಪೊಲೀಸರು ಸಾರ್ವಜನಿಕರೊಂದಿಗೆ ಅತ್ಯಂತ ಸೌಜನ್ಯಯುತವಾಗಿ ವರ್ತಿಸಬೇಕು. ಇಲ್ಲಿಯವರೆಗೆ ಪೊಲೀಸ್ ಇಲಾಖೆ ವಿರುದ್ಧ ಸಾರ್ವಜನಿಕರಿಂದ ಯಾವುದೇ ಆರೋಪ ಮತ್ತು ದೂರುಗಳು ಕೇಳಿ ಬಂದಿಲ್ಲ. ಇದಕ್ಕೆ ಅವಕಾಶ ನೀಡಬಾರದು ಎಂದು ಕಿವಿಮಾತು ಹೇಳಿದರು.

ಕೊಡಗು ಜಿಲ್ಲೆಯ ಜನತೆ ಶಿಕ್ಷಣವಂತರು ಮತ್ತು ಸೌಜನ್ಯ ಮನೋಭಾವದವರು. ಇವರೊಂದಿಗೆ ಪೊಲೀಸ್ ಸಿಬ್ಬಂದಿ ಗೌರವಯುತವಾಗಿ ನಡೆದು ಕೊಳ್ಳಬೇಕು. ಪ್ರತಿಯೊಬ್ಬ ಸಿಬ್ಬಂದಿಯ ಸಮಸ್ಯೆ ಗಳಿಗೆ ನಾವು ಸ್ಪಂದಿಸುತ್ತೇವೆ. ಆದರೆ, ನಿಮ್ಮಿಂದ ಯಾವುದೇ ತೊಂದರೆಗಳು ಆಗಬಾರದು. ಆ ರೀತಿ ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಭದ್ರತೆಗೆ ಕ್ರಮ: ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್‌ಪಿ ರಾಮರಾಜನ್, ಚುನಾವಣೆ ಎನ್ನುವುದು ಪ್ರಜಾಪ್ರಭುತ್ವ ಹಬ್ಬವಾಗಿದೆ. ಇದನ್ನು ಶಾಂತಿ ಯುತವಾಗಿ ನಡೆಸಲು ಈ ಬಾರಿ ಎಸ್‌ಪಿ, ಡಿವೈಎಸ್‌ಪಿಗಳು, 14 ವೃತ್ತ ನಿರೀಕ್ಷಕರು, 45 ಎಸ್‌ಐ, 59 ಎಎಸ್‌ಐ, 678 ಸಿಬ್ಬಂದಿ ಮತ್ತು 280 ಗೃಹರಕ್ಷಕ ದಳದ ಸಿಬ್ಬಂದಿ ಬಳಸಿಕೊಳ್ಳಲಾಗುತ್ತಿದೆ ಎಂದು ವಿವರಿಸಿದರು. ಸೂಕ್ಷ್ಮ, ಅತೀ ಸೂಕ್ಷ್ಮ ಮತ್ತು ನಕ್ಸಲ್ ಮತಗಟ್ಟೆ ಗಳೆಂದು ಈಗಾಗಲೇ ಗುರುತಿಸಲಾಗಿರುವ ಮತ ಕೇಂದ್ರಗಳಲ್ಲಿ ಹೆಚ್ಚುವರಿ ಭದ್ರತೆ ಮಾಡಲಾಗಿದೆ. ಈ ಬಾರಿ ಗುಜರಾತ್‌ನ 180 ಶಸ್ತ್ರಸಜ್ಜಿತ ಪೊಲೀಸ್ ಸಿಬ್ಬಂದಿ ಬಳಸಿ ಕೊಳ್ಳಲಾಗುತ್ತಿದೆ. ಇದರೊಂದಿಗೆ 8 ಕೆಎಸ್‌ಆರ್‌ಪಿ, ಜಿಲ್ಲಾ ಸಶಸ್ತ್ರ ಪೊಲೀಸ್ ದಳವನ್ನು ಬಂದೋಬಸ್ತ್ ಕಾರ್ಯಕ್ಕೆ ನಿಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

44 ಸೆಕ್ಟರ್ ಮೊಬೈಲ್ ಘಟಕ: ಜಿಲ್ಲೆಯ ಯಾವುದೇ ಮತಗಟ್ಟೆಯಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಪೂರಕವಾಗಿ 44 ಸೆಕ್ಟರ್ ಮೊಬೈಲ್ ಘಟಕಗಳನ್ನು ಜಿಲ್ಲಾದ್ಯಂತ ಸ್ಥಾಪಿಸಲಾಗಿದೆ. ಯಾವುದೇ ಅಹಿತಕರ ಘಟನೆಯ ಸುಳಿವು ದೊರೆತ ತಕ್ಷಣ ಕ್ಷಿಪ್ರಗತಿಯಲ್ಲಿ ಸ್ಥಳಕ್ಕೆ ತೆರಳಿ ಅದನ್ನು ನಿಗ್ರಹಿಸುವಲ್ಲಿ ಈ ಘಟಕಗಳು ಕಾರ್ಯನಿರ್ವಹಿಸಲಿವೆ. ಇದಕ್ಕೆ ಪೂರಕವಾಗಿ ಜಿಲ್ಲಾಡಳಿತದ ಫ್ಲೈಯಿಂಗ್ ಸ್ಕ್ವಾಡ್‌ಗಳು ಕಾರ್ಯನಿರ್ವಹಿಸಲಿವೆ ಎಂದು ತಿಳಿಸಿದರು.

ಈ ಸಂದರ್ಭ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರರಾಜ್, ಡಿವೈಎಸ್‌ಪಿಗಳಾದ ಆರ್.ವಿ.ಗಂಗಾಧರಪ್ಪ, ಮೋಹನ್ ಕುಮಾರ್, ಮಹೇಶ್ ಕುಮಾರ್, ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಚಾಮರಾಜನಗರದಲ್ಲಿ ವಿದ್ಯಾರ್ಥಿನಿ ನೇಹಾ ಹಿರೇಮಠ ಹತ್ಯೆ ಖಂಡಿಸಿ

ವೀರಶೈವ–ಲಿಂಗಾಯತರ ಬೃಹತ್ ಪ್ರತಿಭಟನೆ



ನೇಹಾ ಹತ್ಯೆ ಖಂಡಿಸಿ ಚಾ.ನಗರದಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಏ.24–ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ ಹತ್ಯೆ ಖಂಡಿಸಿ ನಗರದಲ್ಲಿ ಬುಧವಾರ ಅಖಿಲ ಭಾರತ ವೀರಶೈವ–ಲಿಂಗಾಯುತ ಸಂಘಟನೆ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಜಮಾಯಿಸಿದ ಸಾವಿರಾರು ಪ್ರತಿಭಟನಾಕಾರರು, ಅಲ್ಲಿಂದ ಭುವನೇಶ್ವರಿ ವೃತ್ತದ ಮೂಲಕ ಜಿಲ್ಲಾಡಳಿತ ಭವನದ ಪ್ರವೇಶದ್ವಾರದವರೆಗೆ ಮೆರವಣಿಗೆ ನಡೆಸಿದರು. ಮೆರವಣಿಗೆ ಉದ್ದಕ್ಕೂ ಮುಖ್ಯಮಂತ್ರಿ ಮತ್ತು ಗೃಹ ಸಚಿವರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಮೆರವಣಿಗೆಯನ್ನು ಭುವನೇಶ್ವರಿ ವೃತ್ತದವರೆಗೆ ಮಾತ್ರ ನಡೆಸಬೇಕು. ನಿಮ್ಮ ಮನವಿಯನ್ನು ಸಂಬಂಧಪಟ್ಟವರು ಇಲ್ಲೇ ಸ್ವೀಕರಿಸುತ್ತಾರೆ ಎಂದು ಪೊಲೀಸರು ಹೇಳಿದರು, ಆದರೂ, ಪ್ರತಿಭಟನಾಕಾರರು ನಾವು ಜಿಲ್ಲಾಡಳಿತ ಭವನದ ಪ್ರವೇಶ ದ್ವಾರದ ವರೆಗೆ ತೆರಳಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಬೇಕು ಎಂದು ಪಟ್ಟುಹಿಡಿದರು. ನಂತರ ಪೊಲೀಸರು ರಸ್ತೆಗೆ ಅಡ್ಡವಾಗಿ ವ್ಯಾನ್ ನಿಲ್ಲಿಸಿದರೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಜಿಲ್ಲಾಡಳಿತ ಭವನದ ಪ್ರವೇಶ ದ್ವಾರದವರೆಗೆ ಮೆರವಣಿಗೆ ನಡೆಸಿ ಮನವಿ ಸಲ್ಲಿಸಿದರು.

ಹುಬ್ಬಳ್ಳಿಯಲ್ಲಿ ಕಾಲೇಜಿನ ವಿದ್ಯಾರ್ಥಿನಿ ನೇಹಾ ಹಿರೇಮಠಳನ್ನು ಕಾಲೇಜಿನ ಆವರಣದಲ್ಲೇ ಇರಿದು ಕೊಲೆ ಮಾಡಿರುವುದು ಇಡೀ ಮಾನವ ಕುಲಕ್ಕೆ ಮಾಡಿದ ಘೋರ ಅಪರಾಧ. ಇದರಿಂದ ಇಡೀ ನಾಗರಿಕ ಸಮಾಜವೇ ತಲ್ಲಣಗೊಂಡಿದ್ದು, ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲದಂತ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಸರ್ಕಾರ ಈ ಘಟನೆ ಸಂಬಂಧ ತನಿಖೆಯನ್ನು ತೀವ್ರಗೊಳಿಸಬೇಕು ಎಂದು ಆಗ್ರಹಿಸಿದರು.

ಆರೋಪಿಗೆ ಕಠಿಣ ಶಿಕ್ಷೆಗೆ ಆಗ್ರಹ: ಇದೊಂದು ಅತ್ಯಂತ ಅಮಾನುಷ ಘಟನೆ. ಮುಖ್ಯಮಂತ್ರಿ, ಗೃಹ ಸಚಿವರು ಹಾಗೂ ಕೆಲ ಸಚಿವರು ಈ ಘಟನೆ ಕುರಿತು ಲಘುವಾಗಿ ಪ್ರತಿಕ್ರಿಯಿಸಿರುವುದು ಸರಿಯಲ್ಲ. ಇದು ಬೇಜವಾಬ್ದಾರಿ ತೋರಿಸುತ್ತದೆ ಎಂದು ಮರಿಯಾಲ ಮಠದ ಶ್ರೀ ಇಮ್ಮಡಿ ಮುರುಘಾ ರಾಜೇಂದ್ರಸ್ವಾಮೀಜಿ, ಹರವೆ ವಿರಕ್ತ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ, ನಗರದ ವಿರಕ್ತ ಮಠದ ಶ್ರೀ ಚನ್ನಬಸವಸ್ವಾಮೀಜಿ ಕಿಡಿಕಾರಿದರು.

ನೇಹಾಳನ್ನು ಹಾಡಹಗಲೇ ಕಾಲೇಜಿನ ಕ್ಯಾಂಪಸ್‌ನಲ್ಲಿ ಬರ್ಬರವಾಗಿ ಕೊಲೆ ಮಾಡಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತಹ ಕೃತ್ಯವಾಗಿದೆ. ಆರೋಪಿಗೆ ಕಠಿಣ ಶಿಕ್ಷೆಯಾಗಬೇಕು. ಇಂತಹ ಹೇಯ ಕೃತ್ಯ ಎಸಗಿರುವ ಆರೋಪಿಗೆ ಗಲ್ಲು ಶಿಕ್ಷೆಯಾಗಬೇಕು. ಮುಂದಿನ ದಿನಗಳಲ್ಲಿ ರಾಜ್ಯದ ಹೆಣ್ಣು ಮಕ್ಕಳಿಗೆ ಸೂಕ್ತ ರಕ್ಷಣೆಗಾಗಿ ಕಾನೂನು ತರಬೇಕು. ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಪ್ರಧಾನ ಕಾರ್ಯದರ್ಶಿ ನಾಗೇಂದ್ರ ಭೋಗಾಪುರ, ಜಿಲ್ಲಾ ಉಪಾಧ್ಯಕ್ಷರಾದ ರತ್ನಮ್ಮ, ಜಿ.ಎಂ.ಪ್ರಭುಸ್ವಾಮಿ, ಪುಟ್ಟಣ್ಣ ಮತ್ತು ತಾಲೂಕು ಅಧ್ಯಕ್ಷ ನಟೇಶ್, ಕಾಡಾ ಮಾಜಿ ಅಧ್ಯಕ್ಷ ಜಿ.ನಿಜಗುಣರಾಜು, ಮುಖಂಡರಾದ ಕುಮಾರಸ್ವಾಮಿ, ಆರ್.ವಿ.ಮಹದೇವಸ್ವಾಮಿ, ಪುಟ್ಟಮಲ್ಲಪ್ಪ, ಮಲ್ಲಪ್ಪ, ಲೋಕೇಶ್, ಪುರುಷೋತ್ತಮ್, ಶಿವಮಲ್ಲಪ್ಪ, ಬಸವರಾಜು, ಮಲ್ಲೇಶಪ್ಪ, ವೀರಭದ್ರಸ್ವಾಮಿ, ವಿಶ್ವನಾಥ್, ಗುರುಪ್ರಸಾದ್ ಹಾಗೂ ಸಾವಿರಾರು ಜನರು ಭಾಗವಹಿಸಿದ್ದರು.

ಪ್ರಧಾನಿ ಮೋದಿ ವಿರುದ್ಧ ಪ್ರಚಾರ: ರೈತ ಮುಖಂಡರಿಗೆ ಬಿಜೆಪಿ ಕಾರ್ಯಕರ್ತರ ತರಾಟೆ



ಚಾಮರಾಜನಗರದಲ್ಲಿ ಮೋದಿ ವಿರುದ್ಧ ಪ್ರಚಾರ ನಡೆಸುತ್ತಿದ್ದ ರೈತ ಸಂಘದ ಮುಖಂಡರನ್ನು ಬಿಜೆಪಿ ಕಾರ್ಯಕರ್ತರು ತರಾಟೆಗೆ ತೆಗೆದುಕೊಂಡರು.


ಚಾಮರಾಜನಗರ, ಏ.24–ಮೋದಿ ವಿರುದ್ಧ ಪ್ರಚಾರದಲ್ಲಿ ತೊಡಗಿದ್ದ ರೈತ ಸಂಘದ ಮುಖಂಡರು ಹಾಗೂ ಕಾರ್ಯಕರ್ತರನ್ನು ತಡೆದು ಬಿಜೆಪಿ ಕಾರ್ಯಕರ್ತರು ತರಾಟೆಗೆ ತೆಗೆದುಕೊಂಡ ಘಟನೆ ನಗರದಲ್ಲಿ ಬುಧವಾರ ನಡೆದಿದೆ.

ರೈತ ಸಂಘದ ಮುಖಂಡರಾದ ಬಡಗಲಪುರ ನಾಗೇಂದ್ರ, ಎ.ಮಹೇಶ ಪ್ರಭು ನೇತೃತ್ವದಲ್ಲಿ ಕೆಲ ಮುಖಂಡರು ನಗರದ ಅಂಗಡಿ ಬೀದಿಯಲ್ಲಿ ಮೋದಿ ವಿರುದ್ಧ ಪ್ರಚಾರ ನಡೆಸಿ, ಬಿಜೆಪಿಗೆ ಮತ ಚಲಾಯಿಸದಂತೆ ಮತದಾರರಲ್ಲಿ ಮನವಿ ಮಾಡುತ್ತಿದ್ದರು.

ಈ ವಿಚಾರ ತಿಳಿದ ಬಿಜೆಪಿ ಕಾರ್ಯಕರ್ತರು ಸ್ಥಳಾಗಮಿಸಿ, ಪ್ರಚಾರ ನಡೆಸುತ್ತಿದ್ದವರನ್ನು ತರಾಟೆಗೆ ತೆಗೆದುಕೊಂಡರು. ನೀವು ಯಾರಿಗೆ ಮತ ಹಾಕಬೇಕು ಎಂಬುದನ್ನು ತಿಳಿಸಿ, ಅದನ್ನು ಬಿಟ್ಟು ಮೋದಿಗೆ ಮತ ನೀಡಬೇಡಿ ಎಂದು ಹೇಳಲು ನೀವ್ಯಾರು? ನೀವು ಕಾಂಗ್ರೆಸ್ ಏಜೆಂಟ್ ರೀತಿ ವರ್ತಿಸುತ್ತಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಂತರ ರೈತ ಸಂಘದ ಮುಖಂಡರು ಸ್ಥಳದಿಂದ ಕಾಲ್ಕಿತ್ತು, ನಗರದ ಜನನ ಮಂಟಪದ ಬಳಿಯ ರೈತ ಸಂಘದ ಕಚೇರಿಗೆ ತೆರಳಿದರು. ಆದರೂ, ಅವರನ್ನು ಹಿಂಬಾಲಿಸಿದ ಬಿಜೆಪಿ ಕಾರ್ಯಕರ್ತರು ರೈತ ಸಂಘದ ಕಚೇರಿಗೆ ತೆರಳಿ, ರೈತ ಸಂಘದ ಮುಖಂಡರೊಂದಿಗೆ ಮಾತಿನ ಚಕಮಕಿ ನಡೆಸಿದರು. ನಂತರ ಸ್ಥಳಕ್ಕೆ ಆಗಮಿಸಿದ ಚುನಾವಣಾಧಿಕಾರಿಗಳು ಹಾಗೂ ಪೊಲೀಸರು ಪರಿಸ್ಥಿತಿ ತಿಳಿಗೊಳಿಸಿದರು.

ಬಿಜೆಪಿ ಅಭ್ಯರ್ಥಿ ಪರ ರಾಮಚಂದ್ರ ಮತಯಾಚನೆ



ಚಾಮರಾಜನಗರದ ಮೂಡಲಅಗ್ರಹಾರ ವೃದ್ಧಾಶ್ರಮಕ್ಕೆ ಭೇಟಿ ನೀಡಿದ ಎಂ.ರಾಮಚಂದ್ರ, ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಪರ ಮತಯಾಚಿಸಿದರು. ಈ ವೇಳೆ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸೂರ್ಯಕುಮಾರ್, ಆನಂದ್ ಭಗೀರಥ ಇದ್ದರು

ಚಾಮರಾಜನಗರ: ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಅತ್ಯಧಿಕ ಮತಗಳಿಂದ ಗೆಲುವು ಸಾಧಿಸಲಿದ್ದಾರೆ ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಮೂಡಲಅಗ್ರಹಾರ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಬಾಲರಾಜು ಪರ ಮತ ಯಾಚಿಸಿ ಮಾತನಾಡಿದ ಅವರು, ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಮೋದಿ ಅಲೆಯಿದೆ. ಜೊತೆಗೆ ಬಾಲರಾಜು ಪರ ಉತ್ತಮ ವಾತಾವರಣವಿದ್ದು, 10 ವರ್ಷದಿಂದ ನರೇಂದ್ರ ಮೋದಿ ಸಾಧನೆ ನೋಡಿ ಮತದಾರರು ಬಿಜೆಪಿಗೆ ಮತ ಹಾಕಲು ಉತ್ಸುಕರಾಗಿದ್ದಾರೆ. ಕಮಲದ ಗುರುತಿಗೆ ಮತ ಹಾಕಿ ಬಾಲರಾಜು ಅವರನ್ನು ಗೆಲ್ಲಿಸುವ ಮೂಲಕ ನರೇಂದ್ರ ಮೋದಿಯವರ ಕೈ ಬಲಪಡಿಸಬೇಕು ಎಂದು ರಾಮಚಂದ್ರ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸೂರ್ಯಕುಮಾರ್, ಆನಂದ್ ಭಗೀರಥ, ವೇಣುಗೋಪಾಲ, ರಾಹುಲ್, ಹಿಮಾಮ್ಸ್ ಹಾಜರಿದ್ದರು.

ಬಾಲರಾಜು ಸಜ್ಜನ ರಾಜಕಾರಣಿ: ಭರತ್ ಮಂಜೇಗೌಡ



ಎನ್‌ಡಿಎ ಮೈತ್ರಿ ಅಭ್ಯರ್ಥಿ ಎಸ್.ಬಾಲರಾಜು ಪರ ಜೆಡಿಎಸ್ ಯುವ ಮುಖಂಡ ಭರತ್ ಮಂಜೇಗೌಡ ಕ್ಷೇತ್ರದ ಪಣ್ಯದಹುಂಡಿಯಲ್ಲಿ ಮತಯಾಚಿಸಿದರು.

ಚಾಮರಾಜನಗರ, ಏ.24–ಚಾಮರಾಜನಗರ ಲೋಕಸಭಾ ಕ್ಷೇತ್ರದ ಎನ್‌ಡಿಎ ಮೈತ್ರಿ ಅಭ್ಯರ್ಥಿ ಎಸ್. ಬಾಲರಾಜು ಪರ ಜೆಡಿಎಸ್ ಯುವ ಮುಖಂಡ ಭರತ್ ಮಂಜೇಗೌಡ ಬುಧವಾರ ಕ್ಷೇತ್ರದ ಹಲವು ಗ್ರಾಮಗಳಿಗೆ ಭೇಟಿ ನೀಡಿ ಮತಯಾಚಿಸಿದರು.

ಕ್ಷೇತ್ರದ ಪಣ್ಯದಹುಂಡಿ ಸೇರಿದಂತೆ ಹಲವು ಗ್ರಾಮಗಳಿಗೆ ಭೇಟಿ ನೀಡಿದ ಭರತ್, ಮನೆ ಮನೆಗೆ ತೆರಳಿ ಬಾಲರಾಜು ಅವರಿಗೆ ಮತ ನೀಡುವಂತೆ ಮನವಿ ಮಾಡಿದರು. ಬಾಲರಾಜು ಸರಳ ಹಾಗೂ ಸಜ್ಜನ ರಾಜಕಾರಣಿ. ಇಂತಹವರು ರಾಜಕೀಯದಲ್ಲಿ ವಿರಳ. ಇವರನ್ನು ಆಯ್ಕೆ ಮಾಡಿ ಲೋಕಸಭೆಗೆ ಕಳುಹಿಸಿದ್ದಲ್ಲಿ ಕ್ಷೇತ್ರ ಮಾದರಿಯಾಗುವುದರಲ್ಲಿ ಸಂದೇಹವಿಲ್ಲ ಎಂದು ಹೇಳಿದರು.

ಎಚ್.ಡಿ.ಕುಮಾರಸ್ವಾಮಿ ಹಾಗೂ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯಕ್ಕೆ ನೀಡಿದ ಕೊಡುಗೆ ಜನಮಾನಸದಲ್ಲಿ ಇನ್ನೂ ನೆಲೆಯೂರಿದೆ. ಇದು ಮತವಾಗಿ ಪರಿವರ್ತನೆಯಾಗುವುದರಲ್ಲಿ ಸಂದೇಹವಿಲ್ಲ. ಕುಮಾರ ಸ್ವಾಮಿ ಗ್ರಾಮ ವಾಸ್ತವ್ಯ, ಸಾಲಮನ್ನಾ, ಯಡಿಯೂರಪ್ಪ ಅವರ ಅಭಿವೃದ್ಧಿ ಕಾರ್ಯಗಳೇ ಶ್ರೀರಕ್ಷೆಯಾಗಿದ್ದು, ಜನರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ ಎಂದರು.

ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿ ಆಗುವುದರಲ್ಲಿ ಯಾವುದೇ ಸಂಶಯವಿಲ್ಲ. ಜನರು ಸ್ವಯಂ ಪ್ರೇರಣೆಯಿಂದ ಮೋದಿ ಪರವಾಗಿ ಮತ ಚಲಾಯಿಸಲು ತುದಿಗಾಲಲ್ಲಿ ನಿಂತಿದ್ದಾರೆ. ದೇಶದ ಅಭಿವೃದ್ಧಿ ಮತ್ತು ಭವಿಷ್ಯದ ದೃಷ್ಟಿಯಿಂದ ಈ ಚುನಾವಣೆ ಅತ್ಯಂತ ಮಹತ್ವ ಪಡೆದುಕೊಂಡಿದ್ದು, ಎಲ್ಲರೂ ತಮ್ಮ ಹಕ್ಕನ್ನು ಚಲಾಯಿಸುವ ಮೂಲಕ ಮೈತ್ರಿ ಅಭ್ಯರ್ಥಿ ಗೆಲುವಿಗೆ ಬೆಂಬಲ ನೀಡಬೇಕೆಂದು ಮನವಿ ಮಾಡಿದರು.

ಹನುಮಂತಶೆಟ್ಟಿ ನಿಧನ



ಗುಂಡ್ಲುಪೇಟೆ: ಪಟ್ಟಣದ ಹಿರಿಯ ಪತ್ರಿಕಾ ವಿತರಕ ಹನುಮಂತ ಶೆಟ್ಟಿ(93) ಮಂಗಳವಾರ ರಾತ್ರಿ ನಿಧನರಾದರು. ಮೃತರು ಪತ್ರಿಕಾ ಪ್ರತಿನಿಧಿ ಸುಬ್ರಹ್ಮಣ್ಯ ಸೇರಿದಂತೆ ಆರು ಪುತ್ರರು, ಪುತ್ರಿ ಅಗಲಿದ್ದಾರೆ. ಪಟ್ಟಣದ ಹಿಂದೂ ರುದ್ರಭೂಮಿಯಲ್ಲಿ ಬುಧವಾರ ಅಂತ್ಯಕ್ರಿಯೆ ನೆರವೇರಿತು. **ಸಂತಾಪ:** ಮೃತರ ನಿಧನಕ್ಕೆ ತಾಲೂಕು ಪತ್ರಕರ್ತರ ಸಂಘ ಹಾಗೂ ಪತ್ರಿಕಾ ವಿತರಕರ ಸಂಘದ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ಮುಂಜಾಗ್ರತಾ ಕ್ರಮ ವಹಿಸಿ

ಚಾಮರಾಜನಗರ, ಏ.24– ಬಿಸಿಲಿನ ತಾಪಮಾನ ಅತಿಯಾದ ಶಾಖ ತರಂಗದಿಂದ ಹೀಟ್‌ಸ್ಟ್ರೋಕ್‌ನಂತಹ ಆರೋಗ್ಯದ ಸಮಸ್ಯೆ ತಡೆಗೆ ಸಾರ್ವಜನಿಕರು ಅಗತ್ಯ ಮುಂಜಾಗ್ರತಾ ಕ್ರಮ ವಹಿಸುವಂತೆ ಆರೋಗ್ಯ ಇಲಾಖೆ ತಿಳಿಸಿದೆ.

ಮತದಾನಕ್ಕೆ ಬರುವ ಸಾರ್ವಜನಿಕರು ಬಿಸಿಲಿನ ರಕ್ಷಣೆಗೆ ಟೋಪಿ, ಕೊಡೆ ಸಹಾಯ ಪಡೆಯಬೇಕು. ದ್ರವ ಆಹಾರ, ಹಣ್ಣುಗಳನ್ನು ಸೇವಿಸಬೇಕು. ಹೆಚ್ಚಾಗಿ ನೀರು ಕುಡಿಯಬೇಕು ಹಾಗೂ ಮತಗಟ್ಟೆ ಬಳಿ ನಿತ್ರಾಣ ಆದಲ್ಲಿ ಮತಗಟ್ಟೆಯಲ್ಲಿನ ವೈದ್ಯಕೀಯ ತಂಡದ ಬಳಿ ತಿಳಿಸಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಚಿದಂಬರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರವೇಶಾತಿ ನೋಂದಣಿಗೆ ಅವಕಾಶ

ಚಾಮರಾಜನಗರ, ಏ.24– ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿಯ ಪ್ರತಿಭಾವಂತ ಅಭ್ಯರ್ಥಿಗಳಿಗೆ 2024–25ನೇ ಸಾಲಿಗೆ ಜಿಲ್ಲೆಯ ಪ್ರತಿಷ್ಠಿತ ಶಾಲೆಗಳ ಅರ್ಹತಾ ಪರೀಕ್ಷೆಗೆ ಆನ್‌ಲೈನ್ ನೋಂದಣಿಗೆ ಮೇ 9 ರಿಂದ 21ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಆಸಕ್ತರು ಇಲಾಖೆಯ ವೆಬ್‌ಸೈಟ್ www.sw.kar.nic.in ನಲ್ಲಿ ಸಲ್ಲಿಸಿದ ಅರ್ಜಿಯೊಂದಿಗೆ ಎಲ್ಲಾ ದಾಖಲಾತಿಗಳನ್ನು ನಗರದ ಜಿಲ್ಲಾಡಳಿತ ಭವನದ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ಮೇ 21ರೊಳಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITES FOR SALE
ಇಲವಾಲ ಸೈಂಟ್ ಜೋಸೆಫ್ಸ್ ಶಾಲೆ ಹಿಂಭಾಗ ಕಾವ್ಯ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ
30x50 - 31 ಲಕ್ಷ
30x40 - 22 ಲಕ್ಷ
9886048471

ಬೇಕಾಗಿದ್ದಾರೆ
APE goods Auto Driver ಬೇಕಾಗಿದ್ದಾರೆ. & Billing Operator (lady) ಬೇಕಾಗಿದ್ದಾರೆ.
9972258425

ಸೈಟ್ ಮಾರಾಟಕ್ಕಿದೆ
30x40 ಉತ್ತರ ದಿಕ್ಕು ಶಿವಸ್ವಾಮಿ ನಗರ ಕೋಟೆಹುಂಡಿ ಸರ್ಕಲ್ ರಿಂಗ್ ರಸ್ತೆ ಹತ್ತಿರ ಸಂಪರ್ಕಿಸಿ:
9632464199

S.K CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elivation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

WANTED
Wanted Teaching staff for reputed institution (Experience Preferred) for all subjects. Transport facilities available. Drop your resume through WhatsApp
8971577685
9980631121

30x40 E/F ಸೈಟು ಮಾರಾಟಕ್ಕಿದೆ
15 ಲಕ್ಷಗಳು ನಂಜುಂಡೇಶ್ವರ ನಗರ TVS ಫ್ಯಾಕ್ಟರಿ ಹತ್ತಿರ ಮೈಸೂರು
9742198093

MUDA ಸೈಟ್ ಮಾರಾಟಕ್ಕಿದೆ
ಸಾತಗಳ್ಳಿ ರಿಂಗ್ ರಸ್ತೆಯಿಂದ 200 ಮೀಟರ್ ದೂರದ ವಿದ್ಯಾಶಂಕರ ಲೇಔಟ್‌ನಲ್ಲಿ 40x60 ಅಳತೆಯ South Facing ಸೈಟ್
9886048471

WANTED HEALTHCARE BUSINESS DEVELOPMENT EXECUTIVE
REQUIRE FRESH OR EXPERIENCED PERSONAL WORKED IN HEALTH CARE PRODUCTS OR PHARMACEUTICAL PRODUCTS OR MEDICAL DEVICES. THOSE CAN DEVELOP A HEALTH CARE BUSINESS CAN LEAD A TEAM CAN APPLY. PART TIME PERSON CAN ALSO APPLY, HQ MYSORE
SEND CV TO myfamilycustomercare@gmail.com
888-464-5218

S.G.M. ENGLISH MEDIUM SCHOOL
S. HOSAKOTE, Nanjangud Taluk, Mysuru Dist.,
TEACHERS WANTED
Wanted post graduate & Graduate Trained Teachers for the following Subjects.
- Kannada
- Mathematics
- English
- Social Science
- Hindi
- PET (B.P.Ed., or C.P.Ed)
- Science

Salary Commensurate with Experience
More Details Contact: 94499 93502, 63624 44539

ಮನೆ ಮಾರಾಟಕ್ಕಿದೆ
ಜೆ.ಪಿ.ನಗರದ ಜನತಾ ಬಡಾವಣೆಯಲ್ಲಿ 30x40 ಅಳತೆಯ ಕಾರ್ನರ್ ಮನೆ (ಗ್ರೌಂಡ್ ಫ್ಲೋರ್ ಮತ್ತು ಫಸ್ಟ್ ಫ್ಲೋರ್ ಅತೀ ಕಡಿಮೆ ಬೆಲೆಗೆ ಮಾರಾಟಕ್ಕಿದೆ.
9620925277
0821-4260677

ಸೈಟುಗಳು ಬೇಕಾಗಿದೆ
30x40 ಅಳತೆಯ ತಕ್ಷಣ ನೋಂದಣಿಗೆ ಸಿದ್ದವಿರುವ ಸೈಟುಗಳು ಹಳೆ ಕೆಸರೆಗೆ ಹೊಂದಿಕೊಂಡಂತಿರುವ ಲೇಔಟ್‌ಗಳಲ್ಲಿ ಬೇಕಾಗಿದೆ.
6360633036
8088689211

ಅಡುಗೆಯವರು ಬೇಕಾಗಿದ್ದಾರೆ
ಬೆಳಿಗ್ಗೆ ಸಮಯದಲ್ಲಿ ಮನೆಯಲ್ಲಿ ಅಡುಗೆ ಮಾಡಲು ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. 4ನೇ ಹಂತ, ವಿಜಯನಗರ, ಬಸವರಾಜು ಸರ್ಕಲ್ ಹತ್ತಿರ, ಮೈಸೂರು
8310846772
8861953709



ನಿವೇಶನಗಳ ಕ್ರಯ ಮತ್ತು ವಿಕ್ರಯಮಾಡಲು.
ಸಂಪರ್ಕಿಸಿ: 7483656875

ಬೇಕಾಗಿದ್ದಾರೆ
ಕಾಲೇಜ್ ಹಾಸ್ಟೇಲ್‌ನಲ್ಲಿ ಅಡುಗೆ ಮಾಡಲು (ಪುರುಷ) ಅಡುಗೆ ತಯಾರಕರು ಬೇಕಾಗಿದ್ದಾರೆ
ವಿಕ್ರಂ ಕಾಲೇಜ್ ಆಫ್ ನರ್ಸಿಂಗ್ ಗೋಕುಲಂ, ಮೈಸೂರು
8310846772, 9535096161

ನಿವೇಶನಗಳು ಮಾರಟಕ್ಕಿದೆ
B.S.N.L ಲೇಔಟ್ ಸಾತಗಳ್ಳಿ ಲೇಔಟ್ ವಾಣಿವಿಲಾಸ ನಗರ
30x40, 20x30, 40x60
9448447035

FOR SALE (Starts From 10 Lakhs)
1. 20x30, 30x40, 30x50 Near Defence Apartments, HD Kote Road
2. 30x50 Near Varuna Lake
3. 2&3 BHK Flats at Ramkrishna Nagar
4. 30x40 House, Kuvempu Ngr Depo
5. 41x72, 35x45 House Vidyaranyapuram
6. 20x30 House Giridarshini Layout
7. 100x100 Farm House @ KRS Back Water Attach 20L

PRAKRUTHI PROPERTIES
95386 90359, 90359 90359

ಭಾಸ್ಕರ್ ಹಾರ್ಟ್ ಸೆಂಟರ್
ಉಚಿತ ಹೆಲ್ತ್ ಕೇರ್ ತರಬೇತಿ 10ನೇ ತರಗತಿ / ಪಿಯುಸಿ ಪಾಸಾಗಿದ್ದವರಿಗೆ ಉಚಿತ ಹೆಲ್ತ್ ಕೇರ್ ತರಬೇತಿ ನೀಡಲಾಗುತ್ತದೆ. ಕೂಡಲೇ ಸಂಪರ್ಕಿಸಿ:
9880186386

ಶ್ರೀ ಪುಟ್ಟಸ್ವಾಮಿ ಚಿಟ್ ಫಂಡ್ಸ್ ಪ್ರೈವೇಟ್ ಲಿಮಿಟೆಡ್
"ಸರ್ಕಾರದಿಂದ ಮಾನ್ಯತೆ ಪಡೆದಿದೆ"
1 ಲಕ್ಷದಿಂದ 10 ಲಕ್ಷದವರೆಗಿನ ಚೀಟಿಗಳು ಪ್ರಾರಂಭವಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
8747965423

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8861401315

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

Aquaguard & Kent Sales and Service
Service Charge: 300/-
9901200444

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194, 9606783264

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಪುರುಷರು): ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಸೂರ್ಯ ಬೇಕ್ರಿ, ಲಕ್ಷ್ಮಿಕಾಂತ ನಗರ, ಬಸವನ ಗುಡಿ ಸರ್ಕಲ್, ಬೋಗಾದಿ ರಿಂಗ್ ರೋಡ್, ರೂಪ ನಗರ, SBM ಲೇಔಟ್, ಬಸವನಹಳ್ಳಿ, ಹಿನಕಲ್ (ESI) ಕೊಡಲಾಗುವುದು.
ಆಸಕ್ತಿ ಇದ್ದವರು ಸಂಪರ್ಕಿಸಿ:
8310098788

ನಿವೇಶನ ಮಾರಾಟಕ್ಕಿದೆ
30x40ರ ಭೈರವ ಎನ್‌ಕ್ಲೇವ್ ಗಣಿಗರ ಹುಂಡಿ ಗದ್ದಿಗೆ ಮೇನ್ ರೋಡ್, ಬೋಗಾದಿ ರಿಂಗ್ ರೋಡ್, 3 ಕಿ.ಮೀ ಬೆಲೆ 48 ಲಕ್ಷ (ಮಧ್ಯವರ್ತಿಗಳು ಕ್ಷಮಿಸಿ)
OWNER
8660726140

ಹೊಸ ಮನೆ ಮಾರಾಟಕ್ಕಿದೆ
20x30 ಉತ್ತರ ದಿಕ್ಕು ಗುರೂರು 4ನೇ ಹಂತ ಶ್ರೀನಗರ ಹತ್ತಿರ 41 ಲಕ್ಷ
9379056972

SITE FOR SALE
30x40 Corner Site at Rajajinagara, Near Sri M. Vishweshwaraya Layout
8951820020

ಬೋಳು ತಲೆಯ ಸಮಸ್ಯೆಯೇ?


ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗಿದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರಿಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ ಮೈಸೂರು
9916908454

ಮನೆ ಮಾರಾಟಕ್ಕಿದೆ
ಜೆಪಿ ನಗರ ಪಕ್ಕದಲ್ಲಿರುವ ಮಾನಂದವಾಡಿ ಮುಖ್ಯ ರಸ್ತೆಗೆ ತಾಗಿಕೊಂಡಿರುವ ಪ್ರಕೃತಿ ಬಡಾವಣೆಯಲ್ಲಿ ಸುಸಜ್ಜಿತವಾದ 20X30 ಡುಪ್ಲೆಕ್ಸ್ ಹೊಸ ಮನೆ ಮಾರಾಟಕ್ಕಿದೆ. ನೇರ ಮಾಲೀಕರನ್ನು ಸಂಪರ್ಕಿಸಲು ಕರೆ ಮಾಡಿ
7019188932

WANTED
For Medical / Pharma Distributor Male Staff (Office work/Collection & Delivery) Driving cum Office work (4 Wheel) with / without Experience SSLC/PUC, Pass / Fail
9986108208
9739377827

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ನಮ್ಮ ಹೋಟೆಲ್‌ಗೆ ಕೆಲಸಗಾರರು ಬೇಕಾಗಿದ್ದಾರೆ.
1) ಅಡುಗೆ ಭಟ್ಟರು (ಸೌತ್ ಇಂಡಿಯನ್), 2) ದೋಸೆ ಭಟ್ಟರು, 3) ನಾರ್ತ್ ಇಂಡಿಯನ್ ಕುಕ್, 4) ಚಾಟ್ಸ್ ಐಟಂ, 5) ಟೀ ಮೇಕರ್, 6) ಕ್ಯಾಷಿಯರ್, 7) ವೇಟರ್ಸ್, 8) ಕ್ಲೀನಿಂಗ್ (ಟೇಬಲ್) 9) ಪಾತ್ರೆ ತೊಳೆಯುವವರು, 10) ಕೌಂಟರ್, 11) ವಾಶ್ರೂಮ್ ಕ್ಲೀನರ್.
9535568637

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
6364308851, 7892046990

ಹೊಸ ಮನೆ ಮಾರಾಟಕ್ಕಿದೆ
ಸರ್ದಾರ್ ವಲ್ಲಭಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20×40 ಅಡಿ. ಪೂರ್ವ ದಿಕ್ಕು, 3 ಬಿಹೆಚ್‌ಕೆ, ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ
Call: 9380284276

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಬೇಕಾಗಿದ್ದಾರೆ
Telecallers ಗೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
Mob: 7624811608
#411, 'ಬಿ' ಬ್ಲಾಕ್, 13ನೇ ಕ್ರಾಸ್, ಜೆ.ಪಿ. ನಗರ, ಮೈಸೂರು

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ ಮಹಿಳೆಯರು ಬೇಕಾಗಿದ್ದಾರೆ ಇಚ್ಚೆಯುಳ್ಳವರು ಸಂಪರ್ಕಿಸಿ: ಬಾಲಕೃಷ್ಣ ಪ್ರಾವಿಷನ್ ಸ್ಟೋರ್ ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
9739816440

PUC ನಂತರ...?
ಆರ್ಥಿಕವಾಗಿ ಹಿಂದುಳಿದ ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ತರಬೇತಿ, ಕಲಿಕೆ ಮತ್ತು ಶಿಷ್ಯವೇತನ ಉನ್ನತ ವ್ಯಾಸಂಗ ಮಾಡಲು ಅವಕಾಶವಿದೆ.
ಕರೆಮಾಡಿ
9482018500

WANTED
Office Assistant : 1 No. (Female) for a Auditor Office. Qualification: PUC + Computer knowledge is essentials. Preferable to Hebbal surrounding area. Contact:
Mob: 9740285064
Nagaraje Gowda, Hebbal, Mysore-16

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆ ಯೊಂದಕ್ಕೆ ತಕ್ಷಣ ಪುರುಷ & ಮಹಿಳಾ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ. ವಿದ್ಯಾರ್ಹತೆ: ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ: 13,448 + 1000 attendance bonus, ESI & PF ಮತ್ತು ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್‌ಕಾರ್ಡ್ ಕಡ್ಡಾಯ.
8453408502, 9108100117

AFFIDAVIT
I, Syed Suhaba Arif, residing at #3206/10, Mohammed Sait Block, Lashkar Mohalla, Mysore-570 007, state that my correct name is Syed Suhaba Arif, which is mentioned in Aadhaar Card, Voter ID Card etc. but my name is mentioned as Syed Suhaba Ariff in my passport (Passport No. J4643171). Both the name Syed Suhaba Arif and Syed Suhaba Ariff belongs to the one and the same person that is me only. I swear this infront of Notary C.R. Seetham on 20-4-2024.
Sd/- Syed Suhaba Arif

Change of name
I, Tabraiz Ahmed Khan (old name), S/o Abdul Latheef Khan, residing at 31, 4th Main, 2nd Cross, Bannimantap 'C' Layout, Mysuru-570 015, have changed my name from Tabraiz Ahmed Khan to Tabrez Ahmed Khan on my own free will in front of Notary C.R. Seetha Ram vide affidavit. I will be know called and identified as Tabrez Ahmed Khan.
Sd/- Tabrez Ahmed Khan

ಮನೆ ಬಾಡಿಗೆಗೆ / ಭೋಗ್ಯಕ್ಕೆ ಇದೆ
ಶ್ರೀರಾಂಪುರ ಯೂನಿವರ್ಸಿಟಿ ಬಡಾವಣೆ ಎದುರು ಗಾಯತ್ರಿ ಬಡಾವಣೆಯಲ್ಲಿ 1ನೇ ಮಹಡಿ ಹಾಗೂ 2ನೇ ಮಹಡಿ ಮತ್ತು ಅಂಗಡಿ ಮಳಿಗೆ ಬಾಡಿಗೆಗೆ / ಭೋಗ್ಯಕ್ಕೆ ಇದೆ.
9108946647, 9448092818

WANTED
Sales Boys to Work For a Sports Shop In Mysore
Full time : 10 am to 7 pm
7760109047
8105368325

ಉದ್ಯೋಗ ಮೇಳ
ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳಿಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಆಯ್ಕೆಗಾಗಿ. NST ಇಂದ ಶಾಲಾ ಕಾಲೇಜುಗಳ ಉಪಾಧ್ಯಾಯರು, ಉಪನ್ಯಾಸಕರು, ದೈಹಿಕ ಶಿಕ್ಷಕರು, ಕ್ರೀಡಾ ತರಬೇತುದಾರರು, ಕ್ರಾಫ್ಟ್ ಟೀಚರ್ ನೇಮಕಾತಿಗಾಗಿ ಕರೆ ಮಾಡಿ
7259972615 ಮೂರ್ತಿ
7090499000 ಆಕಾಶ

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಮೆಡಿಕಲ್ ಶಾಪ್‌ಗೆ
ಮೆಡಿಕಲ್ ಸ್ಟಾಫ್ ಹುಡುಗರು & ಹುಡುಗಿಯರು
ಹೌಸ್ ಕೀಪಿಂಗ್ ಮಹಿಳೆಯರು
ಅನುಭವ ಇರುವವರಿಗೆ ಆದ್ಯತೆ
99455 78496

Sudarshan Saur SOLAR WATER HEATER


SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬೇಕಾಗಿದ್ದಾರೆ
- ಫ್ಲೆಕ್ಸ್ ಮಷೀನ್ ಆಪರೇಟರ್– 01
- ಹೆಲ್ಪರ್ – 02

ಸಂಬಳ– 15.000/–
ಯಶ್ಮಿತಾ ಬಿಗ್ ಪ್ರಿಂಟ್
ಫೋನ್ : 88841 40303

ಬೇಕಾಗಿದ್ದಾರೆ
ಮೈಸೂರಿನ ಇನ್ಫೋಸಿಸ್‌ಗೆ ಪುರುಷರು ಅಭ್ಯರ್ಥಿಗಳು
ಸೆಕ್ಯೂರಿಟಿ ಗಾರ್ಡ್ಸ್
ಆಕರ್ಷಕ ಸಂಬಳ : 21,000/–
ವಿದ್ಯಾರ್ಹತೆ: 10ನೇ ತರಗತಿ & ಪಿಯುಸಿ ತೇರ್ಗಡೆ
ವಯಸ್ಸು : 22 ರಿಂದ 40 ವರ್ಷ
78296 48007

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು, ಮಹಿಳೆಯರು ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ 9.30 ರಿಂದ ರಾತ್ರಿ 9 ರವರೆಗೆ. ಸಂಬಳ: 9000 ರಿಂದ ಪ್ರಾರಂಭ. ಸ್ಥಳ: ಹೆಬ್ಬಾಳ, ಕೆಜಿ ಕೊಪ್ಪಲು ಮತ್ತು ಅಗ್ರಹಾರ. ಸಂಪರ್ಕಿಸಿ:
9986311444, 9986322444

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ಕಡಕೊಳ ಏರಿಯಾದಲ್ಲಿ TVS ಫ್ಯಾಕ್ಟರಿಯಲ್ಲಿ & ನಂಜನಗೂಡು ಏರಿಯಾದಲ್ಲಿ ತಾಂಡವಪುರ ಮತ್ತು ಮೈಸೂರಿನ ಬಲ್ಲಾಳು RTO ಏರಿಯಾದ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ಸಂಬಳ: 16500/-
ವಯೋಮಿತಿ 50 ವರ್ಷದ ಒಳಗೆ
ವಿದ್ಯಾರ್ಹತೆ: SSLC ಮೇಲ್ಪಟ್ಟು
ESI, PF & ಊಟ, ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819, 9620667819

Teaching & Non Teaching Staff UDYOG MELA
Request all private Education Institues to Participate to Select the required right candidates for your Nursery, School, College.
7090499000
7259972615

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿದುರರು

FREE REGISTRATION
8904890413

SITES FOR SALE
Near to INFOSYS, L&T and BEML Available: 30x30, 30x40, 30x50 & 40x60. 60 Feet Road Approach MUDA APPROVED, MUDA KHATHA Srirangapattana Registration. 90% Work Completed. Now Bookings Open. More details call me
9916766389, 6363400519

HOUSE SALE Vijaynagar
4 Floors Rent Earning House 1 Year Old, 30x40, MUDA
Price - 1.90 Cr,
Within Ring Road, Vijayanagar 4th Stage 1st Phase (Brokers Don't Call)
8660105902

SITES for SALE JP Nagar Ring Road
20 x 30 - 17 Lakhs,
30 x 40 - 33 Lakhs,
Near Gurur Bus Stop, Ramabainagar, Mysore.
DTCP approved (Corporation limits)
1.5 Kms from JP Nagar Ring Road
8660105902

SAI NALANDA CENTRAL SCHOOL K R NAGAR,
1. B.A. B.Sc./M.A. MSc. With B.Ed. (Social Science, English, Mathematics & Hindi)
2. BCA, MCA, NTT.
3. HOUSE KEEPING.

*GOOD ENGLISH FLUENCY PREFERRED
*FREE ACCOMMODATION
*SALARY UPTO 15000/-
8722073456, 8722093456
nalandakrn@gmail.com, | Web: www.sainalanda.com

ಸೈಟ್ ಮಾರಾಟಕ್ಕಿದೆ
30x40ರ ಪೂರ್ವ ಮತ್ತು ಉತ್ತರ ದಿಕ್ಕು, ವಿದ್ಯಾವಿಕಾಸ್ ಕಾಲೇಜು ಹಿಂಭಾಗ ವಸಂತನಗರದ 60 ಅಡಿ ರಸ್ತೆಗೆ ಹೊಂದಿಕೊಂಡತ್ತಿರುವ ನಿವೇಶನಗಳು ಮಾರಾಟಕ್ಕಿದೆ.
ಸಂಪರ್ಕಿಸಿ:
9686895205
9739703467

40x60 Dattagalli
South Facing, MUDA Site for Sale
Price - 6900/sqft
Near Rotary School
8660105902

neem BOND PLATINUM PLYWOOD DOORS
10 YEARS WARRANTY
@ FACTORY DEPOT RATES
9731591267, 9901291267

ಬೇಕಾಗಿದ್ದಾರೆ
ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : ಪಿಯುಸಿ (ಪಾಸ್/ಫೇಲ್)
ಹೈಟೆಕ್ ಸೋಲಾರ್ ಫೆನ್ಸ್
Hi Tech Solar Fence
145, ರಾಮವಿಲಾಸ ರೋಡ್, ಮೈಸೂರು
9448247741
9448186377

ಅನುಬಂಧ ಮ್ಯಾರೇಜಸ್
ವಧು ವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆಮಾಡಿ
6361740552

ನೇರ ನೇಮಕಾತಿ
Sri Saptagiri Building & Devolepers Company
Direct Appointment
Marketing Executive - 3 Post
Telecalling - 2 Post
Driver - 1 Post
Qualification - SSLC, PUC, Any Degree
8861350541
9606977963

URGENTLY REQUIRED
For a leading Hotel in Mysore Receptionists, Room Boys, Waiters & Cashier
9900140598

ಬೇಕಾಗಿದ್ದಾರೆ
ಕೈಗಾರಿಕಾ ಪ್ರದೇಶ, ಯಾದವಗಿರಿ, ಮೈಸೂರು
ಮಹಿಳೆಯರು : 10,000.
ಹುಡುಗರು : 15,000.
ಕೆಲಸದ ಸಮಯ: 9 ರಿಂದ 6.30
9448664411

ಪಾರ್ಟ್‌ಟೈಮ್ ಕೆಲಸ
ರೆಡಿಮೆಡ್ ಅಂಗಡಿ ಹೆಲ್ಪರ್ 30 ವರ್ಷ ಒಳಗೆ ಲೇಡಿಸ್ ಮತ್ರ
3 pm to 8 pm 1 Post
4 pm to 8.30 pm 1 post
ಅನುಭವ ಬೇಕಿಲ್ಲ ಅಗ್ರಹಾರ 101 ಗಣಪತಿ ದೇವಸ್ಥಾನ ಹಿಂಭಾಗ, ಬಸವೇಶ್ವರ ರಸ್ತೆ, 5ನೇ ಕ್ರಾಸ್, ಮೈಸೂರು
9591327746

ಮನೆ ಬಾಡಿಗೆಗೆ ಇದೆ
ಸಸ್ಯಹಾರಿಗಳಿಗೆ ಮಾತ್ರ ಡೂಪ್ಲೆಕ್ಸ್ 4 BHK ರಾಮಕೃಷ್ಣ ನಗರ, E&F Block
9945442739

WANTED
Experienced Tailors, Job location Vidyaranyapuram, salary 17k.
7829044195

Team Leaders ಬೇಕಾಗಿದ್ದಾರೆ ಕಂಪ್ಯೂಟರ್ ಜ್ಞಾನವುಳ್ಳವರು
ಸಂಬಳ: 12000/– ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ: (10000) Field work ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಬಳ (12000) (ಕನ್ನಡ ಮಾತನಾಡಬಲ್ಲವರು) ಸಂಬಳ (10000)
8150005111

ಬೇಕಾಗಿದ್ದಾರೆ
ಮದ್ದೂರು ಚೆನ್ನಪಟ್ಟಣದ ರಸ್ತೆಯ ಬಿಳಿಕೆರೆ ಗೇಟ್ ಹತ್ತಿರ ಇರುವ ಹೋಟೆಲ್ ಒಂದರಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. 13000 ಸಾವಿರ ಸಂಬಳ ದೊಂದಿಗೆ PF, ESI ಊಟ ವಸತಿ ಸೌಲಭ್ಯವಿರುತ್ತದೆ. ಮಾಹಿತಿಗಾಗಿ ಸಂಪರ್ಕಿಸಿ:
9035050653
9743162761

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ (Hand Pressing Work) Address: 788, 2nd Main 16th Cross, B.M.Shri Nagara Metagalli, Lakshmi
9945161738

ಮೈಸೂರಿನ ಸುತ್ತಮುತ್ತ
ಬಾಡಿಗೆ ಮನೆ ಬೇಕಾಗಿದ್ದಲ್ಲಿ, ಜಾಗ ಬೇಕಾಗಿದ್ದಲ್ಲಿ, ಸೈಟ್ ಮಾರಾಟ ಮಾಡುವುದಿದ್ದರೆ ಸಂಪರ್ಕಿಸಿ
8197534032
8088963615

ತಕ್ಷಣ ಬೇಕಾಗಿದ್ದಾರೆ
Age (18-24) 10th, PUC, ಮೇಲ್ಪಟ್ಟಿರುವ Traineeಗಳಾಗಿ (8500/- 16500/-) Pm Earn ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ ಪರಸ್ಥಳದವರಿಗೆ ಮಾತ್ರ ವಸತಿ ಖುದ್ದಾಗಿ ಸಂಪರ್ಕಿಸಿ ವಿವರಗಳೊಂದಿಗೆ Time (11 AM to 3PM)
ಕಾವ್ಯ: 9342827788

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ ಮತ್ತು ಹೂಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟ ಸಂಬಳ: 18500/- W/o 8 hrs
9880727819
9620667819

ಬೇಕಾಗಿದ್ದಾರೆ
ಆಲೈನ್‌ಮೆಂಟ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆಯಿಲ್ಲ ದೇವೇಗೌಡ ಸರ್ಕಲ್, ಮೈಸೂರು. ಸಂಬಳ: ಟ್ರೈನಿಂಗ್ ಸಮಯದಲ್ಲಿ 10000/–
7019647578

SITE/HOUSE FOR SALE
50x80 N/F 15 Sq Building MUDA Site Vijayanagar 4th Stage, 2nd Phase.
30x40, 40x60 Site
Vijayanagar R K Nagar R T Nagar
WANTED MUDA SITES PURCHASE
BROKERS EXCUSE
9448938989
7892035789

ಮೈಸೂರು ಮಿತ್ರ 45 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಒಂದನೇ ಪುಟದಿಂದ

ಚುನಾವಣಾ ಆಯೋಗ ಕಟ್ಟೆಚ್ಚರ

ಮತದಾನದ ಅನುಕೂಲಕ್ಕಾಗಿ 1,40,000 ಸಿಬ್ಬಂದಿ ನೇಮಿಸಲಾಗಿದೆ. ಬಿಗಿ ಬಂದೋಬಸ್ತ್‌ಗಾಗಿ 65 ಅರೆಸೇನಾ ಕಂಪನಿ ಜೊತೆಗೆ ನೆರೆ ರಾಜ್ಯ ಹಾಗೂ ರಾಜ್ಯದ 50,000 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತಿದೆ ಎಂದರು. ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ಕಣ್ಗಾವಲು ವ್ಯವಸ್ಥೆ ಮಾಡಲಾಗಿದೆ.

ಇಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳನ್ನು ಜಿಲ್ಲಾ ಚುನಾವಣಾಧಿಕಾರಿ ಹಾಗೂ ರಾಜ್ಯ ಮುಖ್ಯಚುನಾವಣಾಧಿಕಾರಿ ಕಚೇರಿ ಅಧಿಕಾರಿಗಳು ವೀಕ್ಷಣೆ ಮಾಡಬಹುದಾಗಿದೆ.

ಎಲ್ಲಾ ಮತಗಟ್ಟೆಗಳಲ್ಲಿ ಕಣ್ಗಾವಲಿನ ವ್ಯವಸ್ಥೆ ಇದ್ದರೂ 14 ಕ್ಷೇತ್ರ ವ್ಯಾಪ್ತಿಯ 19,701 ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ, ಅಂದರೆ ಮೂರನೇ ಎರಡು ಭಾಗದಲ್ಲಿ ಈ ವ್ಯವಸ್ಥೆ ಇದೆ.

ಬಹಿರಂಗ ಪ್ರಚಾರ ಅಂತ್ಯಗೊಂಡಿದ್ದು, ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಸಾರ್ವಜನಿಕ ಭಾಷಣ ಮತ್ತು ರ‍್ಯಾಲಿಗಳನ್ನು ನಡೆಸುವಂತಿಲ್ಲ, ಆದರೆ, ಐದು ಜನಕ್ಕೆ ಮೀರದಂತೆ ಮನೆ ಮನೆಗೆ ತೆರಳಿ ಮತ ಯಾಚನೆ ಮಾಡಬಹುದಾಗಿದೆ.

ಮತದಾರರಲ್ಲದ ರಾಜಕೀಯ ಮುಖಂಡರು ಮತ್ತು ಕಾರ್ಯಕರ್ತರು ಕ್ಷೇತ್ರ ತೆರವುಗೊಳಿಸಬೇಕು, ಈ ನಿಯಮ ಸಾರ್ವಜನಿಕರಿಗೆ ಮತ್ತು ಪ್ರವಾಸಿಗರಿಗೆ ಅನ್ವಯವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರು-ಕೊಡಗು, ಚಾಮರಾಜನಗರ, ಹಾಸನ, ಮಂಡ್ಯ, ಉಡುಪಿ-ಚಿಕ್ಕಮಗಳೂರು, ದಕ್ಷಿಣ ಕನ್ನಡ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ ಹಾಗೂ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2,88, 19,342 ಮತದಾರರಿದ್ದು ಇವರ ಅನುಕೂಲಕ್ಕಾಗಿ ಒಟ್ಟು 30,602 ಮತಗಟ್ಟೆಗಳನ್ನು ನಿರ್ಮಿಸಲಾಗಿದೆ ಎಂದರು.

ಮತ ಚಲಾಯಿಸುವ ಮೊದಲು ಮತದಾನ ಕೇಂದ್ರಗಳಲ್ಲಿ ಅವರ ಗುರುತಿಗಾಗಿ ನೀಡಿರುವ ಮತದಾರರ ಗುರುತಿನ ಚೀಟಿ ಇಲ್ಲವೇ ಆಧಾರ್ ಕಾರ್ಡ್, ಮನ್ರೇಗಾ ಜಾಬ್ ಕಾರ್ಡ್, ವಾಹನ ಚಾಲನಾ ಪರವಾನಗಿ ಸೇರಿದಂತೆ ಅಧಿಕೃತ ಗುರುತಿನ ಚೀಟಿ ತೋರಿಸಿ ಮತದಾನ ಮಾಡಬಹುದಾಗಿದೆ.

ಮತದಾನ ದಿನದಂದು ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಿ ರಜೆ ಘೋಷಣೆ ಮಾಡಲಾಗಿದೆ, ಶಾಲಾ-ಕಾಲೇಜುಗಳಿಗೂ ರಜೆ ಘೋಷಣೆಯಾಗಿದೆ, ಖಾಸಗಿ ಸಂಸ್ಥೆಗಳು ತಮ್ಮ ನೌಕರರಿಗೆ ವೇತನ ಸಹಿತ ರಜೆ ನೀಡಬೇಕು, ತಪ್ಪಿದಲ್ಲಿ ಕಠಿಣ ಕ್ರಮ ಎದುರಿಸಬೇಕಾಗುತ್ತದೆ. ಮತದಾನ ದಿನದಂದು ಮತಗಟ್ಟೆಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಚುನಾವಣಾ ಪ್ರಚಾರ ಕೈಗೊಳ್ಳುವುದನ್ನು ನಿರ್ಬಂಧಿಸಲಾಗಿದೆ.

ಅರೆಸೇನಾ ಪಡೆಯ ಕಣ್ಗಾವಲು

ಎಚ್ಚರಿಸಲು ಮತ್ತು ಮತದಾರರಲ್ಲಿ ಧೈರ್ಯ ತುಂಬಲು ಅರೆಸೇನಾ ಪಡೆ ಕ್ಷೇತ್ರದಲ್ಲಿ ಪಥ ಸಂಚಲನ ನಡೆಸಲಿದೆ.

ಕರ್ನಾಟಕ ಮತ್ತು ತಮಿಳುನಾಡಿನ ಗಡಿಗೆ ಈ ಕ್ಷೇತ್ರ ಹೊಂದಿಕೊಂಡಿದ್ದು, ಗಡಿಭಾಗದ ಮತಗಟ್ಟೆಗಳಲ್ಲಿ ಅಕ್ರಮ ಮತದಾನ ನಡೆಯುವದಿದೆ ಎಂಬ ದೂರು ಬಂದಿರುವ ಹಿನ್ನೆಲೆಯಲ್ಲಿ ಆಯೋಗ ಕೆಲವು ಕಠಿಣ ಕ್ರಮಕೈಗೊಂಡಿದೆ.

ಬೆಂಗಳೂರು ಗ್ರಾಮಾಂತರ ಕ್ಷೇತ್ರ ವ್ಯಾಪ್ತಿಯಲ್ಲಿ 2,829 ಮತಗಟ್ಟೆಗಳಿದ್ದು, ಈ ಎಲ್ಲಾ ಮತಗಟ್ಟೆಗಳ ಚಲನ ವಲನವನ್ನು ಜಿಲ್ಲಾ ಚುನಾವಣಾಧಿಕಾರಿ ಹಾಗೂ ರಾಜ್ಯ ಮುಖ್ಯಚುನಾವಣಾಧಿಕಾರಿಗಳು ವೀಕ್ಷಿಸುವಂತಹ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ.

ನಕಲಿ ಮತದಾನಕ್ಕೆ ಯತ್ನ ಹಾಗೂ ಕೆಲವು ರಾಜಕೀಯ ಮುಖಂಡರು ದೌರ್ಜನ್ಯ ಮತ್ತು ಆಮಿಷಗಳನ್ನು ಒಡ್ಡುತ್ತಾರೆಂಬ ಹಿನ್ನೆಲೆಯಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ರಾಜ್ಯ ಮುಖ್ಯಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ, ಶುಕ್ರವಾರ ನಡೆಯುತ್ತಿರುವ ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ಬಿಗಿಬಂದೋಬಸ್ತ್ ಹಾಗೂ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು. ಜಿಲ್ಲಾ ಚುನಾವಣಾಧಿಕಾರಿ ಹಾಗೂ ನಮ್ಮ ವಿಶೇಷ ವೀಕ್ಷಕರು ನೀಡಿರುವ ವರದಿ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಅತೀ ಹೆಚ್ಚು ಬಿಗಿ ಬಂದೋಬಸ್ತ್ ಮಾಡಲಾಗಿದ್ದು, ಉಳಿದ ಕ್ಷೇತ್ರಗಳಿಗಿಂತ ಹೆಚ್ಚಿನದಾಗಿರುತ್ತದೆ ಎಂದು ಮಾಹಿತಿ ನೀಡಿದರು.

ಕ್ಷೇತ್ರದಲ್ಲಿ ವಿಶೇಷ ವೀಕ್ಷಕರ ಜೊತೆಗೆ ಮತಗಟ್ಟೆಯಲ್ಲಿ ನಡೆಯುವ ಎಲ್ಲಾ ಚಲನ ವಲನಗಳನ್ನು ನೋಡುವ ವ್ಯವಸ್ಥೆ ಕಲ್ಪಿಸಲಾಗಿದೆ. ರಾಜಕೀಯ ಪಕ್ಷ ನೀಡಿರುವ ದೂರಿನ ಆಧಾರದ ಮೇಲೆ ಈ ಕ್ರಮಗಳನ್ನು ಕೈಗೊಂಡಿಲ್ಲ, ಅಧಿಕಾರಿಗಳು ನೀಡಿರುವ ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗಿದೆ ಎಂದರು. ಕಾಂಗ್ರೆಸ್ ವಕ್ತಾರರೊಬ್ಬರು ಈ ಕ್ಷೇತ್ರವನ್ನು ತನ್ನ ತೆಕ್ಕೆಗೆ ಪಡೆಯಲು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ, ಎನ್‌ಡಿಎ ಮೈತ್ರಿಕೂಟದ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಸಲಹೆ ನೀಡಿ ಡಾ.ಮಂಜುನಾಥ್ ಅವರನ್ನು ಬಿಜೆಪಿ ವರಿಷ್ಠರೇ ಸುರೇಶ್ ವಿರುದ್ಧ ಚುನಾವಣಾ ಸಂಘರ್ಷಕ್ಕೆ ಇಳಿಸಿದ್ದಾರೆ.

ಚುನಾವಣಾ ಪ್ರಕ್ರಿಯೆ ಆರಂಭಗೊಳ್ಳುವ ಮುನ್ನವೇ ಕಾಂಗ್ರೆಸ್ ಅಭ್ಯರ್ಥಿ ಮತದಾರರ ಓಲೈಕೆಗೆ ಭಾರೀ ಆಮಿಷಗಳನ್ನು ಮತ್ತು ಗಿಫ್ಟ್ ಕೂಪನ್‌ಗಳನ್ನು ವಿತರಿಸುತ್ತಿದ್ದಾರೆ. ಅಲ್ಲದೇ ಪ್ರತಿಪಕ್ಷಗಳ ಕಾರ್ಯಕರ್ತರ ಮೇಲೆ ಮಾನಸಿಕ ಮತ್ತು ದೈಹಿಕ ಹಲ್ಲೆಗಳು ನಡೆಯುತ್ತಿವೆ. ಸ್ಥಳೀಯ ಜಿಲ್ಲಾಡಳಿತ ಅವರ ಜೊತೆ ಕೈಜೋಡಿಸಿದೆ ಎಂದು ದೇವೇಗೌಡರು ಮತ್ತು ಕುಮಾರಸ್ವಾಮಿ ಕೇಂದ್ರ ಮುಖ್ಯ ಚುನಾವಣಾ ಆಯುಕ್ತರಿಗೆ ದೂರು ನೀಡಿದ್ದರು. ದೂರನ್ನು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ರವಾನೆ ಮಾಡಿ ಮುನ್ನಚ್ಚರಿಕೆ ಕೈಗೊಳ್ಳುವಂತೆ ಸೂಚಿಸಿದ್ದಲ್ಲದೆ ಕೇಂದ್ರದಿಂದಲೇ ವೀಕ್ಷಕರನ್ನು ಕಳುಹಿಸಿದ್ದರು.

ನಾಳೆ ಸಾರ್ವತ್ರಿಕ ರಜೆ

ರಜೆಯನ್ನು ಘೋಷಣೆ ಮಾಡಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಮತದಾನ ದಿನ ಎಲ್ಲರಿಗೂ ವೇತನ ಪಾವತಿ ಸಹಿತ ರಜೆ ಘೋಷಣೆ ಮಾಡಲಾಗಿದೆ.

ಆದೇಶದಲ್ಲೇನಿದೆ?: ಸದರಿ ದಿನಾಂಕದಂದು ಮತದಾನ ನಡೆಯಲಿರುವ ಕ್ಷೇತ್ರದ ವ್ಯಾಪ್ತಿಯಲ್ಲಿ ನೋಂದಾಯಿತರಾದ ಅರ್ಹ ಮತದಾರರಾಗಿರುವ ಎಲ್ಲ ಕಾರ್ಮಿಕರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಸಂಬಂಧಪಟ್ಟ ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು, ಕಾರ್ಖಾನೆಗಳು ಮತ್ತು ಇತರೆ ಸಂಸ್ಥೆಗಳು 1963ರ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳ (ರಾಷ್ಟ್ರೀಯ ಹಾಗೂ ಹಬ್ಬದ ರಜಾ ದಿನಗಳು) ಕಾಯ್ದೆಯ ಕಲಂ 3-ಎ ಪ್ರಕಾರ ಮತ ಚಲಾಯಿಸಲು ಅವ ಕಾಶ ಮಾಡಿ ಕೊಡಬೇಕಾಗುತ್ತದೆ. ಆದ್ದರಿಂದ, ಮತದಾನ ನಡೆಯಲಿರುವ ಕ್ಷೇತ್ರ ದಲ್ಲಿ ಅರ್ಹರಿರುವ ಎಲ್ಲ ಕಾರ್ಮಿಕ ಮತದಾರರಿಗೆ ಏಪ್ರಿಲ್ 26ರಂದು ವೇತನ ಸಹಿತ ರಜೆ ನೀಡಿ, ಎಲ್ಲ ಅರ್ಹ ಕಾರ್ಮಿಕರು ಸಂವಿಧಾನಾತ್ಮಕ/ಶಾಸನಾತ್ಮಕ ಹಕ್ಕಾದ ಮತವನ್ನು ಚಲಾಯಿಸಲು ಅನುವು ಮಾಡಿಕೊಡಲು ಸೂಚಿಸಲಾಗಿದೆ.

ಅಭ್ಯರ್ಥಿಗಳ ಅಂತಿಮ ಕಸರತ್ತು

ಬೆಂಬಲ ನೀಡುವಂತೆ ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ ಮೈಸೂರಿನ ಅಶೋಕಪುರಂ, ತಿಲಕ್ ನಗರ, ಗಾಂಧಿನಗರ, ಎನ್.ಆರ್. ಮೊಹಲ್ಲಾ, ಕುರುಬಾರಹಳ್ಳಿ ಹಾಗೂ ಇತರೆಡೆ ರೋಡ್ ಶೋ ಮಾಡುವ ಮೂಲಕ ಭರ್ಜರಿ ಪ್ರಚಾರ ನಡೆಸಿದರು. ಶಾಸಕರಾದ ತನ್ವೀರ್ ಸೇಠ್, ಕೆ. ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಆಮ್ ಆದ್ಮಿ ಪಾರ್ಟಿಯ ಮುಖ್ಯಮಂತ್ರಿ ಚಂದ್ರು ಹಾಗೂ ಇತರರು ಸಾಥ್ ನೀಡಿದರು.

ಸಂಜೆ 6 ಗಂಟೆಗೆ ಕರ್ನಾಟಕದಲ್ಲಿ ಮೊದಲ ಹಂತದ ಚುನಾವಣೆಗೆ ಬಹಿರಂಗ ಚುನಾವಣಾ ಪ್ರಚಾರ ಅಂತ್ಯಗೊಂಡಿದ್ದು, ರೋಡ್ ಶೋ ಕೈಗೊಂಡಿದ್ದ ಅಭ್ಯರ್ಥಿಗಳು, ಮಾರ್ಗ ಮಧ್ಯೆ ಪ್ರಚಾರ ಅಂತ್ಯಗೊಳಿಸಿ, ನಂತರ ಮನೆ ಮನೆಗೆ ತೆರಳಿ ಮತ ಯಾಚನೆ ಮಾಡಲಾರಂಭಿಸಿದ್ದಾರೆ.

ಪೊಲೀಸರು, ಚುನಾವಣಾ ವೀಕ್ಷಕರು, ಫ್ಲೈಯಿಂಗ್ ಸ್ಕ್ವಾಡ್, ಸ್ಟ್ಯಾಟಿಕ್ ಸರ್ವಲೆನ್ಸ್ ಟೀಂ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಸಂಜೆ 6 ಗಂಟೆಗೆ ಬಹಿರಂಗ ಪ್ರಚಾರ ಅಂತ್ಯಗೊಳಿಸಿದರು. ಆಯಾ ಪಕ್ಷಗಳ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಬಹಿರಂಗ ಪ್ರಚಾರ ಅಂತ್ಯಗೊಂಡ ನಂತರ ಐದೈದು ಮಂದಿ ಮನೆ ಮನೆಗೆ ತೆರಳಿ ತಮ್ಮ ಅಭ್ಯರ್ಥಿಗಳ ಪರ ಪ್ರಚಾರ ನಡೆಸುತ್ತಿದ್ದಾರೆ.

ಕಾಂಗ್ರೆಸ್‌ನಲ್ಲಿ ಒಕ್ಕಲಿಗರು ಮುಖ್ಯಮಂತ್ರಿಯಾಗ್ತಾರೆ!

ಅವರು ಒಕ್ಕಲಿಗ ಸಮುದಾಯಕ್ಕೆ ಶೇ. 11 ಮೀಸಲಾತಿ ನೀಡಿದರು. ಕಾಲೇಜು ಕಟ್ಟಲು ಕಾಂಗ್ರೆಸ್ ಸರ್ಕಾರ ಬನಶಂಕರಿಯಲ್ಲಿ 9 ಎಕರೆ ಭೂಮಿ ನೀಡಿದೆ. ಈಗ ಡಿಕೆಶಿಯವರು ಒಕ್ಕಲಿಗ ಸಂಘದ ಮೆಡಿಕಲ್ ಕಾಲೇಜಿಗೆ ಕೋಟ್ಯಂತರ ಬಡ್ಡಿ ಹಣ ಮನ್ನಾ ಮಾಡಲು ಮುಂದಾಗಿದ್ದಾರೆ ಎಂದು ಹೇಳುವ ಮೂಲಕ ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿದ್ದಾರೆ.

ಒಕ್ಕಲಿಗ ಸಮಾಜದ ಮತ್ತೊಂದು ಪೀಠವನ್ನು ಜೆಡಿಎಸ್ ಸ್ಥಾಪಿಸಿತು. ರಾಜಕೀಯವಾಗಿ ಎಚ್.ಎನ್. ನಂಜೇಗೌಡ. ಬೈರೇಗೌಡ, ನಾಗೇಗೌಡ, ಬಚ್ಚೇಗೌಡ. ನಟ ಅಂಬರೀಶ್ ಅವರನ್ನು ಪಕ್ಷದಿಂದ ಹೊರ ಹಾಕಿದ್ದ ಜೆಡಿಎಸ್. ಬಿಜೆಪಿ ಪಕ್ಷದಿಂದ ಕೂಡ ಒಕ್ಕಲಿಗ ಸಂಘಕ್ಕೆ ಯಾವುದೇ ಕೊಡುಗೆ ಇಲ್ಲ. ಸದಾನಂದ ಗೌಡರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದರು. ಜಗದೀಶ್ ಶೆಟ್ಟರ್ ಸಿಎಂ ಆಗಿದ್ದಾಗ ಶ್ರೀಗಂಧದ ಕಾವಲು ಒಕ್ಕಲಿಗ ಸಂಘದ ಜಾಗವನ್ನು ಬೇರೆಯವರಿಗೆ ಮಂಜೂರು ಮಾಡಿದರು ಎಂದು ಅಸಮಾಧಾನ ಹೊರಹಾಕಿದರು.

ಪ್ರೊ.ಕೃಷ್ಣೇಗೌಡ ಮಾತನಾಡಿ, ಡಿ.ಕೆ. ಶಿವಕುಮಾರ್ ಅವರನ್ನು ನಾವು ಮುಖ್ಯಮಂತ್ರಿ ಮಾಡಿಯೇ ಮಾಡುತ್ತೇವೆ ಎಂದು ಹೇಳಿದ ಅವರು, ಈಗ ನಮ್ಮ ಜನಾಂಗ ನೋವು ಅನುಭವಿಸುತ್ತಿದೆ. ಮುಂದೆಯೂ ಈ ನೋವು ಅನುಭವಿಸುವುದು ಬೇಡ. ಆಗಾಗಿ ನಮ್ಮ ಜನಾಂಗದವರಿಗೆ ಕಣ್ಣು ತೆರೆಸಬೇಕು ಎಂದು ಸುದ್ದಿಗೋಷ್ಠಿ ಮಾಡಿದ್ದೇವೆ. ಅಪ್ಪ, ಮಕ್ಕಳಿಗೆ ಸಪೋರ್ಟ್ ಮಾಡಿ ನಮ್ಮ ಜನಾಂಗ ಮೋಸ ಹೋಗಿದೆ ಎಂದು ಕಣ್ಣೀರು ಹಾಕುತ್ತಿದ್ದೇವೆ. ಅವರ ಮೊಮ್ಮಗ ಬಿಟ್ಟರೆ ಬೇರೆ ಯಾರು ಅಭ್ಯರ್ಥಿ ಇಲ್ಲವಾ? ನಾನು ಕೂಡ ಪ್ರೊಫೆಸರ್. ಅವರು ಮೂರೂ ಕಡೆ ಸೋಲುತ್ತಾರೆ ಎಂದು ದೇವೇಗೌಡ ಕುಟುಂಬದ ವಿರುದ್ಧ ಕಿಡಿಕಾರಿದರು.

ಬಹಿರಂಗ ಪ್ರಚಾರ ಅಂತ್ಯದೊಂದಿಗೆ ರಿಲ್ಯಾಕ್ಸ್ ಮೂಡ್‌ಗೆ ಹೊರಳಿದ ಯದುವೀರ್

ನೆಮ್ಮದಿಯಿಂದ ಮೈಲಾರಿ ಹೋಟೆಲ್‌ನಲ್ಲಿ ಬಿಸಿ ಬಿಸಿ ದೋಸೆ ಸೇವನೆ



ಮೈಸೂರಿನ ನಜರ್‌ಬಾದ್‌ನಲ್ಲಿರುವ ಮೈಲಾರಿ ಹೋಟೆಲ್‌ನಲ್ಲಿ ಬುಧವಾರ ಬಿಜೆಪಿ ಮುಖಂಡರೊಂದಿಗೆ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಮಸಾಲೆ ದೋಸೆ ಸವಿದರು.

ಮೈಸೂರು, ಏ.24(ಎಂಕೆ)- ಲೋಕಸಭಾ ಚುನಾವಣಾ ಬಹಿರಂಗ ಪ್ರಚಾರಕ್ಕೆ ಬುಧವಾರ ಸಂಜೆ ತೆರೆಬೀಳುತ್ತಿದ್ದಂತೆಯೇ ಸ್ವಲ್ಪ ರಿಲ್ಯಾಕ್ಸ್ ಆದ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ನಜರ್ ಬಾದ್‌ನಲ್ಲಿರುವ ಮೈಲಾರಿ ಹೋಟೆಲ್‌ನಲ್ಲಿ ಬಿಜೆಪಿ ಮುಖಂಡರೊಂದಿಗೆ ಮಸಾಲೆ ದೋಸೆ ಸವಿದರು.

ಮಾಜಿ ಮೇಯರ್ ಸಂದೇಶ್‌ಸ್ವಾಮಿ, ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ಎನ್.ಆರ್. ಕ್ಷೇತ್ರದ ಅಧ್ಯಕ್ಷ ಸ್ಮಾರ್ಟ್ ಮಂಜು, ಮುಖಂಡ ವಸಂತ ಕುಮಾರ್ ಇನ್ನಿತರ ಮುಖಂಡರೊಂದಿಗೆ ಸಂಜೆ ವೇಳೆ ಹೋಟೆಲ್‌ಗೆ ಭೇಟಿ ನೀಡಿದ ಯದುವೀರ್, ಸಾಮಾನ್ಯರಂತೆ ಮೈಲಾರಿ ಹೋಟೆಲ್‌ನಲ್ಲಿ ಮಸಾಲೆ ದೋಸೆ ಸವಿದರು. ಯದುವೀರ್ ಅವರು ಬಹಿರಂಗ ಪ್ರಚಾರ ಮುಗಿಸಿ ಹೋಟೆಲ್‌ಗೆ ಬಂದಿದ್ದಾರೆ ಎಂಬ ವಿಷಯ ತಿಳಿಯುತ್ತಿದ್ದಂತೆಯೇ ಹಲವಾರು ಸಾರ್ವಜನಿಕರು ಆಗಮಿಸಿ ಯದುವೀರ್ ಅವರಿಗೆ ಶುಭ ಕೋರಿದ್ದಲ್ಲದೆ, ಚುನಾವಣೆಯಲ್ಲಿ ತಾವು ಬೆಂಬಲಿಸುವ ಜೊತೆಗೆ ಇತರರಿಂದಲೂ ಮತ ಹಾಕಿಸುವುದಾಗಿ ಹೇಳುತ್ತಿದ್ದ ದೃಶ್ಯ ಕಂಡುಬಂತು.

ಈ ಸಂದರ್ಭದಲ್ಲಿ ಯದುವೀರ್ ಸಾರ್ವಜನಿಕರೊಂದಿಗೆ ಮೈಸೂರಿನ ಕೆಲವು ಸಮಸ್ಯೆಗಳ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸುವುದರ ಜೊತೆಗೆ ಅದರ ಪರಿಹಾರಕ್ಕೆ ಏನು ಮಾಡಬಹುದು ಎಂಬುದರ ಬಗ್ಗೆಯೂ ಕೇಳಿ ತಿಳಿದುಕೊಂಡರು. ತಮ್ಮ ಹಿರಿಯರಂತೆ ತಾವು ಕೂಡ ಜನರ ಸೇವೆ ಮಾಡುವ ತುಡಿತದಲ್ಲಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೈಸೂರು ಮತ್ತು ಕೊಡಗು ಜಿಲ್ಲೆಗಳನ್ನು ಪಾರಂಪರಿಕತೆಗೆ ಯಾವುದೇ ಧಕ್ಕೆಯಾಗದಂತೆ ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ತಮ್ಮದೇ ಆದ ಯೋಜನೆ ರೂಪಿಸಿಕೊಂಡಿರುವುದಾಗಿ ತಿಳಿಸಿದರು. ಅದೇ ವೇಳೆ ಹಲವರು ಉತ್ಸಾಹದಿಂದ ಯದುವೀರ್ ಅವರ ಜೊತೆಗೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂತಸಪಟ್ಟರು.

ಅಬ್ಬರದ ಪ್ರಚಾರ: ಬಹಿರಂಗ ಪ್ರಚಾರದ ಕಡೇ ದಿನವಾದ ಬುಧವಾರ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಕೊಡಗು ಜಿಲ್ಲೆಯ ವಿರಾಜಪೇಟೆ ಮತ್ತು ಮಡಿಕೇರಿಯಲ್ಲಿ ಭರ್ಜರಿ ರೋಡ್ ಶೋ ನಡೆಸಿ ಮತಯಾಚಿಸಿದರು. ಅವರು ತೆರಳಿದ ಮಾರ್ಗದುದ್ದಕ್ಕೂ ಸಾರ್ವಜನಿಕರು ಅದ್ಧೂರಿ ಸ್ವಾಗತ ನೀಡಿದರು. ಬಳಿಕ ಮಧ್ಯಾಹ್ನ 3.30ರಿಂದ 6 ಗಂಟೆಯವರೆಗೆ ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ನಾಯ್ಡುನಗರ, ಕೆಸರೆ, ಎನ್.ಆರ್.ಮೊಹಲ್ಲಾ, ರಾಜೀವ್‌ನಗರ, ಶಾಂತಿನಗರ, ಉದಯಗಿರಿ ಹಾಗೂ ಕ್ಯಾತಮಾರನಹಳ್ಳಿಯ ಟೆಂಟ್ ಸರ್ಕಲ್ ವರೆಗೆ ರೋಡ್ ಶೋ ನಡೆಸುವ ಮೂಲಕ ಕೊನೆ ಹಂತದ ಬಹಿರಂಗ ಪ್ರಚಾರ ನಡೆಸಿದರು.

ನಮ್ಮ ಪೂರ್ವಜರಂತೆ ತಮ್ಮಿಂದಲೂ ಜನಸೇವೆ

ಮೈಸೂರು-ಕೊಡಗು ಬಿಜೆಪಿ ಅಭ್ಯರ್ಥಿ ಯದುವೀರ್ ಒಡೆಯರ್



ಪಿರಿಯಾಪಟ್ಟಣದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಮಾತನಾಡಿದರು.

ಪಿರಿಯಾಪಟ್ಟಣ, ಏ.24- ನಮ್ಮ ಪೂರ್ವಜರು ಸಲ್ಲಿಸಿದ ಜನಸೇವೆಯಿಂದಾಗಿ ಇಡೀ ವಿಶ್ವದಲ್ಲೇ ಮೈಸೂರು ಮಾದರಿ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ರಾಜಪ್ರಭುತ್ವ ಹಾಗೂ ಪ್ರಜಾಪ್ರಭುತ್ವ ಎರಡರಲ್ಲೂ ಉತ್ತಮ ಕಾರ್ಯಗಳನ್ನು ಮಾಡಿದ್ದಾರೆ ಎಂದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಪಿರಿಯಾಪಟ್ಟಣದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ಪೂರ್ವಜರು ಅರಮನೆ ಒಳಗಡೆ ಇದ್ದುಕೊಂಡೆ ನಿಮ್ಮಗಳ ಸೇವೆ ಮಾಡಿದ್ದಾರೆ. ಅವರು ಜನರ ಸೇವೆ ಎಂದರೆ ದೇವರ ಆರಾಧನೆ ಮಾಡಿದಂತೆ ಎಂಬ ನಂಬಿಕೆ ಮತ್ತು ಕಾಯಕವೇ ಕೈಲಾಸ ಎಂಬ ತತ್ವವನ್ನು ರೂಢಿಸಿಕೊಂಡಿದ್ದರು. ಅದರಂತೆ ನಾವು ಸಹ ಅದೇ ತತ್ವವನ್ನು ಪಾಲಿಸುವ ಮೂಲಕ ಜನಸೇವೆಯಲ್ಲಿ ತಮ್ಮನ್ನು ಸಮರ್ಪಿಸಿಕೊಳ್ಳುವುದಾಗಿ ಯದುವೀರ್ ಭರವಸೆ ನೀಡಿದರು.

ಅಪಪ್ರಚಾರ ಹಾಗೂ ಟೀಕೆಗಳಿಗೆ ಉತ್ತರ ಕೊಡುವ ಅವಶ್ಯಕತೆ ಇಲ್ಲ. ಸಕಾರಾತ್ಮಕವಾಗಿ ಸೇವೆಯಲ್ಲಿ ಮುಂದುವರಿಯೋಣ. ನಾವು ಮಾಡುವ ಕೆಲಸವೇ ಎಲ್ಲದಕ್ಕೂ ಉತ್ತರವಾಗಲಿದೆ. ಇಲ್ಲಿನ ಪ್ರಮುಖ ಸಮಸ್ಯೆಗಳ ಬಗ್ಗೆ ಹಿರಿಯರಿಂದ ಮಾಹಿತಿ ತೆಗೆದುಕೊಂಡಿದ್ದೇನೆ. ಮುಖ್ಯವಾಗಿ ತಂಬಾಕು ಬೆಳೆಗಾರರ ಸಮಸ್ಯೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಮಾಹಿತಿ ಕಲೆ ಹಾಕಿದ್ದೇನೆ. ಅವುಗಳನ್ನು ಪರಿಹರಿಸಿ ನಿಮ್ಮ ಜೊತೆ ಮುಂದುವರಿಯುತ್ತೇನೆ ಎಂದು ಆಶ್ವಾಸನೆ ನೀಡಿದರು.

ನಿಮ್ಮ ಉತ್ಸಾಹ ಹೀಗೆ ಮುಂದುವರೆಯಲಿ. ಏ.26 ರಂದು ನನ್ನ ಕ್ರಮಸಂಖ್ಯೆ 1 ಕ್ಕೆ ಮತ ನೀಡುವ ಮೂಲಕ ನನಗೆ ಆಶೀರ್ವದಿಸಿ. ಮತ್ತೊಮ್ಮೆ ಮೋದಿಯವರು ಪ್ರಧಾನಮಂತ್ರಿಯಾಗುವುದಕ್ಕೆ ಅವರಿಗೆ ಸಹಕರಿಸೋಣ. ಶ್ರೇಷ್ಠ ಭಾರತ ನಿರ್ಮಾಣ ಮಾಡುವುದಕ್ಕೆ ಕೈ ಜೋಡಿಸೋಣ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಜೆಡಿಎಸ್‌ನ ಮಾಜಿ ಶಾಸಕ ಮಹದೇವ್, ಬಿಜೆಪಿ ಹಿರಿಯ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.

ಅತ್ತ ಯದುವೀರ್ ಚುನಾವಣಾ ಪ್ರಚಾರ ಭರಾಟೆ; ಇತ್ತ ತಾಯಿ ಪ್ರಮೋದಾದೇವಿ ಮೊಮ್ಮಗನೊಂದಿಗೆ ರಿಲ್ಯಾಕ್ಸ್



ಮೈಸೂರು, ಏ.24(ಎಂಕೆ)- ಲೋಕಸಭಾ ಚುನಾವಣೆಯ ಮೈಸೂರು-ಕೊಡಗು ಕ್ಷೇತ್ರದ ಅಭ್ಯರ್ಥಿಯಾಗಿರುವ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕ್ಷೇತ್ರದೆಲ್ಲೆಡೆ ಬಿರುಸಿನ ಚುನಾವಣಾ ಪ್ರಚಾರ ನಡೆಸಿದರೆ, ಅವರ ತಾಯಿ ಪ್ರಮೋದಾದೇವಿ ಒಡೆಯರ್ ತಮ್ಮ ಮೊಮ್ಮಗನೊಂದಿಗೆ ಪ್ರಾಣಿ-ಪಕ್ಷಿಗಳ ನಡುವೆ ರಿಲ್ಯಾಕ್ಸ್ ಮೂಡ್‌ನಲ್ಲಿದ್ದಾರೆ.

ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯಕ್ಕೆ ಬುಧವಾರ ಮೊಮ್ಮಗ ಆದ್ಯವೀರ್ ಜೊತೆ ಭೇಟಿ ನೀಡಿದ ಅವರು, ಮೃಗಾಲಯದಲ್ಲಿರುವ ಪ್ರಾಣಿ-ಪಕ್ಷಿಗಳನ್ನು ವೀಕ್ಷಣೆ ಮಾಡಿದರು. ಇದೇ ವೇಳೆ ಮೃಗಾಲಯಕ್ಕೆ ಕುಟುಂಬಸ್ಥರೊಂದಿಗೆ ಭೇಟಿ ನೀಡಿದ ನಟಿ ಮೇಘನಾ ರಾಜ್, ಪ್ರಮೋದಾದೇವಿ ಒಡೆಯರ್ ಅವರನ್ನು ಮಾತನಾಡಿಸಿ, ಕುಶಲೋಪರಿ ವಿಚಾರಿಸಿದರಲ್ಲದೆ ಫೋಟೋ ಕ್ಲಿಕ್ಕಿಸಿಕೊಂಡು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಪ್ರಜಾಪ್ರಭುತ್ವ ಉಳಿವಿಗಾಗಿ ಕಾಂಗ್ರೆಸ್ ಪರ ನಿಲ್ಲುವ ಅನಿವಾರ್ಯತೆ ಸೃಷ್ಟಿಯಾಗಿದೆ

• ಸಾಹಿತಿ ಪ್ರೊ. ಅರವಿಂದ ಮಾಲಗತ್ತಿ ಅಭಿಮತ • ಮೈಸೂರಲ್ಲಿ ಅಹಿಂದ ದುಂಡುಮೇಜಿನ ಸಭೆ



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಬುಧವಾರ ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿದರು.

ಮೈಸೂರು, ಏ.24(ಎಂಟಿವೈ)- ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ದೂರವಾಗಿ ಸರ್ವಾಧಿಕಾರಿ ವ್ಯವಸ್ಥೆ ಜಾರಿಗೊಂಡರೆ ಆಪತ್ತು ಕಟ್ಟಿಟ್ಟಬುತ್ತಿ ಎಂದು ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ವಿಷಾದಿಸಿದ್ದಾರೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ದಲಿತ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಬುಧವಾರ ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಅಹಿಂದ ದುಂಡು ಮೇಜಿನ ಸಭೆಯಲ್ಲಿ ಮಾತನಾಡಿದ ಅವರು, ಭಾರತದಲ್ಲಿರುವ ಪ್ರಜಾಪ್ರಭುತ್ವ ವ್ಯವಸ್ಥೆ ವಿಶ್ವಮಟ್ಟದಲ್ಲಿ ಮನ್ನಣೆಗೆ ಪಾತ್ರವಾಗಿದೆ. ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತದಲ್ಲಿ ರಾಮರಾಜ್ಯದ ಪರಿಕಲ್ಪನೆಗಿಂತ ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದ ಮೂಲಕ ಕಟ್ಟಿಕೊಟ್ಟ ಆದರ್ಶದ ರಾಜ್ಯ ಮಹತ್ವದ ಪಾತ್ರ ವಹಿಸಿದೆ. ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ವರ್ಣ ವ್ಯವಸ್ಥೆಯೇ ಆದರ್ಶವಾಗಿದೆ. ಶ್ರೀರಾಮನೂ ಈ ವ್ಯವಸ್ಥೆಯ ಆದರ್ಶ ಪುರುಷ. ಆದರೆ, ಪ್ರಸ್ತುತ ಸಂವಿಧಾನದ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿದೆ. ಇದರ ಬದಲು ಸರ್ವಾಧಿಕಾರಿ ವ್ಯವಸ್ಥೆ ಜಾರಿಯಾದರೆ ಭಾರತ ವಿಶ್ವದಲ್ಲಿ ತಲೆತಗ್ಗಿಸಬೇಕಾದ ದುಸ್ಥಿತಿ ಒದಗಿ ಬರುವ ಆತಂಕ ಎದುರಾಗಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದೇಶದಲ್ಲಿ ಸಾಮಾಜಿಕ, ರಾಜಕೀಯ ಸಮಸ್ಯೆಯಿಂದ ಜನರು ಬಳಲುತ್ತಿದ್ದರೂ ಚಿಂತಕರು, ಹೋರಾಟಗಾರರು ತಟಸ್ಥವಾಗಿರುವುದು ಮಾರಕ ಸಂಕೇತ. ದೇಶದಲ್ಲಿ ಜಾತಿ ರಾಜಕೀಯ, ಧರ್ಮ ಹಾಗೂ ಭೂಗತ ರಾಜಕಾರಣ ಅಸ್ತಿತ್ವದಲ್ಲಿರುವುದರಿಂದ ದೇಶದ ರಕ್ಷಣೆ, ಜನರ ಹಿತ ಚಿಂತನೆ, ಸಮಾಜದಲ್ಲಿ ಶಾಂತಿ, ಕೋಮು ಸೌಹಾರ್ದತೆಯ ಸ್ಥಾಪನೆಗಾಗಿ ಹಾಗೂ ರಾಷ್ಟ್ರದ ಹಿತಕ್ಕಾಗಿ ಕಾಂಗ್ರೆಸ್ ಪರ ನಿಲ್ಲಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಕಳೆದ 10 ವರ್ಷದಲ್ಲಿ ದೇಶದ ಸಾಲವು 54 ಲಕ್ಷ ಕೋಟಿಯಿಂದ 152 ಲಕ್ಷ ಕೋಟಿಗೇರಿ ಆರ್ಥಿಕ ಸ್ಥಿತಿ ಶೋಚನೀಯವಾಗಿದೆ. ಸಾಮಾನ್ಯ ಜನರ ಆರ್ಥಿಕ ಶಕ್ತಿಯು ಅದಾನಿಯಿಂದ ಅಂಬಾನಿಯಂಥ ಕೆಲವೇ ಮಂದಿ ಬಳಿ ಶೇಖರಣೆಯಾಗಿದೆ. ಎಲ್ಲಿಯವರೆಗೆ ಜಾತಿ, ಧರ್ಮಗಳ ನಡುವೆ ಸಂಘರ್ಷವಿರುತ್ತದೋ ಅಲ್ಲಿವರೆಗೆ ಅಧಿಕಾರದಲ್ಲಿರಬಹುದೆಂದು ಬಿಜೆಪಿ ಅಂದುಕೊಂಡಿದೆ ಎಂದು ಕಿಡಿಕಾರಿದರು.

ಈ ಹಿಂದೆ ಬಿಜೆಪಿ ಸಂಸದರೊಬ್ಬರು ಈ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 400 ಸ್ಥಾನದಲ್ಲಿ ಗೆದ್ದರೆ ಸಂವಿಧಾನವನ್ನು ಸರಳವಾಗಿ ಬದಲಿಸಲು ಸಾಧ್ಯ ಎಂದು ಹೇಳಿಕೆ ನೀಡಿದ್ದಾರೆ. ಹೀಗಾಗಿಯೇ ಮನುಸ್ಮೃತಿಯನ್ನು ಮತ್ತೆ ಸಂವಿಧಾನವಾಗಿಸುವ ಹುನ್ನಾರವನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರದ ಗೃಹಸಚಿವ ಅಮಿತ್ ಶಾ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಏ.26ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ಪ್ರಬುದ್ಧ ಮತದಾರರು ಎಚ್ಚರಿಕೆಯಿಂದ ಮತ ಚಲಾಯಿಸಬೇಕು. ಸಂವಿಧಾನದ ರಕ್ಷಣೆಗಾಗಿ ಕಾಂಗ್ರೆಸ್ ಬೆಂಬಲಿಸುವ ಅಗತ್ಯವಿದೆ ಎಂದು ತಿಳಿಸಿದರು.

ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಮಾತನಾಡಿ, ಹಿಟ್ಲರ್‌ನಂತಹ ಸರ್ವಾಧಿಕಾರಿಗಳು ಇತಿಹಾಸದ ತಿಪ್ಪೆಗುಂಡಿಯಲ್ಲಿ ಬಿದ್ದಿದ್ದಾರೆ. ಜನರಿಗೆ ದುಡಿದ ಬುದ್ಧ, ಬಸವಣ್ಣ, ಅಕ್ಕಮಹಾದೇವಿ, ಅಂಬೇಡ್ಕರ್, ಗಾಂಧಿ, ನೆಹರೂ ಅಂಥ ಪ್ರಜಾಪ್ರಭುತ್ವವಾದಿಗಳು ಉಳಿದಿದ್ದಾರೆ. ಕಳೆದ 10 ವರ್ಷದಲ್ಲಿ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಅನಾಗರಿಕವಾಗಿ ನಡೆದುಕೊಂಡಿದೆ. ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸೌಹಾರ್ದ ಭಾವಕ್ಕೆ ಅಪಚಾರ ಮಾಡಿದೆ. 70ರ ದಶಕದಲ್ಲಿ ತುರ್ತುಪರಿಸ್ಥಿತಿ ವೇಳೆಯೂ ಇಂಥ ದುಸ್ಥಿತಿ ಇರಲಿಲ್ಲ. ಸಾವಿರಾರು ವರ್ಷ ಸನಾತನ ಚಿಂತನೆ ದೇಶದ ಜನರನ್ನು ಕತ್ತಲಲ್ಲಿಟ್ಟಿತ್ತು. ಅದೇ ವ್ಯವಸ್ಥೆಯನ್ನು ತರಲಾಗುತ್ತಿದೆ ಎಂದರು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮುಖಂಡರಾದ ಕೋಟೆ ಎಂ.ಶಿವಣ್ಣ, ನಂಜುಂಡಸ್ವಾಮಿ, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ.ಮೂರ್ತಿ, ಜಿಲ್ಲಾ ಗ್ರಾಮಾಂತರ ಸಮಿತಿ ಅಧ್ಯಕ್ಷ ಬಿ.ಜೆ. ವಿಜಯಕುಮಾರ್, ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಮ್, ದಸಂಸ ಮುಖಂಡ ಹರಿಹರ ಆನಂದಸ್ವಾಮಿ, ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಮಾಜಿ ಮೇಯರ್ ನಾರಾಯಣ, ವಕೀಲ ಕಾಂತರಾಜ್, ಸವಿತಾ ಸಮಾಜದ ನಾಗೇಶ್, ಉಪ್ಪಾರ ಸಮಾಜದ ಜಿಲ್ಲಾಧ್ಯಕ್ಷ ಯೋಗೇಶ್ ಉಪ್ಪಾರ್, ಮೈಸೂರು ಸಿಟಿಜನ್ಸ್ ವಾಯ್ಸ್ ಸಂಘಟನೆಯ ಎಂ.ಎಫ್. ಕಲೀಂ, ಲೋಕೇಶ್ ಹಾಜರಿದ್ದರು.

ಮಿಲ್ಲರ್, ರಶೀದ್ ಖಾನ್ ಹೋರಾಟ ವ್ಯರ್ಥ

ಡೆಲ್ಲಿ ಎದುರು ರೋಚಕ ಸೋಲು ಕಂಡ ಗುಜರಾತ್ ಟೈಟಾನ್ಸ್



ನವದೆಹಲಿ, ಏ.24: ಸಾಯಿ ಸುದರ್ಶನ್, ಡೇವಿಡ್ ಮಿಲ್ಲರ್ ಹಾಗೂ ರಶೀದ್ ಖಾನ್ ಸ್ಫೋಟಕ ಬ್ಯಾಟಿಂಗ್ ಹೊರತಾಗಿಯೂ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಗುಜರಾತ್ ಟೈಟಾನ್ಸ್ ಎದುರು 4 ರನ್ ರೋಚಕ ಜಯ ಸಾಧಿಸಿದೆ. ಗೆಲ್ಲಲು 225 ರನ್ ಗುರಿ ಬೆನ್ನತ್ತಿದ ಗುಜರಾತ್ ಟೈಟಾನ್ಸ್ ತಂಡವು 8 ವಿಕೆಟ್ ಕಳೆದುಕೊಂಡು 220 ರನ್ ಗಳಿಸಲಷ್ಟೇ ಶಕ್ತವಾಯಿತು.

ಗೆಲ್ಲಲು 225 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಗುಜರಾತ್ ಟೈಟಾನ್ಸ್ ತಂಡವು ಎರಡನೇ ಓವರ್‌ನಲ್ಲೇ ನಾಯಕ ಶುಭ್‌ಮನ್ ಗಿಲ್(6) ವಿಕೆಟ್ ಕಳೆದುಕೊಂಡಿತು. ಆದರೆ ಎರಡನೇ ವಿಕೆಟ್‌ಗೆ ವೃದ್ಧಿಮಾನ್ ಸಾಹ ಹಾಗೂ ಬಿ ಸಾಯಿ ಸುದರ್ಶನ್ ಕೇವಲ 49 ಎಸೆತಗಳಲ್ಲಿ 82 ರನ್‌ಗಳ ಜತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. ವೃದ್ಧಿಮಾನ್ ಸಾಹ 39 ರನ್ ಗಳಿಸಿ ಕುಲ್ದೀಪ್ ಯಾದವ್‌ಗೆ ವಿಕೆಟ್ ಒಪ್ಪಿಸಿದರು. ಇನ್ನು ಮತ್ತೊಂದು ತುದಿಯಲ್ಲಿ ಸ್ಫೋಟಕ ಬ್ಯಾಟಿಂಗ್ ನಡೆಸಿದ ಸಾಯಿ ಸುದರ್ಶನ್ ಕೇವಲ 39 ಎಸೆತಗಳನ್ನು ಎದುರಿಸಿ 7 ಬೌಂಡರಿ ಹಾಗೂ 2 ಸಿಕ್ಸ್ ಸಹಿತ 65 ರನ್ ಬಾರಿಸಿ ರಸಿಕ್ ಸಲಾಮ್‌ಗೆ ವಿಕೆಟ್ ಒಪ್ಪಿಸಿದರು.

ಕೈಕೊಟ್ಟ ಮಧ್ಯಮ ಕ್ರಮಾಂಕ: ಸಾಹ ಹಾಗೂ ಸುದರ್ಶನ ವಿಕೆಟ್ ಪತನವಾಗುತ್ತಿದ್ದಂತೆಯೇ ಗುಜರಾತ್ ಟೈಟಾನ್ಸ್ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಒಂದಂಕಿ ಮೊತ್ತಕ್ಕೆ ವಿಕೆಟ್ ಒಪ್ಪಿಸಿ ನಿರಾಸೆ ಮೂಡಿಸಿದರು. ಓಮರ್‌ಝೈ ಒಂದು ರನ್ ಗಳಿಸಿದರೆ, ಶಾರುಕ್ ಖಾನ್ 8 ಹಾಗೂ ರಾಹುಲ್ ತೆವಾಟಿಯಾ 4 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಗೆಲುವಿನ ಆಸೆ ಮೂಡಿಸಿದ ಮಿಲ್ಲರ್: ಒಂದು ಹಂತದಲ್ಲಿ 16 ಓವರ್ ಅಂತ್ಯದ ವೇಳೆಗೆ ಗುಜರಾತ್ ತಂಡವು 6 ವಿಕೆಟ್ ಕಳೆದುಕೊಂಡು 152 ರನ್ ಬಾರಿಸುವ ಮೂಲಕ ಸೋಲಿನತ್ತ ಮುಖಮಾಡಿತ್ತು. ಆದರೆ ಕೊನೆಯಲ್ಲಿ ಡೇವಿಡ್ ಮಿಲ್ಲರ್ ಕೇವಲ 23 ಎಸೆತಗಳಲ್ಲಿ 6 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ ಸ್ಫೋಟಕ 55 ರನ್ ಸಿಡಿಸುವ ಮೂಲಕ ಗುಜರಾತ್ ಪಾಳಯದಲ್ಲಿ ಗೆಲುವಿನ ಆಸೆ ಮೂಡಿಸಿದ್ದರು. ಇನ್ನು ಕೊನೆಯಲ್ಲಿ ರಶೀದ್ ಖಾನ್ 11 ಎಸೆತಗಳಲ್ಲಿ ಅಜೇಯ 21 ರನ್ ಸಿಡಿಸಿದರಾದರೂ ತಂಡವನ್ನು ಸೋಲಿನಿಂದ ಪಾರು ಮಾಡಲು ಸಾಧ್ಯವಾಗಲಿಲ್ಲ.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಅಕ್ಷರ್ ಪಟೇಲ್(66) ಹಾಗೂ ನಾಯಕ ರಿಷಭ್ ಪಂತ್(88*) ಸ್ಫೋಟಕ ಅರ್ಧಶತಕಗಳ ನೆರವಿನಿಂದ 4 ವಿಕೆಟ್ ಕಳೆದುಕೊಂಡು 224 ರನ್ ಕಲೆಹಾಕಿತ್ತು.

ಭಾಷಣ ಮಾಡುತ್ತಿದ್ದ ವೇಳೆ ಕುಸಿದು ಬಿದ್ದ ಕೇಂದ್ರ ಸಚಿವ ನಿತಿನ್ ಗಡ್ಕರಿ



ಯವತ್ಮಾಲ್, ಏ.24- ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಬುಧವಾರ ಪೂರ್ವ ಮಹಾರಾಷ್ಟ್ರದ ಯವತ್ಮಾಲ್ ಜಿಲ್ಲೆಯಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡುತ್ತಿದ್ದ ವೇಳೆ ಪ್ರಜ್ಞೆ ತಪ್ಪಿ ಕುಸಿದು ಬಿದ್ದ ಘಟನೆ ನಡೆದಿದೆ.

ಯವತ್ಮಾಲ್-ವಾಶಿಮ್ ಲೋಕ ಸಭಾ ಕ್ಷೇತ್ರ ವ್ಯಾಪ್ತಿಯ ಪುಸಾದ್‌ನಲ್ಲಿ ಜನರನ್ನು ಉದ್ದೇಶಿಸಿ ಮಾತನಾಡು ತ್ತಿದ್ದಾಗ ಗಡ್ಕರಿ ಅವರು ಇದ್ದಕ್ಕಿದ್ದಂತೆ ಪ್ರಜ್ಞೆ ತಪ್ಪಿ ಕುಸಿದು ಬಿದ್ದಿದ್ದಾರೆ. ತಕ್ಷಣ ಅವರ ಅಂಗರಕ್ಷಕರು ಹಾಗೂ ಪಕ್ಷದ ನಾಯಕರು ಧಾವಿಸಿ ಅವರನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ವೈದ್ಯರು ಇದ್ದ ಕಾರಣ ಅವರನ್ನು ಪರೀಕ್ಷೆ ಮಾಡಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದ್ದಾರೆ. ಮಹಾ ರಾಷ್ಟ್ರದ ಪುಸಾದ್‌ನಲ್ಲಿ ನಡೆದ ರ‍್ಯಾಲಿಯಲ್ಲಿ ಬಿಸಿಲಿನ ಕಾರಣದಿಂದ ನಾನು ಅಸ್ವಸ್ಥನಾಗಿದ್ದೆ. ಆದರೆ ಈಗ ನಾನು ಸಂಪೂರ್ಣವಾಗಿ ಸರಿಯಾಗಿದ್ದೇನೆ ಮತ್ತು ಮುಂದಿನ ರ‍್ಯಾಲಿಯಲ್ಲಿ ಭಾಗವಹಿಸಲು ವರುದ್‌ಗೆ ಹೋಗುತ್ತಿದ್ದೇನೆ ಎಂದು 66 ವರ್ಷದ ನಿತಿನ್ ಗಡ್ಕರಿ ಅವರು ಎಕ್ಸ್‌ನಲ್ಲಿ ಪೋಸ್ಟ್‌ಮಾಡಿದ್ದಾರೆ.

ಹೆಚ್.ಡಿ.ಕೋಟೆ ಬಳಿ ಗ್ರಾಮದಲ್ಲಿ ವ್ಯಕ್ತಿ ಅನುಮಾನಾಸ್ಪದ ಸಾವು

ಶವಪರೀಕ್ಷೆಗೆ ನಿರ್ಲಕ್ಷ್ಯ ತೋರಿದ ವೈದ್ಯರಿಗೆ ಶಾಸಕರ ತರಾಟೆ

ವೈದ್ಯರ ನಡವಳಿಕೆಗೆ ಮೃತರ ಸಂಬಂಧಿಕರ ಆಕ್ರೋಶ, ಶಾಸಕರು ಬಂದರೂ ಬಾರದ ವೈದ್ಯರು



ಹೆಚ್.ಡಿ.ಕೋಟೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲು ವಿಳಂಬ ಮಾಡಿದ ಆಸ್ಪತ್ರೆಯ ಅರವಳಿಕೆ ತಜ್ಞ ಡಾ.ಕಿರಣ್ ಕುಮಾರ್ ಅವರನ್ನು ಶಾಸಕ ಅನಿಲ್ ಚಿಕ್ಕಮಾದು ತರಾಟೆಗೆ ತೆಗೆದುಕೊಂಡಿರುವುದು.

ಹೆಚ್.ಡಿ.ಕೋಟೆ, ಏ.24– ಮರಣೋತ್ತರ ಪರೀಕ್ಷೆ ನಡೆಸಲು ವಿಳಂಬ ಮಾಡಿ, ನಿರ್ಲಕ್ಷ್ಯ ಧೋರಣೆ ತೋರಿದ ವೈದ್ಯರನ್ನು ಶಾಸಕ ಅನಿಲ್ ಚಿಕ್ಕಮಾದು ತರಾಟೆಗೆ ತೆಗೆದುಕೊಂಡ ಘಟನೆ ಬುಧವಾರ ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಸಂಭವಿಸಿದೆ.

ತಾಲೂಕಿನ ಹಿರೇಹಳ್ಳಿ ಬಿ.ಕಾಲೋನಿ ಗ್ರಾಮದ ಕರಿಗೌಡರ ಪುತ್ರ ನಾಗೇಶ್ (40) ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಲು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ತಂದು ಶವಾಗಾರದಲ್ಲಿ ಇಟ್ಟಿದ್ದ ವೇಳೆ ಈ ಘಟನೆ ಜರುಗಿದೆ.

ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಮೃತದೇಹವನ್ನು ಶವಾಗಾರಕ್ಕೆ ತಂದಿದ್ದು, ಮರಣೋತ್ತರ ಪರೀಕ್ಷೆ ನಡೆಸುವಂತೆ ಪೊಲೀಸರು ಹಾಗೂ ಮೃತನ ಸಂಬಂಧಿಕರು ಕರ್ತವ್ಯ ನಿರತ ವೈದ್ಯ ಅರವಳಿಕೆ ತಜ್ಞ ಡಾ. ಕಿರಣ್ ಕುಮಾರ್ ಅವರಿಗೆ ಮನವಿ ಮಾಡಿದರೂ ಕೂಡ ನನಗೆ ತುರ್ತು ಘಟಕದಲ್ಲಿ ಕೆಲಸ ಇದ್ದು, ನಾನು ಮರಣೋತ್ತರ ಪರೀಕ್ಷೆ ನಡೆಸುವುದಿಲ್ಲ ಎಂದು ಉಡಾಫೆಯಿಂದ ಉತ್ತರಿಸಿದರು ಎಂದು ಮೃತ ವ್ಯಕ್ತಿಯ ಸಂಬಂಧಿಕರು ಆಸ್ಪತ್ರೆ ಆವರಣದಲ್ಲಿ ವೈದ್ಯರ ವಿರುದ್ಧ ಗಲಾಟೆ ಮಾಡಿ, ಆಕ್ರೋಶ ವ್ಯಕ್ತಪಡಿಸಿದರು.

ವಿಷಯ ತಿಳಿದು ಶಾಸಕ ಅನಿಲ್ ಚಿಕ್ಕಮಾದು ಅವರು ಆಸ್ಪತ್ರೆ ಶವಾಗಾರಕ್ಕೆ ಭೇಟಿ ನೀಡಿ, ಮೃತನ ಸಂಬಂಧಿಕರಿಂದ ಮಾಹಿತಿ ಪಡೆದು ಅಲ್ಲೇ ಕಾದರೂ ಸ್ಥಳಕ್ಕೆ ಕರ್ತವ್ಯ ನಿರತ ವೈದ್ಯರು ಸೌಜನ್ಯಕ್ಕಾದರೂ ಶಾಸಕರ ಬಳಿ ಬಂದು ಮಾಹಿತಿ ನೀಡಲಿಲ್ಲ. ಆಸ್ಪತ್ರೆ ಸಿಬ್ಬಂದಿಗಳ ಮೂಲಕ ವೈದ್ಯರು ಬರುವಂತೆ ಸೂಚಿಸಿದರು. ನಂತರ ಬಂದ ವೈದ್ಯರು ನಾನು ತುರ್ತು ಚಿಕಿತ್ಸಾ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರಿಂದ ತಮ್ಮ ಬಳಿ ಬರಲು ಸಾಧ್ಯವಾಗಲಿಲ್ಲ ಎಂದು ಸಮಜಾಯಿಷಿ ನೀಡಲು ಮುಂದಾದರು. ಇದನ್ನು ಒಪ್ಪದ ಶಾಸಕರು ನಾನು ಬಂದು ಅರ್ಧ ಗಂಟೆ ಕಾದರೂ ನೀವು ಸೌಜನ್ಯಕ್ಕಾದರೂ ಬಂದು ಏನೂ ಅಂತ ವಿಚಾರ ಕೇಳಲಿಲ್ಲ. ನಿಮಗೆ ನಮ್ಮ ತಾಲೂಕಿನಲ್ಲಿ ಸೇವೆ ಮಾಡುವ ಇಷ್ಟವಿದ್ದರೆ ಮಾಡಿ ಇಲ್ಲದಿದ್ದರೆ ವರ್ಗಾವಣೆ ಮಾಡಿಸಿಕೊಳ್ಳಿ ಎಂದು ಗುಡುಗಿದರು.

ಮಧ್ಯಾಹ್ನ 12 ಗಂಟೆಗೆ ಆಸ್ಪತ್ರೆಗೆ ಮೃತದೇಹವನ್ನು ತರಲಾಗಿದೆ. ಯಾಕೇ ನೀವು ಮರಣೋತ್ತರ ಪರೀಕ್ಷೆ ಮಾಡಲಿಲ್ಲ ಎಂದು ಶಾಸಕರು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ವೈದ್ಯರು ಪೊಲೀಸರು ಹೃದಯ ಸಂಬಂಧಿ ಕಾಯಿಲೆಯಿಂದ ಮೃತಪಟ್ಟಿದ್ದಾರೆ ಎಂಬ ಮಾಹಿತಿ ನೀಡಿದ್ದರಿಂದ, ಅಸ್ವಾಭಾವಿಕ ಸಾವಿಗೆ ಸಂಬಂಧಿಸಿದಂತೆ ಅದಕ್ಕೆ ಸಂಬಂಧಿಸಿದ ವೈದ್ಯರು ಮರಣೋತ್ತರ ಪರೀಕ್ಷೆ ನಡೆಸಬೇಕು. ನಾನು ಮಾಡಲು ಬರುವುದಿಲ್ಲ ಎಂದು ಉತ್ತರಿಸಿದರು.

ಈ ಉತ್ತರದಿಂದ ಸಮಾಧಾನಗೊಳ್ಳದ ಶಾಸಕರು ಈ ಮಾಹಿತಿಯನ್ನಾದರೂ ಮೃತನ ಸಂಬಂಧಿಕರಿಗೆ ನೀಡಬಹುದಾಗಿತ್ತು ಎಂದಾಗ ಇದಕ್ಕೆ ವೈದ್ಯರಲ್ಲಿ ಉತ್ತರ ಇರಲಿಲ್ಲ. ನಂತರ ಮಾತನಾಡಿದ ಶಾಸಕರು, ಕರ್ತವ್ಯನಿರತ ವೈದ್ಯರಾಗಿ ನೀವು ಸಾರ್ವಜನಿಕರಿಗೆ ಸರಿಯಾಗಿ ಮಾಹಿತಿ ನೀಡಿ ಸ್ಪಂದಿಸದ ಕಾರಣ ನಿಮ್ಮನ್ನು ಸೇವೆಯಿಂದ ಅಮಾನತು ಮಾಡಲು ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ತಿಳಿಸಿ ಹೊರ ನಡೆದರು.


ಬುಧವಾರ ಬೆಳಗ್ಗೆ ತಾಲೂಕಿನ ಹಿರೇಹಳ್ಳಿ ಬಿ ಕಾಲೋನಿ ಗ್ರಾಮದಲ್ಲಿ ಗ್ರಾಮದ ಕರಿಗೌಡರ ಮಗ ನಾಗೇಶ ಹಾಗೂ ಇದೇ ಗ್ರಾಮದ ನಾಗೇಗೌಡರ ಮಗ ಪುಟ್ಟೇಗೌಡ ಉ. ಪುಟ್ಟ ನಾಗರಾಜು ಇಬ್ಬರ ನಡುವೆ ಹಣಕಾಸು ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆ ನಡೆದಿದೆ. ಈ ಸಂದರ್ಭದಲ್ಲಿ ಪುಟ್ಟೇಗೌಡ ಉ. ಪುಟ್ಟ ನಾಗರಾಜು ನಾಗೇಶ ಎದೆಗೆ ಕೈಯಿಂದ ಗುದ್ದಿದ್ದಾರೆ. ಇದರಿಂದ ನಾಗೇಶ ಸ್ಥಳದಲ್ಲಿ ಕುಸಿದು ಬಿದ್ದು ಸಾವನ್ನಪ್ಪಿದ್ದಾನೆ ಎಂದು ಆರೋಪಿಸಿ ಮೃತನ ಸಂಬಂಧಿಕರು ಅಂತರಸಂತೆ ಪೊಲೀಸ್ ಠಾಣೆಗೆ ವಿಚಾರ ತಿಳಿಸಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಲು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಮೃತ ವ್ಯಕ್ತಿಯ ಮಗಳಿಂದ ದೂರು ಪಡೆದು ತನಿಖೆ ಕೈಗೊಂಡಿದ್ದಾರೆ. ನಂತರ ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಸೋಮಣ್ಣ ಮೃತ ವ್ಯಕ್ತಿಯ ಮರಣೋತ್ತರ ಪರೀಕ್ಷೆ ನಡೆಸಿದರು. ನಂತರ ಪೊಲೀಸರು ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರ ಮಾಡಿದರು. ಈ ಸಂದರ್ಭದಲ್ಲಿ ಜೈ ಕರ್ನಾಟಕ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ, ಮೈಮುಲ್ ನಿರ್ದೇಶಕ ಹಿರೇಗೌಡ, ಮುಖಂಡರುಗಳಾದ ನಾಗನಹಳ್ಳಿ ಪ್ರದೀಪ, ಸಿದ್ದು, ನಾಗೇಶ್, ರಾಜೇಗೌಡ, ಸಾಗರೆ ಮಹೇಂದ್ರ, ಸೋಮೇಗೌಡ, ಸುಪ್ರೀತ್, ಮಹೇಶ್, ಕೋಳಿ ರವಿ, ಕೆಂಡಗಣ್ಣೇಗೌಡ, ಪಿ. ನಾಗರಾಜು, ಆನಂದ, ವಾಸು ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.



ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ ಅವರ ಪರವಾಗಿ ಚಾಮುಂಡೇಶ್ವರಿ ಕ್ಷೇತ್ರದ ದೊಡ್ಡಹುಂಡಿ ಗ್ರಾಮದಲ್ಲಿ ಮನೆ ಮನೆಗಳಿಗೆ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಿಸುವ ಮೂಲಕ ಪ್ರಚಾರ ಮಾಡಲಾಯಿತು. ಈ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಸೋಮಣ್ಣ, ಧನಗಳ್ಳಿ ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಪುಟ್ಟಬಸವೇಗೌಡ, ಗ್ರಾಪಂ ಸದಸ್ಯರಾದ ಮೊಟ್ಟೆ ನಾಗಣ್ಣ, ಡಿ.ಸಿ. ಬಸವೇಗೌಡ, ಅಂಗಡಿ ನಾಗರಾಜು, ಪಿ. ಬಸವರಾಜು, ಬಾಳೆಕಟ್ಟೆ ನಾಗೇಂದ್ರ, ಬಸವಲಿಂಗ, ಮಹದೇವು, ಪಿ. ನಾಗೇಗೌಡ, ಚಿಕ್ಕೇಗೌಡ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಕುಮಾರಸ್ವಾಮಿಗೆ ಒಕ್ಕಲಿಗರ ಸಂಘ ಬೆಂಬಲ



ಚುಂಚನಕಟ್ಟೆ, ಏ.24– ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮತದಾರರು ಬೆಂಬಲಿಸಬೇಕೆಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ ಮನವಿ ಮಾಡಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವವರು ಬಿಜೆಪಿ ಪಕ್ಷವು ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಾವಣೆ ಮಾಡುತ್ತಾರೆ, ಎಂದು ಕಾಂಗ್ರೆಸ್ ಪಕ್ಷದವರು ಬೊಬ್ಬೆ ಹಾಕೋದನ್ನು ಬಿಟ್ಟರೆ ಬೇರೇನು ಹೇಳುತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿಯವರು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆ. ಸಂವಿಧಾನವನ್ನು ಬದಲಾವಣೆ ಮಾಡುವುದಿಲ್ಲ ಎಂದು. ಆದರೂ ಕಾಂಗ್ರೆಸಿಗರಿಗೆ ಕೇಂದ್ರ ಸರ್ಕಾರವನ್ನು ದೂರೋದು ಬಿಟ್ಟರೆ ಬೇರೆ ಇನ್ನೇನು ಕೆಲಸವಿಲ್ಲ ಎಂದರು. ತಾಲೂಕು ಒಕ್ಕಲಿಗರ ಸಂಘವು ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಬೆಂಬಲಿಸಿ ಕ್ಷೇತ್ರದಲ್ಲಿ ಪ್ರಚಾರ ಕಾರ್ಯ ಮಾಡುತ್ತಿದ್ದೇವೆ. ತಾಲೂಕಿನ ಮತದಾರರು ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಹೆಚ್ಚಿನ ಮತಗಳನ್ನು ನೀಡುವ ಮೂಲಕ ಅವರನ್ನು ಆಯ್ಕೆ ಮಾಡಬೇಕೆಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ ಮನವಿ ಮಾಡಿದ್ದಾರೆ.

ಪೈಪ್‌ನೊಳಗಿದ್ದ ನಾಗರಹಾವನ್ನು ಪತ್ತೆ ಹಚ್ಚಿದ ಸಾಕು ನಾಯಿ!

ಕಂಪಲಾಪುರ, ಏ.24– ಶ್ವಾನ (ನಾಯಿ) ನಿಯತ್ತಿನ ಪ್ರಾಣಿ. ಅದಕ್ಕಿರುವ ನಿಯತ್ತು ಯಾರಿಗೂ ಇಲ್ಲ. ತನ್ನನ್ನು ಸಾಕಿ ಅನ್ನಹಾರ ನೀಡುವ ಯಜಮಾನ ಮತ್ತು ಅವರ ಕುಟುಂಬವನ್ನು ಕಾಪಾಡುವ ನಿಯತ್ತು ಅದಕ್ಕಿದೆ. ಅದಕ್ಕೆ ಇಲ್ಲೊಂದು ಪ್ರಕರಣ ಸಾಕ್ಷಿಯಾಗಿದೆ.



ನೀರನ್ನು ಹಾಯಿಸುವ ಪಂಪ್ ಸೆಟ್ ಪೈಪ್‌ನೊಳಗೆ ಅಡ ಗಿದ್ದ ಭಾರೀ ಗಾತ್ರದ ನಾಗರಹಾವನ್ನು ಸಾಕುನಾಯಿ (ಸೋನು) ಪತ್ತೆ ಹಚ್ಚಿ ತನ್ನ ಯಜಮಾನ ಮತ್ತು ಅವನ ಕುಟುಂಬವನ್ನು ಕಾಪಾಡಿದೆ. ಸಮೀಪದ ಹರಿಲಾಪುರದ ಶ್ರೀ ಶನೇಶ್ವರ ದೇವಸ್ಥಾನದ ಹಿಂಭಾಗ ಗುಡ್ಡಪ್ಪ ಗಣೇಶ್ ನೀರನ್ನು ಹಾಯಿಸುವ ಪೈಪ್‌ಗಳನ್ನು ಜೋಡಿಸಿದ್ದರು. ಬುಧವಾರ ಬೆಳಗ್ಗೆ ಪೈಪ್‌ನೊಳಗೆ ನಾಗರಹಾವೊಂದು ಸೇರಿಕೊಂಡಿದೆ. ಅಲ್ಲಿಂದ ತಲೆ ಎತ್ತಿ ಹೊರಬರುತ್ತಿರುವಾಗ ಸಾಕುನಾಯಿ ಗಮನಿಸಿ ಜೋರಾಗಿ ಬೊಗಳಲಾರಂಭಿಸಿದೆ. ನಂತರ ಗುಡ್ಡಪ್ಪ ಮನೆಯಿಂದ ಹೊರಬಂದು ಇದೇನಿದು ನಾಯಿ ಇಷ್ಟು ಜೋರಾಗಿ ಬೊಗಳುತ್ತಿದೆಯಲ್ಲಾ ಎಂದು ನೋಡಲು ಬಂದಾಗ ನಾಗರಹಾವು ಎಡೆ ಎತ್ತಿ ನಾಯಿ ಕಡೆ ನೋಡುತ್ತಿತ್ತು.

ನಾಯಿ ಎಡೆ ಎತ್ತಿ ನಿಂತಿದ್ದ ಹಾವನ್ನ ನೋಡುತ್ತಾ ಬೊಗಳುತ್ತಿತ್ತು ಆನಂತರ ಗುಡ್ಡಪ್ಪ ಕಂಪಲಾಪುರದ ಸ್ನೇಕ್ ಗಿರೀಶ್ ರವರಿಗೆ ಕರೆ ಮಾಡಿದಾಗ ತಕ್ಷಣ ಗಿರೀಶ್ ಬಂದು ಸುರಕ್ಷಿತವಾಗಿ ಹಾವನ್ನು ಹಿಡಿದು ಕಾಡಿಗೆ ಬಿಟ್ಟರು.

ಕೆ.ಆರ್.ನಗರದಲ್ಲಿ ಕುಮಾರಸ್ವಾಮಿ ಪರ ಸಾರಾ ಮಹೇಶ್ ಮತಯಾಚನೆ

ಕೆ.ಆರ್.ನಗರ, ಏ.24– ಪುರಸಭಾ ಸದಸ್ಯರು ವಿವಿಧ ಘಟಕದ ಅಧ್ಯಕ್ಷರು, ಮುಂಚೂಣಿ ನಾಯಕರು ಕಾರ್ಯಕರ್ತರ ಜೊತೆಗೂಡಿ ಮಾಜಿ ಸಚಿವ ಸಾರಾ ಮಹೇಶ್ ಪಟ್ಟಣದ 23 ವಾರ್ಡುಗಳಲ್ಲಿಯೂ ಮನೆ ಮನೆಗೆ ತೆರಳಿ ಪ್ರಚಾರ ಮಾಡುವ ಮೂಲಕ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಮತ ನೀಡುವಂತೆ ಪ್ರಚಾರ ನಡೆಸಿದರು.

ಪಟ್ಟಣದ 6ನೇ ವಾರ್ಡಿನ ಮಾರಮ್ಮ ತಾಯಿಗೆ ಪೂಜೆ ಸಲ್ಲಿಸುವ ಮೂಲಕ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪರ ಮನೆ ಮನೆಗೆ ತೆರಳಿ ಮತ ಪ್ರಚಾರ ನಡೆಸಿದ ನಂತರ ಕಾರ್ಯಕರ್ತರು ಮತ್ತು ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಸಚಿವ ಸಾರಾ ಮಹೇಶ್ ಈ ಬಾರಿ ಧರ್ಮ ಮತ್ತು ಅಧರ್ಮದ ಚುನಾವಣೆ ನಡೆಯುತ್ತಿದ್ದು ಧರ್ಮ ಗೆಲ್ಲುವುದೋ ಅಧರ್ಮ ಗೆಲ್ಲುವುದೋ ಚುನಾವಣೆಯ ನಂತರ ತಿಳಿಯಲಿದೆ ಎಂದರು.

ನಾನು ಶಾಸಕನಾಗಿದ್ದ 15 ವರ್ಷಗಳ ಅವಧಿಯಲ್ಲಿ ಪಟ್ಟಣದ 23 ವಾರ್ಡುಗಳಲ್ಲಿಯೂ ಸೂಕ್ಷ್ಮ ಅತಿ ಸೂಕ್ಷ್ಮ ಸಮಾಜ ಸೇರಿದಂತೆ ಎಲ್ಲಾ ಸಮಾಜಕ್ಕೂ ಸಮಾನಾಗಿ ಅನುದಾನ ನೀಡುವ ಜೊತೆಗೆ ವೈಯಕ್ತಿಕ ಸಹಾಯವನ್ನು ಮಾಡಿರುವುದರಿಂದಾಗಿ ಪಟ್ಟಣದ ಜನಸಾಮಾನ್ಯರು ಕುಡಿಯುವ ನೀರು, ರಸ್ತೆ, ವಿದ್ಯುತ್ ದೀಪಗಳು ಸೇರಿದಂತೆ ಅಭಿವೃದ್ಧಿಯನ್ನು ಕಂಡಿದೆ. ಆದರೆ 11 ತಿಂಗಳ ಅಧಿಕಾರ ಅವಧಿಯಲ್ಲಿ ಈಗಿನ ಶಾಸಕರು ಪಟ್ಟಣಕ್ಕೆ ಒಂದೇ ಒಂದು ಹಿಡಿ ಮಣ್ಣು ಅಥವಾ ಅಭಿವೃದ್ಧಿ ಮಾಡದೆ ಮಾಧ್ಯಮಗಳಲ್ಲಿ 400 ಕೋಟಿ 200 ಕೋಟಿ ಅನುದಾನ ತಂದಿದ್ದೇನೆ ಎಂದು ಪುಕ್ಕಟ್ಟೆ ಪ್ರಚಾರ ಪಡೆಯುತ್ತಿದ್ದಾರೆ ಎಂದರು.



ಮಾಜಿ ಸಚಿವ ಸಾರಾ ಮಹೇಶ್ ಜೆಡಿಎಸ್ ಕಾರ್ಯಕರ್ತರು ಮುಖಂಡರ ಜೊತೆಗೂಡಿ ಪಟ್ಟಣದ ಮನೆ ಮನೆ ಪ್ರಚಾರ ಮಾಡುತ್ತಿರುವುದು.

ಪ್ರಚಾರದ ವೇಳೆ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಅಮಿತ್ ವಿ ದೇವರಹಟ್ಟಿ ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎನ್. ಬಸಂತ್, ಪುರಸಭಾ ಸದಸ್ಯರಾದ ಕೆ.ಪಿ. ಪ್ರಭುಶಂಕರ್, ಸಂತೋಷ್‌ಗೌಡ ಕೆಎಲ್. ಜಗದೀಶ್, ಉಮೇಶ್, ತೋಂಟದಾರ್ಯ, ಮಂಜುಳಾ, ಚಿಕ್ಕವೀರ್, ಮುಖಂಡರುಗಳಾದ ಡೈರಿ ಪ್ರಕಾಶ್, ವಿಶ್ವಕರ್ಮ ಸಮಾಜದ ರಾಜ್ಯ ಉಪಾಧ್ಯಕ್ಷ ರೇವಣ್ಣ, ವಡ್ಡ ರವಿ, ಮಂಜುನಾಥ್, ಮನು, ಹರ್ಷ, ಹರೀಶ ಸೇರಿದಂತೆ ನೂರಾರು ಕಾರ್ಯಕರ್ತರು ಮುಖಂಡರು ಪ್ರಚಾರದಲ್ಲಿ ಪಾಲ್ಗೊಂಡಿದ್ದರು.

ನಂಜನಗೂಡು ತಾಲೂಕಲ್ಲಿ ಬಾಲರಾಜ್ ಪರ ಮತಯಾಚನೆ



ಬದನವಾಳು ಗ್ರಾಮದಲ್ಲಿ ಪ್ರಚಾರ ಸಭೆ ನಡೆಸುತ್ತಿರುವುದು.

ನಂಜನಗೂಡು, ಏ.24– ತಾಲೂಕಿನ ದೇವರಸನಹಳ್ಳಿ, ಹೆಡತಲೆ, ಉಪ್ಪಿನಹಳ್ಳಿ, ಹೊಸೂರು, ಹೊರಳವಾಡಿ, ಬದನವಾಳು ಗ್ರಾಮಗಳಲ್ಲಿ ಬಿಜೆಪಿ ಮುಖಂಡರಾದ ಎಸ್. ಮಹದೇವಯ್ಯ, ಕುಂಬ್ರಳ್ಳಿ ಸುಬ್ಬಣ್ಣ, ಮಂಗಳಾ ಸೋಮಶೇಖರ್ ಅವರು ಬಿಜೆಪಿ ಅಭ್ಯರ್ಥಿ ಬಾಲರಾಜು ಪರವಾಗಿ ಮನೆ ಮನೆಗೆ ತೆರಳಿ ಬಿರುಸಿನ ಪ್ರಚಾರ ನಡೆಸಿದರು.

ತಾಲೂಕಿನ ಬದನವಾಳು ಗ್ರಾಮದಲ್ಲಿ ಬಿಜೆಪಿ ರಾಜ್ಯ ಮುಖಂಡ ಕುಂಬ್ರಳ್ಳಿ ಸುಬ್ಬಣ್ಣ ಮಾತನಾಡಿ, ಪ್ರಧಾನಿ ಮೋದಿ ಅವರು ಭಾರತ ದೇಶವನ್ನು ಪ್ರಗತಿಪಥದತ್ತ ಕೊಂಡೊಯ್ಯುವ ಮೂಲಕ ವಿಶ್ವಮಟ್ಟದಲ್ಲಿ ಭಾರತ ದೇಶದ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಉಜ್ವಲ ಯೋಜನೆ, ಕಿಸಾನ್‌ಸಮ್ಮಾನ್ ಯೋಜನೆ, ವಿಶ್ವಕರ್ಮ ಯೋಜನೆಗಳ ಮೂಲಕ ಬಡ ವರ್ಗದ ಹಿಂದುಳಿದ ಜನರಿಗೆ ಆರ್ಥಿಕ ಶಕ್ತಿಯನ್ನು ತುಂಬುವ ಮೂಲಕ ಅವರ ಜೀವನವನ್ನು ಸುಗಮಗೊಳಿಸಿದ್ದಾರೆ ಎಂದರು.

ಗರೀಬ್ ಕಲ್ಯಾಣ ಯೋಜನೆ ಮೂಲಕ ಉಚಿತ ಪಡಿತರ ನೀಡಿದ್ದಾರೆ. ಆಯುಷ್ಮಾನ್ ಭಾರತ್ ಮೂಲಕ ಬಡ ಜನರಿಗೆ ಉಚಿತ ಆರೋಗ್ಯ ಸೇವೆಯನ್ನು ಒದಗಿಸಿದ್ದಾರೆ. ಪ್ರಧಾನಮಂತ್ರಿ ಆವಾಸ್ ಯೋಜನೆ ಮೂಲಕ 2 ಕೋಟಿಗೂ ಹೆಚ್ಚಿನ ಜನರಿಗೆ ಮನೆಗಳನ್ನು ನೀಡಿದ್ದಾರೆ. ದೇಶದ ಭದ್ರತೆ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಪ್ರಧಾನಿ ಮೋದಿರವರು ಮೊತ್ತೊಮ್ಮೆ ಪ್ರಧಾನಮಂತ್ರಿಯಾಗುವ ಉದ್ದೇಶದಿಂದ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಬಾಲರಾಜುರವರನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಿ ಎಂದರು.

ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಮಾತನಾಡಿ, ಬಿಜೆಪಿ ಅಭ್ಯರ್ಥಿ ಬಾಲರಾಜು ಸರಳ ಸಜ್ಜನ ವ್ಯಕ್ತಿಯಾಗಿದ್ದು, ದಿನದ 24 ಗಂಟೆಗಳೂ ಸಹ ಎಲ್ಲರ ಕೈಗೆ ಸಿಗುವಂತಹ, ಬಡವರ ಸೇವೆ ಮಾಡುವಂತಹ ವ್ಯಕ್ತಿಯಾಗಿದ್ದಾರೆ. ಆದ್ದರಿಂದ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಬಾಲರಾಜುರನ್ನು ಗೆಲ್ಲಿಸಿ ಎಂದರು.

ಇದೇ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯರಾದ ಎಸ್.ಎಂ.ಕೆಂಪಣ್ಣ ಶಿವರಾಮು, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್. ಮಹದೇವಪ್ಪ, ಮಾಜಿ ಸದಸ್ಯ ರವೀಂದ್ರ, ಬದನವಾಳು ಮಂಜುನಾಥ್, ನಾಗೇಂದ್ರ ಸೇರಿದಂತೆ ಹಲವಾರು ಪ್ರಮುಖರು ಇದ್ದರು.



ನಂಜನಗೂಡು ನಗರದ ಶ್ರೀಕಂಠೇಶ್ವರ ಬಡಾವಣೆ ಹಾಗೂ ಪ್ರಥಮ ದರ್ಜೆ ಕಾಲೇಜು ಮುಂಭಾಗ ಬಿಜೆಪಿ ಪಕ್ಷದ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಾಮ್ರಾಟ್ ವಸಂತ ಅವರು ಬಿಜೆಪಿ ಅಭ್ಯರ್ಥಿ ಬಾಲರಾಜು ಪರವಾಗಿ ಮತಯಾಚನೆ ಮಾಡಿದರು. ಚಿತ್ರದಲ್ಲಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ, ಮಧುರಾಜ್, ಸಿದ್ದರಾಜು, ಮನೋಜ್, ಸೇರಿದಂತೆ ಹಲವಾರು ಪ್ರಮುಖರು ಇದ್ದರು.



ವರುಣ ವಿಧಾನಸಭಾ ಕ್ಷೇತ್ರದ ಗೋಪಾಲಪುರದ ಜಿಲ್ಲಾ ಕಾರ್ಯದರ್ಶಿ ಮಹೇಶ್ ನೇತೃತ್ವದಲ್ಲಿ ಮನೆ ಮನೆಗೆ ಗ್ಯಾರಂಟಿ ಕಾರ್ಡುಗಳನ್ನು ವಿತರಿಸುವ ಮೂಲಕ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮತಯಾಚಿಸಲಾಯಿತು. ಮೈಸೂರು ಜಿಲ್ಲಾ ಗ್ರಾಮಾಂತರ ವೈದ್ಯಾಧಿಕಾರಿಗಳ ಜಿಲ್ಲಾಧ್ಯಕ್ಷ ಡಾ. ಪ್ರದೀಪ್. ಶಿವಕುಮಾರ್. ಮರಯ್ಯ, ರೇವಣ್ಣ, ಮಹಾದೇವ, ಮಲ್ಲೇಶ, ಕೆಂಪರಾಜು ಮತ್ತಿತರದಿದ್ದಾರೆ

ಒಳ ಮೀಸಲಾತಿ ಜಾರಿಗೆ ಮುಂದಾಗಿರುವ ಪ್ರಧಾನಿ ಮೋದಿ ಬೆಂಬಲಿಸಿ ಋಣ ತೀರಿಸೋಣ

ಮಾದಿಗ ಸಮುದಾಯಕ್ಕೆ ಪುರಸಭಾ ಸದಸ್ಯ ಕರೆ

ತಿ.ನರಸೀಪುರ, ಏ.24– ಒಳ ಮೀಸಲಾತಿ ಜಾರಿಗೊಳಿಸುವಂತೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಮಾಡಿದ್ದ ಶಿಫಾರಸ್ಸಿಗೆ ಮನ್ನಣೆ ದೊರಕಿದ್ದು, ಒಳ ಮೀಸಲಾತಿ ಜಾರಿಗೊಳಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿರುವ ಹಿನ್ನೆಲೆಯಲ್ಲಿ ಮಾದಿಗ ಸಮುದಾಯ ಬಿಜೆಪಿ ಪಕ್ಷವನ್ನು ಬೆಂಬಲಿಸುವ ಮೂಲಕ ಋಣ ತೀರಿಸುವ ಕೆಲಸ ಮಾಡಬೇಕಿದೆ ಎಂದು ಪುರಸಭೆ ಸದಸ್ಯ ಹಾಗೂ ಚಿತ್ರನಟ ಅರ್ಜುನ್ ರಮೇಶ್ ಮನವಿ ಮಾಡಿದರು.



ಪತ್ರಿಕಾಗೋಷ್ಠಿಯಲ್ಲಿ ಪುರಸಭೆ ಸದಸ್ಯ ಹಾಗೂ ನಟ ಅರ್ಜುನ್ ರಮೇಶ್ ಮಾತನಾಡಿದರು.

ಗೋಪಾಲಪುರ ಗ್ರಾಮದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಮಾದಿಗ ಸಮುದಾಯದವರು ದಶಕಗಳಿಂದ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ನಡೆಸುತ್ತಿದ್ದ ಹೋರಾಟಕ್ಕೆ ತಾರ್ಕಿಕ ಅಂತ್ಯ ದೊರಕುವ ಸಂದರ್ಭ ಹತ್ತಿರವಾಗಿದೆ.ಪ್ರಧಾನಿ ನರೇಂದ್ರ ಮೋದಿಯವರು ಒಳ ಮೀಸಲಾತಿ ಜಾರಿಗೊಳಿಸುವ ಭರವಸೆ ನೀಡಿರುವುದರಿಂದ ಪಕ್ಷದ ಋಣ ತೀರಿಸುವ ಜವಾಬ್ದಾರಿ ಸಹ ನಮ್ಮದಾಗಿದೆ ಎಂದರು. ಈಗಲೂ ನಮ್ಮ ಸಮಾಜ ಬಿಜೆಪಿ ಬೆಂಬಲಿಸದಿದ್ದರೆ ತಪ್ಪು ಸಂದೇಶ ರವಾನೆಯಾಗಲಿದ್ದು,ಚಾಮರಾಜನಗರ ಜಿಲ್ಲೆಯ ಎಲ್ಲ ಎಡಗೈ ಜನಾಂಗದವರು ಎನ್ ಡಿ ಎ ಅಭ್ಯರ್ಥಿ ಎಸ್.ಬಾಲರಾಜು ರವರಿಗೆ ಮತ ನೀಡುವ ಮೂಲಕ ನಾವೂ ಸ್ವಾಭಿಮಾನಿಗಳು ಎಂಬುದನ್ನು ತೋರಿಸಿಕೊಡಬೇಕಿದೆ ಎಂದರು.

ದಾರಿ ತಪ್ಪಿಸುತ್ತಿರುವ ಮುಖಂಡರು..!

ನಮ್ಮ ಸಮಾಜದಲ್ಲೇ ಕೆಲ ಮುಖಂಡರು ಬಿಜೆಪಿ ಪಕ್ಷ ನಮ್ಮ ಸಮುದಾಯಕ್ಕೆ ಯಾವುದೇ ಅನುಕೂಲ ಕಲ್ಪಿಸಿಕೊಟ್ಟಿಲ್ಲ ಎಂಬ ತಪ್ಪು ಸಂದೇಶ ನೀಡುವ ಮೂಲಕ ಇಡೀ ಸಮಾಜದ ಮತದಾರರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ.ಕೆಲವರು ತಮ್ಮ ಕುಟುಂಬದವರ ಹೊಟ್ಟೆ ತುಂಬಿಸಿಕೊಳ್ಳಲು ಇಲ್ಲ ಸಲ್ಲದ ಹೇಳಿಕೆ ನೀಡುತ್ತಿದ್ದಾರೆ. ನಮ್ಮಲ್ಲಿರುವ ಕೇರಿಗಳು, ಈಗಲೂ ಕೇರಿಗಳಾಗೇ ಉಳಿಯಲು ಕೆಲವೇ ಕೆಲವು ಪುಡಾರಿಗಳೇ ಕಾರಣ ಎಂದು ಕಿಡಿ ಕಾರಿದರು.

ಬಾಲರಾಜು, ಯದುವೀರ್ ಗೆಲ್ಲಿಸಿ...!

ಚಾಮರಾಜನಗರ ಜಿಲ್ಲೆಯಲ್ಲಿ ಎಡಗೈ ಸಮಾಜದ 1.75 ಲಕ್ಷ ಮತದಾರರಿದ್ದೇವೆ. ನಾವೆಲ್ಲಾ ಒಗ್ಗಟ್ಟಾಗಿ ಮತ ನೀಡುವ ಮೂಲಕ ಬಾಲರಾಜು ಗೆಲುವಿಗೆ ಕಾರಣರಾಗಬೇಕು.ಇಲ್ಲದಿದ್ದರೆ ಕೊನೆವರೆಗೂ ನಮ್ಮ ಸಮಾಜ ಜೀತ ಮಾಡಿಕೊಂಡಿರುವ ಪರಿಸ್ಥಿತಿಯಲ್ಲಿರಬೇಕಾಗುತ್ತದೆ ಎಂದು ಎಚ್ಚರಿಸಿದರು. ಬಲಗೈ–ಎಡಗೈ ಎಂಬ ತಾರತಮ್ಯವನ್ನು ಕ್ಷೇತ್ರದ ಶಾಸಕರೇ ಮಾಡುತ್ತಿದ್ದಾರೆ. ನರಸೀಪುರ ಕ್ಷೇತ್ರದ ಅಭಿವೃದ್ಧಿ ಶೂನ್ಯವಾಗಿದೆ ಎಂದರು. ಎಡಗೈ ಪರವಾಗಿದ್ದೇವೆ ಎಂದು ಹೇಳುವ ಕಾಂಗ್ರೆಸ್ ಪಕ್ಷ ಹಲವಾರು ಸಮಾಜದ ಮುಖಂಡರನ್ನು ಮೂಲೆ ಗುಂಪು ಮಾಡಿದೆ. ಮೀರಾ ಕುಮಾರ್ ಎಲ್ಲಿದ್ದಾರೆ ಎಂದು ಹುಡುಕುವ ಪರಿಸ್ಥಿತಿ ಕಾಂಗ್ರೆಸ್ ಪಕ್ಷದಲ್ಲಿ ಇದೆ. ಈ ಭಾಗದ ದಲಿತರ ಧ್ವನಿ ಆಗಿದ್ದ ಎನ್. ರಾಚಯ್ಯನವರ ಪುತ್ರ ಸಹ ಮೂಲೆ ಗುಂಪಾಗಿದ್ದಾರೆ ಎಂದರು.

ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ, ತಾಪಂ ಮಾಜಿ ಸದಸ್ಯ ಬಿ.ಎಲ್.ಮಹದೇವು, ಸಿ.ಡಿ.ವೆಂಕಟೇಶ್, ಕಳ್ಳೀಪುರ ನಾರಾಯಣ್, ಗ್ರಾಪಂ ಸದಸ್ಯ ಚಿನ್ನಸ್ವಾಮಿ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಬಡೇ ಮಿಯಾನ್ ಚೋಟೆ ಮಿಯಾನ್ (ಕ)	2 ಪ್ರದರ್ಶನಗಳು
ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮುಕ್ತ ಮನಸ್ಸು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ 2 (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.15ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಮ.1.25ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಮ.3.45ಕ್ಕೆ.
ಸ್ಕ್ರೀನ್ 2	ಅಪ್ಪ ಐ ಲವ್‌ಯು (ಕ): ಬೆ.10.20ಕ್ಕೆ, ಮುಕ್ತ ಮನಸ್ಸು (ಕ): ಮ.1.10ಕ್ಕೆ, ಗೀತಾಂಜಲಿ ಮಲ್ಲಿ ವಚ್ಚಿಂದಿ (ತೆ): ಸಂ.4.20ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ರಾ.7.10ಕ್ಕೆ, ಆವೇಶಂ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಅವತಾರ ಪುರುಷ 2 (ಕ): ಬೆ.10.55ಕ್ಕೆ, ರೊಮಿಯೋ (ತ): ಮ.1.25ಕ್ಕೆ, ಡಿಯರ್ (ತ): ಸಂ.4.15ಕ್ಕೆ, ಮೈದಾನ್ (ಹಿಂ): ಸಂ.6.55ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ವರ್ಷನ್‌ಗಲ್ಕು ಶೇಷಂ (ಮ): ಬೆ.10.05ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.15ಕ್ಕೆ, ಯುವ (ಕ): ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.50ಕ್ಕೆ, ಮ.3ಕ್ಕೆ, ರಾ.10ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (3ಡಿ) (ಹಿಂ): ಸಂ.6.30ಕ್ಕೆ.
ಸ್ಕ್ರೀನ್ 2	ಮೈದಾನ್ (ಹಿಂ): ಬೆ.9.50ಕ್ಕೆ, ಮ.1.40ಕ್ಕೆ, ಸಂ.5.30ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.9.40ಕ್ಕೆ, ಅಪ್ಪ ಐ ಲವ್‌ಯು (ಕ): ಮ.1.10ಕ್ಕೆ, ಅವತಾರ ಪುರುಷ 2 (ಕ): ಸಂ.4.15ಕ್ಕೆ, ಯುವ (ಕ): ಸಂ.6.55ಕ್ಕೆ, ಮೈದಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.9.40ಕ್ಕೆ, ಸಂ.4ಕ್ಕೆ, ರೋಮಿಯೋ (ತ): ಮ.12.55ಕ್ಕೆ, ಗೀತಾಂಜಲಿ ಮಲ್ಲಿ ವಚ್ಚಿಂದಿ (ತೆ): ರಾ.7.05ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹುಟ್ಟುಹಬ್ಬದ ಶುಭಾಶಯಗಳು



ಉದ್ಯಮಿ, ಸಮಾಜ ಸೇವಕ ಹಾಗೂ ಯುವ ಮುಖಂಡ ಕೆ.ಪ್ರದೀಪ್‌ಸಿಂಗ್ ಅವರ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಕಾಂಗ್ರೆಸ್ ಮುಖಂಡ ಹಾಗೂ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಅಜೀಜ್ (ಅಬ್ದುಲ್ಲಾ) ರಿಯಾಜ್, ಪ್ರದೀಪ್, ಹರಿ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.



ಮೈಸೂರಿನ ಹೆಸರಾಂತ ಉದ್ಯಮಿ ಕೆ.ಪ್ರದೀಪ್‌ಸಿಂಗ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಎಪಿಎನ್ ಪ್ರಾಪರ್ಟೀಸ್‌ನ ಮಾಲೀಕರಾದ ಎಪಿಎನ್ ನಾಗೇಶ್, ಅವಿನಾಶ್ ಹಾಗೂ ಸ್ನೇಹಿತರು ಹೃತ್ಪೂರ್ವಕವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ವಿ.ಶ್ರೀನಿವಾಸ ಪ್ರಸಾದ್ ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿಲ್ಲ

ಕಾಂಗ್ರೆಸ್ ಸೇರಿದ ಕೆಲವರಿಂದ ಗೊಂದಲ ಸೃಷ್ಟಿ; ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ



ಮೈಸೂರು,ಏ.24(ಪಿಎಂ)– ಚಾಮರಾಜನಗರ ಲೋಕಸಭಾ ಕ್ಷೇತ್ರದ ಹಾಲಿ ಬಿಜೆಪಿ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ತಾವು ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿರುವುದಾಗಿ ಎಲ್ಲಿಯೂ ಹೇಳಿಕೆ ಕೊಟ್ಟಿಲ್ಲ. ಆದರೆ ತಮ್ಮ ಅನುಕೂಲಕ್ಕಾಗಿ ಕಾಂಗ್ರೆಸ್ ಸೇರಿರುವ ಕೆಲವರು ದಲಿತ ಸಮುದಾಯದಲ್ಲಿ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಬಿಜೆಪಿ ಮೈಸೂರು ನಗರ ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ, ಈ ಕೆಲವರ ಮಾತಿಗೆ ದಲಿತ ಮತದಾರ ಬಂಧುಗಳ ಮನ್ನಣೆ ನೀಡಬಾರದು ಎಂದು ಮನವಿ ಮಾಡಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಲೋಕಸಭಾ ಚುನಾವಣೆಯಲ್ಲಿ ದಲಿತ ನಾಯಕರೂ ಆದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ನಡೆ ಸ್ಪಷ್ಟವಾಗಿದೆ. ಕಳೆದ ಬಾರಿ ಬಿಜೆಪಿಯಿಂದ ಸ್ಪರ್ಧೆ ಮಾಡಿ ಐದು ವರ್ಷಗಳ ಕಾಲ ಅವರು ಸಂಸದರಾಗಿದ್ದಾರೆ. ಅವರು ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಣೆ ಮಾಡಿದ್ದು, ಕಾಂಗ್ರೆಸ್ ಬೆಂಬಲಿಸುವುದಾಗಿ ಅವರು ಹೇಳಿಲ್ಲ ಎಂದರು. ಆದರೆ ಈ ನಡುವೆ ಕಾಂಗ್ರೆಸ್ ಸೇರ್ಪಡೆಯಾಗಿರುವ ಅವರು ಸಹೋದರ ಮತ್ತು ಕೆಲವರು ದಲಿತರಲ್ಲಿ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ಶ್ರೀನಿವಾಸ ಪ್ರಸಾದ್ ಹಾಗೂ ಇವರಿಗೆ ರಾಜಕೀಯವಾಗಿ ಯಾವುದೇ ನಿಕಟ ಸಂಪರ್ಕ ಕೂಡ ಇಲ್ಲ. 2001ರಲ್ಲಿ ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿ ಬಳಗ ಕಟ್ಟಿದ ಸಂದರ್ಭದಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಶೈಲೇಂದ್ರ ಆದ ನಾನು. ಆಗ ಇವರು ಯಾರೂ ಇರಲಿಲ್ಲ. ಇವರು ಈಗ ಶ್ರೀನಿವಾಸ ಪ್ರಸಾದ್ ಹೆಸರು ದುರುಪಯೋಗ ಮಾಡಿಕೊಳ್ಳುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ, ಚಾಮರಾಜನಗರ, ಮಂಡ್ಯ, ಹಾಸನ ಲೋಕಸಭಾ ಕ್ಷೇತ್ರಗಳಲ್ಲಿ ಯಾವುದೇ ಕಾರಣಕ್ಕೂ ಇವರ ಹೇಳಿಕೆಗಳಿಗೆ ದಲಿತ ಸಮುದಾಯ ಮನ್ನಣೆ ನೀಡಬಾರದು. ಶ್ರೀನಿವಾಸ ಪ್ರಸಾದ್ ಅವರು ಯಾವುದೇ ಪಕ್ಷಕ್ಕೆ ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿರುವುದಾಗಿ ಎಲ್ಲಿಯೂ ಹೇಳಿಕೆ ಕೊಟ್ಟಿಲ್ಲ. ಕಾಂಗ್ರೆಸ್‌ಗೆ ಅವರು ಬೆಂಬಲ ನೀಡುವುದೂ ಇಲ್ಲ. ಏಕೆಂದರೆ ಕಾಂಗ್ರೆಸ್ ಪಕ್ಷ ಅವರನ್ನು ನಡೆಸಿಕೊಂಡ ರೀತಿ ನಿಜಕ್ಕೂ ಬೇಸರ ತರುತ್ತದೆ ಎಂದು ಹೇಳಿದರು.

ಕಂದಾಯ ಸಚಿವರಾಗಿದ್ದ ಅವರನ್ನು ಏಕಾಏಕಿ ಕೈಬಿಡಲಾಯಿತು. ಅವರನ್ನು ರಾಜಕೀಯವಾಗಿ ಮುಗಿಸಬೇಕೆಂಬ ಕುತಂತ್ರ ಮಾಡಲಾಯಿತು. ಹೀಗಿರುವಾಗ ಅವರು ಕಾಂಗ್ರೆಸ್‌ಗೆ ಬೆಂಬಲ ಸೂಚಿಸಲು ಸಾಧ್ಯವಿಲ್ಲ. ಪ್ರಸಾದ್ ಅವರ ಸಹೋದರ ವಿ.ರಾಮಸ್ವಾಮಿ, ರಾಮಸ್ವಾಮಿ ಪುತ್ರ ಭರತ್‌ರಾಮಸ್ವಾಮಿ ಮತ್ತು ಶಿವಕುಮಾರ್ ಇವರ್ಯಾರು ಪ್ರಸಾದ್ ಅಭಿಮಾನಿ ಬಳಗದ ಪದಾಧಿಕಾರಿಗಳಲ್ಲ. ಕಾಂಗ್ರೆಸ್ ಸೇರ್ಪಡೆಯಾದ ಇವರ ಮಾತಿಗೆ ದಲಿತ ಸಮುದಾಯ ಕಿವಿಗೊಡಬಾರದು ಎಂದು ಮನವಿ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಸಾದ್ ಅವರ ನಿವಾಸಕ್ಕೆ ಭೇಟಿ ನೀಡಿ ಅವರ ಆರೋಗ್ಯ ವಿಚಾರಿಸಿದ್ದಾರೆಯೇ ಹೊರತು ಅವರ ಬೆಂಬಲ ಕೇಳಲು ಹಾಗೂ ರಾಜಕೀಯ ಮಾತನಾಡಲು ಹೋಗಿಲ್ಲ ಎಂದು ಪ್ರತಿಪಾದಿಸಿದರು. ಈ ದೇಶ, ರಾಜ್ಯದ ಅಭಿವೃದ್ಧಿಗೆ ಮೋದಿಯವರು ಹಾಗೂ ಬಿಜೆಪಿಯನ್ನು ಬೆಂಬಲಿಸಬೇಕೆಂದು ದಲಿತ ಸಮುದಾಯದಲ್ಲಿ ಅವರು ಕೋರಿದರು. ನಗರ ಜಿಲ್ಲಾ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಮರಿಯಪ್ಪ, ಮೋರ್ಚಾದ ಮುಖಂಡರಾದ ಸ್ವಾಮಿ, ಮಹದೇವಸ್ವಾಮಿ, ನಿಂಗರಾಜು ಮತ್ತಿತರರು ಗೋಷ್ಠಿಯಲ್ಲಿದ್ದರು.

ಶ್ರೀನಿವಾಸಪ್ರಸಾದ್ ಆಸ್ಪತ್ರೆಗೆ ದಾಖಲು



ಮೈಸೂರು, ಏ. 24(ಆರ್‌ಕೆ)– ಅನಾರೋಗ್ಯದ ನಿಮಿತ್ತ ಚಾಮರಾಜನಗರ ಸಂಸದ ವಿ. ಶ್ರೀನಿವಾಸ ಪ್ರಸಾದ್ ಬೆಂಗಳೂರಿನ ಹಳೇ ಏರ್‌ಪೋರ್ಟ್ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕನ್ಸಲ್ಟೆಂಟ್ ಇಂಟೆನ್ಸಿವಿಸ್ಟ್ ಕ್ರಿಟಿಕಲ್ ಕೇರ್ ಮೆಡಿಸಿನ್‌ನ ಡಾ. ನರೇಂದ್ರ ಪ್ರಸಾದ್ ಅವರು ಪ್ರಸಾದ್ ಅವರಿಗೆ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡುತ್ತಿದ್ದಾರೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಇತ್ತೀಚೆಗೆ ಅವರು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದು ಬಿಡುಗಡೆಯಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ನಾಳೆ ಮತದಾನ: ಮೈಸೂರು ನಗರ, ಜಿಲ್ಲೆಯಾದ್ಯಂತ ಭಾರೀ ಭದ್ರತೆ

ಮೈಸೂರು, ಏ. 24(ಆರ್‌ಕೆ)– ಏಪ್ರಿಲ್ 26ರಂದು ನಡೆಯಲಿರುವ ಲೋಕಸಭಾ ಚುನಾವಣಾ ಮತದಾನ ಪ್ರಕ್ರಿಯೆಗೆ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಭಾರೀ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಮೈಸೂರು ನಗರ ವ್ಯಾಪ್ತಿಯಲ್ಲಿ ಅರೆಸೇನಾ ಪಡೆ ಸೇರಿದಂತೆ ಒಟ್ಟು 2,402 ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಮತದಾನ ಪ್ರಕ್ರಿಯೆಯಲ್ಲಿ ಭದ್ರತೆಗಾಗಿ ನಿಯೋಜಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ತಿಳಿಸಿದ್ದಾರೆ.

ನಗರದಾದ್ಯಂತ ಸ್ಥಾಪಿಸಿರುವ 2,202 ಮತಗಟ್ಟೆಗಳಲ್ಲಿ 41 ಅತೀ ಸೂಕ್ಷ್ಮ ಮತ್ತು 435 ಸೂಕ್ಷ್ಮ ಎಂದು ಗುರ್ತಿಸಲಾಗಿದ್ದು, ಮುಕ್ತ, ನ್ಯಾಯ ಸಮ್ಮತ ಹಾಗೂ ನಿರ್ಭೀತಿಯಿಂದ ಮತದಾನ ನಡೆಯಲು ವ್ಯಾಪಕ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ನಾಲ್ವರು ಎಸ್ಪಿ ಮಟ್ಟದ ಅಧಿಕಾರಿಗಳು, 12 ಎಎಸ್ಪಿಗಳು, 36 ಪೊಲೀಸ್ ಇನ್ಸ್‌ಪೆಕ್ಟರ್‌ಗಳು, 66 ಸಬ್ ಇನ್ಸ್‌ಪೆಕ್ಟರ್‌ಗಳು, 32 ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್‌ಗಳು, 1,419 ಹೆಡ್ ಕಾನ್‌ಸ್ಟೇಬಲ್‌ಗಳು ಮತ್ತು ಕಾನ್‌ಸ್ಟೇಬಲ್‌ಗಳು ಹಾಗೂ 350 ಹೋಂಗಾರ್ಡ್‌ಗಳನ್ನು ಭದ್ರತೆಗಾಗಿ ಮತಗಟ್ಟೆಗಳಿಗೆ ನಿಯೋಜಿಸಲಾಗಿದೆ ಎಂದು ಅವರು ತಿಳಿಸಿದರು.



ರಮೇಶ್

177 ಮಂದಿ ಅರೆಸೇನಾ ಪಡೆ ಸಿಬ್ಬಂದಿಯನ್ನೊಳಗೊಂಡ 2 ಸ್ಟ್ರೈಕಿಂಗ್ ಫೋರ್ಸ್, 120 ಕೆಎಸ್‌ಆರ್‌ಪಿ ಸಿಬ್ಬಂದಿ, 120 ಸಿಎಆರ್ ಮತ್ತು 66 ಕಮಾಂಡೋ ಪಡೆ ಸಿಬ್ಬಂದಿಯನ್ನು ಮೈಸೂರು ನಗರ ವ್ಯಾಪ್ತಿಯ ಮತಗಟ್ಟೆಗಳಿಗೆ ನಿಯೋಜಿಸಲಾಗಿದೆ ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ. ಮೈಸೂರು ನಗರಕ್ಕೆ ಸಂಪರ್ಕ ಕಲ್ಪಿಸುವ ರಾಜ್ಯ, ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಸ್ಥಾಪಿಸಿರುವ 45 ಚೆಕ್‌ಪೋಸ್ಟ್‌ಗಳಲ್ಲೂ ದಿನದ 24 ಗಂಟೆ ಕಾಲ 3 ಪಾಳಿಯಲ್ಲಿ ಪೊಲೀಸ್ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ರಮೇಶ್ ತಿಳಿಸಿದರು. ಮೈಸೂರು ಜಿಲ್ಲೆಯಾದ್ಯಂತ ಎಸ್ಪಿ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ ಭಾರೀ ಬಂದೋಬಸ್ತ್ ಮಾಡಲಾಗಿದೆ. ಓರ್ವ ಎಸ್ಪಿ, ಇಬ್ಬರು ಅಡಿಷನಲ್ ಎಸ್ಪಿ, 8 ಡಿವೈಎಸ್ಪಿಗಳು, 30 ಪೊಲೀಸ್ ಇನ್ಸ್‌ಪೆಕ್ಟರ್‌ಗಳು, 81 ಸಬ್ ಇನ್ಸ್‌ಪೆಕ್ಟರ್‌ಗಳು, 110 ಎಎಸ್‌ಐಗಳು, 431 ಹೆಡ್‌ಕಾನ್ ಸ್ಟೇಬಲ್‌ಗಳು, 1,186 ಕಾನ್‌ಸ್ಟೇಬಲ್‌ಗಳು, 125 ಕೆಎಸ್‌ಆರ್‌ಪಿ ಹಾಗೂ 320 ಪ್ಯಾರಾ ಮಿಲಿಟರಿ ಪಡೆಯ ಸಿಬ್ಬಂದಿ ಸೇರಿ 3,500 ಪೊಲೀಸರನ್ನು ಏಪ್ರಿಲ್ 26ರಂದು ನಡೆಯಲಿರುವ ಮತದಾನಕ್ಕೆ ಭದ್ರತೆಗಾಗಿ ನಿಯೋಜಿಸಲಾಗಿದೆ.

ನೇಹಾ ಕೊಲೆ ಆರೋಪಿ ಫಯಾಜ್ 6 ದಿನ ಸಿಐಡಿ ವಶಕ್ಕೆ

ಹುಬ್ಬಳ್ಳಿ, ಏ.24– ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ್ (23ವ) ಹತ್ಯೆ ಪ್ರಕರಣದ ಆರೋಪಿ ಫಯಾಜ್ ಬಾಬಾಸಾಹೇಬ್ ಖೊಂಡಾನಾಯಕ್ ನನ್ನು 6 ದಿನಗಳ ಕಾಲ ಸಿಐಡಿ ತನಿಖೆಗೆ ಒಪ್ಪಿಸಲಾಗಿದೆ.

ಹತ್ಯೆ ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರ ಸಿಐಡಿಗೆ ಒಪ್ಪಿಸಿ ಆದೇಶ ಹೊರಡಿಸಿತ್ತು. ಅದರಂತೆ ಸಿಐಡಿಯ ಎಸ್ಪಿ ವೆಂಕಟೇಶ್ ನೇತೃತ್ವದಲ್ಲಿ ನಿನ್ನೆ ತನಿಖೆ ಆರಂಭವಾಗಿತ್ತು. ಹೆಚ್ಚಿನ ಮಾಹಿತಿ ಸಂಗ್ರಹಕ್ಕೆ ಆರೋಪಿಯನ್ನು ತಮ್ಮ ವಶಕ್ಕೆ ನೀಡುವಂತೆ ಇಲ್ಲಿನ ಒಂದನೇ ಜೆಎಂಎಫ್‌ಸಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಅರ್ಜಿ ಪುರಸ್ಕರಿಸಿದ ನ್ಯಾಯಾಲಯ ಆರು ದಿನ ಆರೋಪಿಯನ್ನು ಸಿಐಡಿಗೆ ಒಪ್ಪಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು